ರಾಜ್ಯದ ಒಂಭತ್ತನೆ ಮುಖ್ಯಮಂತ್ರಿಯಾಗಿ ಆಯ್ಕೆಯಾದರು. 1989ರಲ್ಲಿ ಲೋಕ-ಸಭೆ ನಡೆಸಿದ ಚುನಾವಣೆಯಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರವನ್ನು ಪ್ರತಿನಿಧಿಸಿದ್ದರು.

ಶ್ರೀಯುತರು ಜನಪ್ರಿಯ ಹಾಗೂ ಧೀಮಂತ ರಾಜಕಾರಣಿಯಾಗಿದ್ದರು. ಶ್ರೀಯುತರ ನಿಧನದಿಂದ ರಾಜ್ಯಕ್ಕೆ ತುಂಬಲಾರದ ನಷ್ಟವುಂಟಾಗಿದೆ.

2. ಸ್ವತಂತ್ರ ಭಾರತದ ರಕ್ಷಣಾ ಪಡೆಯ ಪ್ರಪ್ರಥಮ ಭಾರತೀಯ ಮಹಾದಂಡ ನಾಯಕ ಫೀಲ್ಡ್ ಮಾರ್ಷಲ್ ಕೊಡಂದೇರ ಮಾದಪ್ಪ ಕಾರಿಯಪ್ಪನವರು 15ನೇ ಮೇ 1993ರಂದು ಬೆಂಗಳೂರು ನಗರದ ವಾಯು ಪಡೆಯ ಕಮಾಂಡ್ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದರು.

ಕನ್ನಡ ನೆಲದ, ಕಾವೇರಿಯ ಪುತ್ರ ಕಾರಿಯಪ್ಪನವರು ಸ್ವಾತಂತ್ರ್ಯೋತ್ತರ ಭಾರತದ ಮಿಲಿಟರಿ ಇತಿಹಾಸದಲ್ಲಿ ಕರಗದ ಅಧ್ಯಾಯ, ಸ್ವಾತಂತ್ರ್ಯ ಪ್ರಾಪ್ತವಾದ ನಂತರ 1949ರಲ್ಲಿ ಸರ್ ರಾಯ್ ಬುಚರ್ ಅವರ ಉತ್ತರಾಧಿಕಾರಿಯಾಗಿ ಭಾರತೀಯ ಸೇನೆಯ ಪ್ರಥಮ ಪ್ರಧಾನ ದಂಡನಾಯಕರಾಗಿ ಅಧಿಕಾರ ವಹಿಸಿಕೊಂಡ ಕಾರ್ಯಪ್ಪನವರು ಸುಮಾರು ಮೂರು ದಶಕಗಳ ಕಾಲ ಮಿಲಟರಿಯಲ್ಲಿ ಮಾಡಿದ ಕಾಯಕ ಹಲವಾರು ಪ್ರಥಮಗಳಿಂದ ಕೂಡಿತ್ತು. ಬ್ರಿಗೇಡಿಯರ್ ಪದವಿಗೇರಿದ ಪ್ರಥಮ ಭಾರತೀಯ ಸೈನ್ಯಾಧಿಕಾರಿಯಾಗಿ, ನಂತರ ಫೀಲ್ಡ್ ಮಾರ್ಷಲ್ ಆದ ಕಾರ್ಯಪ್ಪನವರು ದೇಶ ವಿಭಜನೆ ಕಾಲದಲ್ಲಿ ಸೇನಾ ಪುನರುತ್ಥಾನ ಸಮಿತಿ ಸದಸ್ಯರಾಗಿ ಹಾಗೂ ಪ್ರಥಮ ಪ್ರಧಾನ ದಂಡನಾಯಕರಾಗಿ ಭಾರತದ ಸೇನೆಯನ್ನು ಆಧುನೀಕರಣಗೊಳಿಸುವುದರಲ್ಲಿ ಅವಿಸ್ಮರಣೀಯವಾದ ಪಾತ್ರವನ್ನು ವಹಿಸಿದ್ದರು. ಸೇನೆಯಿಂದ ನಿವೃತ್ತಿಯಾದ ನಂತರ ಅಂದಿನ ಪ್ರಧಾನಿ ಶ್ರೀ ಜವಹರಲಾಲ್ ನೆಹರು ಅವರು, ಕಾರ್ಯಪ್ಪನವರ ಮುತ್ಸದ್ಧಿತನ ಮತ್ತು ಶಿಸ್ತನ್ನು ಮೆಚ್ಚಿ ಆಸ್ಟ್ರೇಲಿಯಾದಲ್ಲಿ ಭಾರತದ ರಾಯಭಾರಿಯಾಗಿ ನೇಮಕ ಮಾಡಿದರು. ಕಾರ್ಯಪ್ಪನವರ ಶಿಸ್ತು, ಸಮಯಪ್ರಜ್ಞೆ, ಸತ್ಯನಿಷ್ಠೆ ನಿಜಕ್ಕೂ ಕಿರಿಯರಿಗೆ ಅನುಕರಣೀಯ ಮತ್ತು ಆದರ್ಶಪ್ರಾಯವಾಗಿತ್ತೆಂದು ಭಾವಿಸುತ್ತೇನೆ.

3. ಬೈಂದೂರು ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಹಿರಿಯ ಸಹಕಾರಿ ಕ್ಷೇತ್ರದ ಧುರೀಣ ಶ್ರೀ ಜಿ.ಎಸ್ ಆಚಾರ್‌ರವರು 24ನೇ ಜೂನ್ 1993 ರಂದು ಹೃದಯಾಘಾತದಿಂದ ನಿಧನರಾದರು.

8 ಮತ್ತು 9ನೇ ವಿಧಾನಸಭೆಯ ಸದಸ್ಯರಾಗಿ ಬೈಂದೂರು ಕ್ಷೇತ್ರದಿಂದ ಆಯ್ಕೆಯಾದ ಶ್ರೀ ಆಚಾರ್ ಅವರು ಜನಪ್ರಿಯ ಶಾಸಕರಾಗಿದ್ದರಲ್ಲದೆ, ಇತ್ತೀಚೆಗೆ ರಾಜ್ಯದ ಅಪೆಕ್ಸ್ ಬ್ಯಾಂಕ್‌ನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ. ಶ್ರೀಯುತರು ಡಿ.ಸಿ.ಸಿ ಬ್ಯಾಂಕ್, ಗೃಹ ನಿರ್ಮಾಣ ಮಂಡಳಿ ಮತ್ತಿತರ ಸಹಕಾರಿ ಸಂಘ ಸಂಸ್ಥೆಗಳ ಅಧ್ಯಕ್ಷರಾಗಿ ರಾಷ್ಟ್ರೀಯ ಗೃಹ ಮಂಡಳಿಯ ನಿರ್ದೇಶಕರಾಗಿ, ಮಂಗಳೂರು ಜಿಲ್ಲೆಯ ಸ್ಕೌಟ್ ಮತ್ತು ಗೈಡ್ಸ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ.

4. ಪಶ್ಚಿಮ ಬಂಗಾಳದ ರಾಜ್ಯಪಾಲರಾದ ಪ್ರೊ. ನೂರುಲ್ ಹಸನ್‌ರವರು 12ನೇ ಜುಲೈ 1993 ರಂದು ಕಲ್ಕತ್ತಾದಲ್ಲಿ ನಿಧನರಾದರು.

ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಎಂ.ಎ ಪದವಿಯನ್ನು ಪಡೆದ ಇವರು 1970ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಮಂತ್ರಿಮಂಡಲದಲ್ಲಿ ಉಪಮಂತ್ರಿಯಾಗಿ, 1980ರಲ್ಲಿ ಅಮೇರಿಕಾದಲ್ಲಿ ಭಾರತದ ರಾಯಭಾರಿಯಾಗಿ ಕಾರ್ಯನಿರ್ವಹಿಸಿರುತ್ತಾರೆ. ರಾಜಕೀಯ ಚಿಂತಕರು ಮತ್ತು ಉತ್ತಮ ಆಡಳಿತಗಾರರಾಗಿ ಬಹಳಷ್ಟು ಹೆಸರನ್ನು ಇವರು ಸಂಪಾದಿಸಿದ್ದಾರೆ.

5. ಪದ್ಮಶ್ರೀ ಪ್ರಶಸ್ತಿ ವಿಜೇತ ಅನುಪಮ ಕವಿ, ಸೃಜನಶೀಲ, ಶ್ರೇಷ್ಠ ಭಾಷಾ ಶಾಸ್ತ್ರಜ್ಞರಾದ ಡಾ:ಎ.ಕೆ. ರಾಮಾನುಜನ್ ಅವರು 13ನೇ ಜುಲೈ 1993 ರಂದು ಚಿಕಾಗೋ ನಗರದಲ್ಲಿ ನಿಧನರಾದರು.

ಮೈಸೂರಿನಲ್ಲಿ ಜನಿಸಿದ ಶ್ರೀಯುತರು ಕವಿ ಗೋಪಾಲಕೃಷ್ಣ ಅಡಿಗರ ನಂತರ ಕನ್ನಡದಲ್ಲಿ ನವ್ಯ ಪರಂಪರೆಯ ಸಾಹಿತ್ಯಕ್ಕೆ ತಿರುವು ಕೊಟ್ಟರು. ಅವರ ಪ್ರಥಮ ಕೃತಿ '' ಗಾದೆಗಳು'' 'ಮತ್ತೊಬ್ಬನ ಆತ್ಮ ಚರಿತ್ರೆ' 'ಹಳದಿ ಮೀನು' ಅವರ ಇತರೆ ಪ್ರಸಿದ್ಧ ಕೃತಿಗಳು. ಬಸವೇಶ್ವರರು, ಅಲ್ಲಮಪ್ರಭು ಅಕ್ಕಮಹಾದೇವಿ, ದೇವರ ದಾಸಿಮಯ್ಯ ಮೊದಲಾದ ಶರಣರ ವಚನಗಳನ್ನು 'ದಿ ಕಿಂಗ್ ಆಫ್ ಶಿಫ್' ಎಂಬ ಹೆಸರಿನಲ್ಲಿ ಭಾಷಾಂತರಿಸಿ ಪ್ರಸಿದ್ಧಿಯನ್ನು ಪಡೆದರು.

ಹೃದಯಸ್ಪರ್ಶಿ ಬರಹಕ್ಕೆ ಶ್ರೀಯುತರ ಕೃತಿಗಳು ಹೆಸರುವಾಸಿಯಾಗಿವೆ. 1976ರಲ್ಲಿ ಅವರಿಗೆ ಪದ್ಮಶ್ರೀ ನೀಡಿ ಭಾರತ ಸರ್ಕಾರವು ಗೌರವ ನೀಡಿತು. 1982ರಲ್ಲಿ ಅಮೇರಿಕಾದ ಮಹತ್ವಪೂರ್ಣವಾದ ''ಮ್ಯಾಕ್ ಆರ್ಥರ್'' ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಶ್ರೀಯುತರು ಸಾಹಿತ್ಯ ಲೋಕಕ್ಕೆ ಮರೆಯಲಾಗದ ದೀಪವಾಗಿದ್ದಾರೆ.

6. ಮೈಸೂರು ವಿಧಾನ ಸಭೆಯ ಸದಸ್ಯರಾಗಿದ್ದಂಥ ಮತ್ತು ಸ್ವಾತಂತ್ರ್ಯ ಹೋರಾಟಗಾರರು ಆದಂಥ ಶ್ರೀ ಎ.ಜಿ. ಚುಂಚೇಗೌಡರವರು 30ನೇ ಜೂನ್ 1993ರಂದು ಸ್ವಗ್ರಾಮವಾದ ಅರಕೆರೆಯಲ್ಲಿ ನಿಧನರಾದರು.

ಶ್ರೀಯುತರು ಎರಡನೇ ಮೈಸೂರು ವಿಧಾನ ಸಭೆಗೆ ಶ್ರೀರಂಗಪಟ್ಟಣ ಕ್ಷೇತ್ರದಿಂದ ಚುನಾಯಿತರಾಗಿದ್ದರು. ಸರ್ ಎಂ.ವಿಶ್ವೇಶ್ವರಯ್ಯ ಕೈಗಾರಿಕಾ ಯೋಜನೆಯ ಹೋಬಳಿ ಅಡವೈಸರಿ ಸಮಿತಿಯ ಅಧ್ಯಕ್ಷರಾಗಿ, ಒಕ್ಕಲಿಗರ ಹಾಸ್ಟೆಲ್‌ನ ಕಾರ್ಯದರ್ಶಿಯಾಗಿ, ಮಂಡ್ಯ ಜಿಲ್ಲೆಯ ಮಿಲ್ ಮಾಲೀಕರುಗಳ ಸಂಘದ ಅಧ್ಯಕ್ಷರಾಗಿ ಹಾಗೂ ಮತ್ತಿತರ ಸಂಘದ ಸಂಸ್ಥೆಗಳಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿರುತ್ತಾರೆ.

7. ಮಾಜಿ ಶಾಸಕರಾದ ಶ್ರೀ ಕೆ.ಹೆಚ್.ರಾಮಕೃಷ್ಣಯ್ಯನವರು ಎರಡನೇ ಜೂನ್ 1993ರಂದು ಹೃದಯಾಘಾತದಿಂದ ನಿಧನರಾದರು. ಐದನೆಯ ಮತ್ತು ಆರನೆಯ ವಿಧಾನ ಸಭೆಗೆ ತುಮಕೂರು ಜಿಲ್ಲೆಯ ತುರುವೇಕೆರೆ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ತುರುವೇಕೆರೆ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ತುಮಕೂರಿನ ಡಿ.ಸಿ.ಸಿ ಬ್ಯಾಂಕ್‌ನ ನಿರ್ದೇಶಕರಾಗಿ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನ ನಿರ್ದೇಶಕರಾಗಿ ಗಣನೀಯವಾಗಿ ಸೇವೆ ಸಲ್ಲಿಸಿರುತ್ತಾರೆ.

8. ಮಾಜಿ ಶಾಸಕರಾದ ಶ್ರೀ ವಿರುಪಾಕ್ಷಪ್ಪ ಮಲ್ಲಪ್ಪ ಘಾಡಿ ಇವರು ಇಪ್ಪತ್ತ ನಾಲ್ಕನೇ ಏಪ್ರಿಲ್, 1993ರಂದು ಹೃದಯಾಘಾತದಿಂದ ನಿಧನರಾದರು. ಶ್ರೀಯುತರು ಆರನೆಯ ಮತ್ತು ಎಂಟನೆಯ ವಿಧಾನ ಸಭೆಗೆ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಕ್ಷೇತ್ರದಿಂದ ಚುನಾಯಿತರಾಗಿದ್ದರು. ಶಿಕ್ಷಣ ರಂಗದಿಂದ ರಾಜಕೀಯಕ್ಕೆ ಬಂದ ದಿವಂಗತ ಘಾಡಿಯವರು ದೀನದಲಿತರ ಶಿಕ್ಷಣ ಮತ್ತು ಪುರೋಭಿವೃದ್ಧಿಗಾಗಿ ಅವರ ಸೇವಾವಧಿಯಲ್ಲಿ ಸಾಕಷ್ಟು ಸೇವೆಯನ್ನು ಸಲ್ಲಿಸಿರುತ್ತಾರೆ. ಉತ್ತರ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿದ್ದರು ಮತ್ತು ಸಹಕಾರಿ ಸಂಘಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಾಮಾಜಿಕ ಸೇವೆಯನ್ನು ಸಲ್ಲಿಸಿರುತ್ತಾರೆ.

9. ಸ್ವಾತಂತ್ರ ಹೋರಾಟಗಾರರು ಮತ್ತು ಮಾಜಿ ಶಾಸಕರಾದ ಶ್ರೀ ಡಿ.ಎಂ.ಗೋವಿಂದ ರಾಜುರವರು ಇಪ್ಪತ್ತಾರನೆಯ ಏಪ್ರಿಲ್ 1993ರಂದು ನಿಧನರಾದರು.

ಶ್ರೀಯುತರು 1949ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು ಮತ್ತು ಮೊದಲನೇ ವಿಧಾನ ಸಭೆಗೆ ನೆಲಮಂಗಲ ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾಗಿದ್ದರು. ನೆಲಮಂಗಲ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಮತ್ತು ಸಾಮಾಜಿಕ ಸಂಘ ಸಂಸ್ಥೆಗಳಲ್ಲಿ ಗಣನೀಯವಾದ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀ ಎಂ. ವೀರಪ್ಪಮೊಯಿಲಿ(ಮುಖ್ಯಮಂತ್ರಿಯವರು) :- ಸನ್ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದ ನಂತರ ನಾವುಗಳು ಮತ್ತೆ ಇಂದು ಸೇರುತ್ತಿದ್ದೇವೆ. ಈ ಸಂದರ್ಭದಲ್ಲಿ ನಾವು ರಾಷ್ಟ್ರದ ಮತ್ತು ರಾಜ್ಯದ ಕೆಲವು ಉತ್ತಮ ವ್ಯಕ್ತಿಗಳನ್ನು ಕಳೆದುಕೊಂಡು ಅತ್ಯಂತ ದುಃಖದ ಸನ್ನಿವೇಶದಲ್ಲಿ ಸೇರುತ್ತಿದ್ದೇವೆ. ಅಂಥ ವ್ಯಕ್ತಿಗಳಲ್ಲಿ ನಮ್ಮ ಮಾಜಿ ಮುಖ್ಯ ಮಂತ್ರಿಗಳಾಗಿದ್ದಂಥ ಶ್ರೀಮಾನ್ ಆರ್. ಗುಂಡೂರಾವ್‌ರವರು ಒಬ್ಬರು. ಅವರು ನಮ್ಮೆಲ್ಲರ ಆತ್ಮೀಯ ಗೆಳೆಯರಾಗಿದ್ದರು. ವಿಶೇಷವಾಗಿ ನನ್ನ ಸನೀಹದಲ್ಲಿ ಸದಾ ಇದ್ದಂಥ ಶ್ರೀಮಾನ್ ಗುಂಡೂರಾವ್‌ರವರು ಮರಣ ಹೊಂದಿದ್ದಾರೆ ಎಂಬುದನ್ನು ನಾನು ನಂಬಲು ಸಾಧ್ಯವಾಗಲಿಲ್ಲ. ಬಹುಶಃ ಒಂದೆರಡು ದಿನಗಳ ಹಿಂದೆ ನಾನು ದೂರವಾಣಿಯ ಮುಖಾಂತರ ಶ್ರೀಮಾನ್ ಗುಂಡೂರಾವ್‌ರವರನ್ನು ಸಂಪರ್ಕಿಸಿದಾಗ, ಅವರು ನಾನು26ನೇ ತಾರೀಖು ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗುತ್ತಿದ್ದೇನೆ, ನಾನು ಸಂಪೂರ್ಣವಾಗಿ ಗುಣಮುಖನಾಗುತ್ತೇನೆ, ಕೆಲವು ದಿನಗಳ ಕಾಲ ವಿಶ್ರಾಂತಿಯನ್ನು ಪಡೆದು ನಾನು ಭಾರತಕ್ಕೆ, ಕರ್ನಾಟಕಕ್ಕೆ ಹಿಂದಿರುಗಿ ಬರುತ್ತೇನೆ ಎಂದು ಬಹಳ ಆತ್ಮವಿಶ್ವಾಸದಿಂದ ಮಾತನಾಡಿದರು. ನಾವೆಲ್ಲಾ ಅವರು 26ನೇ ತಾರೀಖು ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿ ಕೆಲವು ದಿನಗಳ ಕಾಲ ವಿಶ್ರಾಂತಿಯನ್ನು ಪಡೆದು ಮತ್ತೆ ಈ ರಾಷ್ಟ್ರದ ಮತ್ತು ರಾಜ್ಯದ ಸಾಮಾಜಿಕ ಕ್ಷೇತ್ರದಲ್ಲಿ ತಮ್ಮದೇ ಆದಂಥ ಶೈಲಿ, ದಿಟ್ಟನಿಲುವು ಮತ್ತು ವರ್ಚಸ್ಸಿನಿಂದ ಕ್ರಿಯಾಶೀಲರಾಗಿ ಕಾರ್ಯಕ್ರಮವನ್ನು ಪ್ರಾರಂಭ ಮಾಡುತ್ತಾರೆಂದು ನಿರೀಕ್ಷೆಯಿಂದ ಕಾಯುತ್ತಿರುವಾಗ, ಅವರ ಮರಣದ ವರ್ತಮಾನ ಬಂತು, ನಾವೆಲ್ಲರೂ ಸಹ ಬಹಳ ದಿಗ್ಭ್ರಮೆಗೊಂಡೆವು; ಕರ್ನಾಟಕ ರಾಜ್ಯದ ಎಲ್ಲಾ ಜನರಿಗೂ ದಿಗ್ಭ್ರಮೆಯಾಯಿತು. ಆ ಪರಿಸ್ಥಿತಿಯಲ್ಲಿ ಅವರು ಅಸ್ತಂಗತವಾಗಿದ್ದರು. ಸನ್ಮಾನ್ಯ ಗುಂಡೂರಾವ್‌ರವರು, ಶ್ರೀಮತಿ ಮನೋರಮಾ ಮಧ್ವರಾಜ್‌ರವರು ಮತ್ತು ನಾನು ಒಟ್ಟಿಗೆಯೇ ಈ ರಾಜ್ಯದ ಸಚಿವರಾಗಿ ಪ್ರಮಾಣವಚನವನ್ನು ಸ್ವೀಕಾರ ಮಾಡಿದ್ದೆವು. ಆದರೆ ಮಾನ್ಯ ಗುಂಡೂರಾವ್‌ರವರು ನಮಗಿಂತ ಮೊದಲೇ ಸಂಜಯಗಾಂಧಿಯವರ ನಾಯಕತ್ವದಲ್ಲಿನ ಯುವ ಕಾಂಗ್ರೆಸ್‌ನಲ್ಲಿ ಅಧ್ಯಕ್ಷರಾಗಿ ಅತ್ಯಂತ ಲವಲವಿಕೆಯಿಂದ ಕಾರ್ಯವನ್ನು ನಿರ್ವಹಿಸಿದ್ದರು. ಆ ಸಂದರ್ಭದಲ್ಲಿ ಸನ್ಮಾನ್ಯ ಡಿ.ಬಿ. ಚಂದ್ರೇಗೌಡರೂ ಸಹ ಯುವ ಕಾಂಗ್ರೆಸ್‌ನಲ್ಲಿ ಇದ್ದರು ಎಂಬುದನ್ನು ಇಲ್ಲಿ ನೆನೆಯಬಹುದಾಗಿದೆ.ಸನ್ಮಾನ್ಯ ಗುಂಡೂರಾವ್‌ರವರು ಇಡೀ ರಾಜ್ಯದಲ್ಲಿಯೇ ಅತ್ಯಂತ ಕ್ರಿಯಾಶೀಲತೆಯಿಂದ, ವರ್ಚಸ್ಸಿನಿಂದ ಯುವ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆಂದು ನಾವೆಲ್ಲರೂ ಸಹ ತಿಳಿದುಕೊಂಡಿದ್ದೇವೆ.

ಮಾನ್ಯ ಗುಂಡೂರಾವ್‌ರವರು ಮುಖ್ಯಮಂತ್ರಿಗಳಾಗುವ ಮೊದಲು ಮಾನ್ಯ ವೀರೇಂದ್ರ ಪಾಟೀಲ್‌ರವರು ಅತ್ಯಂತ ಕಿರಿಯ ವಯಸ್ಸಿನ ಮುಖ್ಯಮಂತ್ರಿಗಳೆಂದು ದಾಖಲೆ ಇತ್ತು. ಆದರೆ ಮಾನ್ಯ ಗುಂಡೂರಾವ್‌ರವರು ತಮ್ಮ 43ನೇ ವಯಸ್ಸಿನಲ್ಲಿಯೇ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯ

ಪದವಿಯನ್ನು ಪಡೆದು, ಅತ್ಯಂತ ಕಿರಿಯ ವಯಸ್ಸಿನ ಮುಖ್ಯಮಂತ್ರಿಯಾಗಿ ಹಿಂದೆ ಇದ್ದ ದಾಖಲೆಯನ್ನುಮುರಿದರು. ಅವರದ್ದು ಅಬ್ಬರ ಇತ್ತು. ಲವಲವಿಕೆ ಇತ್ತು ಆದರೆ ಅವರಲ್ಲಿ ಒಂದು ವಿಶೇಷವಾದ ಪ್ರಾಮಾಣಿಕತನ ಇತ್ತು. ಆದ ಪ್ರಾಮಾಣಿಕತನದ ಆಡಳಿತವನ್ನು ಅವರು ಕರ್ನಾಟಕ ರಾಜ್ಯದ ಜನರಿಗೆ ಕೊಟ್ಟಿದ್ದರು ಎಂದರೆ ಅತಿಶಯೋಕ್ತಿಯಾಗಲಾರದು. ಕಟ್ಟುನಿಟ್ಟಿನ ಆಡಳಿತಗಾರರಾಗಿದ್ದರು ಅವರು. ವಿವಾದಾಸ್ಪದವಾದಂತಹ ಮುಖಂಡರು. ನಾನು ಆ ಒಂದು ಸಂದರ್ಭದಲ್ಲಿ ಹಣಕಾಸು ಸಚಿವನಾಗಿ ಕೆಲಸ ಮಾಡಿದ್ದೆ. ಹಾಗೆಯೇ ಅವರ ಆಡಳಿತದಲ್ಲಿ ಚುರುಕಿತ್ತು. ಆಡಳಿತದಲ್ಲಿ ಕ್ರಿಯಾಶೀಲತೆ ಇತ್ತು, ಆಡಳಿತದಲ್ಲಿ ಪ್ರಾಮಾಣಿಕತೆ ಕಟ್ಟುನಿಟ್ಟಾಗಿ ಇತ್ತು. ಕಟ್ಟುನಿಟ್ಟಿನ ಆಡಳಿತ ಸಂಸ್ಕೃತಿಯನ್ನು ಕರ್ನಾಟಕ ರಾಜ್ಯದಲ್ಲಿ ಅವರು ಸ್ಪಷ್ಟವಾಗಿ ಕೊಟ್ಟಿದ್ದಾರೆಂದು ಹೇಳಿದರೆ ಅದು ತಪ್ಪಾಗಲಾರದು. ಇದನ್ನು ಕಂಡು ಅತ್ಯಂತ ಸನಿಹದಲ್ಲಿರತಕ್ಕಂತಹ ನಾನು ಅಭಿಮಾನಪಟ್ಟೆ. ಅನಂತರ ಗುಂಡೂರಾಯರು ಪಾರ್ಲಿಮೆಂಟಿಗೆ ಹೋದರು. ಅವರು ಅಧಿಕಾರದಲ್ಲಿರಲಿ ಇಲ್ಲದಿರಲಿ ಒಂದು ವಿಶೇಷವಾದ ಪರಿಸ್ಥಿತಿ ಏನೆಂದರೆ ಅವರ ಆ ಒಂದು ವ್ಯಕ್ತಿತ್ವ ಮತ್ತು ಅವರ ವರ್ಚಸ್ಸು ಎಂದೂ ಕೂಡ ಕಡಿಮೆಯಾಗಿರಲಿಲ್ಲ. ತಮ್ಮದೇ ಆದಂತಹ ವಿಶೇಷವಾದಂತಹ ಅಪಾರವಾದ ಅಭಿಮಾನಿಗಳ ತಂಡವನ್ನು ಅವರು ಹೊಂದಿದ್ದರು ಎಲ್ಲೇ ಹೋದರೂ ಕೂಡ ಅವರು ಅಭಿಮಾನಿಗಳನ್ನು ಸಂಪಾದನೆ ಮಾಡಿದ್ದರು. ಅದು ಕರ್ನಾಟಕದಲ್ಲಿನ ಯಾವುದೇ ಜಿಲ್ಲೆಯಲ್ಲಿ ಇರಬಹುದು ಅಥವಾ ದೆಹಲಿಯಲ್ಲಿ ಇರಬಹುದು. ದೆಹಲಿಯಲ್ಲೂ ಕೂಡ ಅವರು ವಿಶೇಷವಾದಂತಹ ಆಕರ್ಷಣೀಯ ವ್ಯಕ್ತಿಯಾಗಿದ್ದರು. ತನ್ನದೇ ಆದಂತಹ ಸ್ವಂತ ವ್ಯಕ್ತಿತ್ವದಿಂದ ಜನತೆಯನ್ನು ಆಕರ್ಷಣೆ ಮಾಡತಕ್ಕಂತಹ ಒಂದು ತಾದ್ಯಾತ್ಮಕತೆಯಿಂದ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಉತ್ತಮ ಮುಖಂಡರಾಗಿದ್ದರು. ಅವರಿಗೆ ಇನ್ನೂ ಸಾಯತಕ್ಕಂತಹ ವಯಸ್ಸಾಗಿರಲಿಲ್ಲ. 56 ವರ್ಷ ಅಂದರೆ ಅದು ಏನೂ ಅಲ್ಲ. ಅವರು ತಮ್ಮ ಗೆಳೆಯರೆಂದರೆ ಒಂದು ರೀತಿಯಲ್ಲಿ ಯಾವ ತ್ಯಾಗಕ್ಕೂ ಸಿದ್ಧವಾಗುವಂತಹ ವ್ಯಕ್ತಿತ್ವವನ್ನು ಹೊಂದಿದ್ದರು. ಅಂತಹ ಒಂದು ನಿಸ್ವಾರ್ಥತೆ ಗುಂಡೂರಾಯರಲ್ಲಿ ಯಾವಾಗಲೂ ಇತ್ತು. ಅಂತಹ ಒಬ್ಬ ಪ್ರಮುಖವಾದಂತಹ ಕ್ರಿಯಾಶೀಲವಾದಂತಹ ವಿಶೇಷವಾದ ಆಕರ್ಷಣೆಯ ವರ್ಚಸ್ಸಿನ ಮುಖಂಡರನ್ನು ಕಳೆದುಕೊಂಡು ನಮ್ಮ ಪಕ್ಷ ಬಡವಾಗಿದೆ. ಇಂತಹ ಒಬ್ಬ ಕ್ರಿಯಾಶೀಲವಾದಂತಹ ಆಡಳಿತಗಾರನನ್ನು ಕಳೆದುಕೊಂಡು ನಮ್ಮ ರಾಜ್ಯವೂ ಕೂಡ ದೊಡ್ಡ ನಷ್ಟ ಅನುಭವಿಸಿದೆ. ನಮ್ಮ ರಾಷ್ಟ್ರದಲ್ಲಿ ಒಬ್ಬ ಕ್ರಿಯಾಶೀಲ ವ್ಯಕ್ತಿ ಕಣ್ಮರೆಯಾಗಿದ್ದಾರೆ. ವಿಶೇಷವಾದ ನಷ್ಟ ನಮ್ಮ ಪಕ್ಷಕ್ಕೆ, ರಾಷ್ಟ್ರದ ಮಟ್ಟಿಗೆ ಆಗಿದೆ ಎಂದು ನಾನು ಬಹಳ ವ್ಯಸನದಿಂದ, ಖೇದದಿಂದ ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಶ್ರೀ ಆರ್. ಗುಂಡೂರಾಯರು ತೀರಿಕೊಂಡಿದ್ದಾರೆ ಎಂದರೆ ನಂಬಲಿಕ್ಕೇ ಆಗುವುದಿಲ್ಲ. ಅವರಲ್ಲಿ ಯಾವಾಗಲೂ ಇರತಕ್ಕಂತಹ ಉತ್ಸಾಹ ಲವಲವಿಕೆ ಏನಿತ್ತು ಅದು ಒಂದು ಪ್ರೇಮಮಯಿ ಸ್ವರೂಪವಾಗಿತ್ತು. ಅದು ಯಾವಾಗಲೂ ನಮ್ಮ ಜೊತೆಯಲ್ಲಿ ಅವರು ಇದ್ದಾರೆಂಬ ಭಾವನೆ ನಮಗಾಗುತ್ತದೆ. ಅವರ ಕುಟುಂಬಕ್ಕೆ ಈ ಸದನದ ಮೂಲಕ ಸಂತಾಪ ವ್ಯಕ್ತಪಡಿಸುತ್ತಿದ್ದೇನೆ. ಈ ಸದನದ ಮೂಲಕ ವಿಶೇಷವಾಗಿ ಕರ್ನಾಟಕ ರಾಜ್ಯದ ಜನತೆಯ ಪರವಾಗಿ ನಾವು ಸಂತಾಪವನ್ನು, ಶ್ರದ್ಧಾಂಜಲಿಯನ್ನು ಸಮರ್ಪಿಸಿ ಎರಡು ಮಾತುಗಳನ್ನು ಹೇಳಲಿಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ಇನ್ನೂ ಫೀಲ್ಡ್ ಮಾರ್ಷಲ್ ಕಾರಿಯಪ್ಪ ಅವರು ಶಿಸ್ತು ಸಂಯಮಕ್ಕೆ ಹೆಸರುವಾಸಿಯಾದಂತಹ ಜನ. ತನ್ನ ಕೊನೆಯ ಉಸಿರು ಎಳೆಯುವವರೆಗೂ ವಿಶೇಷವಾದಂತಹ ದೇಶಭಕ್ತಿಯನ್ನು ಅವರು ಹೊಂದಿದ್ದರು.

ಈಪ್ರಜಾಪ್ರಭುತ್ವದಲ್ಲಿ ಒಂದುರೀತಿಯ ಪರಾಕಾಷ್ಠತೆಯ ವಿಶೇಷ ವಿಶ್ವಾಸ ಅವರಿಗೆ ಇದ್ದುದರಿಂದ ಬಹಳ ಸವಾಲನ್ನು ಸ್ವೀಕಾರ ಮಾಡಿ ಸ್ವಾತಂತ್ರ್ಯವನ್ನು ಪಡೆದ ನಮ್ಮ ದೇಶದ ಪ್ರಜಾಪ್ರಭುತ್ವಕ್ಕೆ ಭದ್ರತೆಯನ್ನು ಕೊಟ್ಟಂಥ ವ್ಯಕ್ತಿಗಳ ಪೈಕಿ ನಾನು ಪ್ರಥಮ ಸ್ಥಾನವನ್ನು ಕೊಡುವುದಾದರೆ ಅದು ಮಾನ್ಯ ಜನರಲ್ ಕಾರಿಯಪ್ಪನವರಿಗೆ. ಅವರಿಗೆ ಅಷ್ಟು ಅಧಿಕಾರವಿತ್ತು. ಪರಕೀಯರ ದಾಸ್ಯದಿಂದ ಹೊರಗೆ ಬಂದ ಸಂದರ್ಭದಲ್ಲಿ ನಮ್ಮ ನೆರೆಹೊರೆಯ ರಾಷ್ಟ್ರಗಳಾದ ಪಾಕಿಸ್ತಾನದಲ್ಲಿ ಏನು ನಡೆಯಿತು, ಈಗ ಬಾಂಗ್ಲಾದೇಶದಲ್ಲಿ ಏನು ನಡೆಯುತ್ತಿದೆ ಅದೇ ಪರಿಸ್ಥಿತಿ, ಅದೇ ಸಂಸ್ಕೃತಿ ನಮ್ಮ ದೇಶದಲ್ಲೂ ಕೂಡ ನಡೆಯುತ್ತಿತ್ತು. ನಮ್ಮ ದೇಶಕ್ಕೆ ಆಗ ಮಾನ್ಯ ಜನರಲ್ ಕಾರಿಯಪ್ಪನವರು ಫೀಲ್ಡ್ ಮಾರ್ಷಲ್ ಆಗಿರದೇ ಇದ್ದಿದ್ದರೆ ನಮ್ಮ ದೇಶಕ್ಕೆ ಇನ್ನು ಇಂಥ ವಿಪರೀತ ತೊಂದರೆಗಳು ಬರುತ್ತಿದ್ದುವು. ವಿಶೇಷ ಶಿಸ್ತಿಗೆ ಉನ್ನತ ಸಂಕೇತವಾದ ಜನರಲ್ ಕಾರಿಯಪ್ಪನವರು ಶಿಸ್ತು, ಸಂಯಮಗಳ ಕೊಂಡಿ. ರಾಷ್ಟ್ರದ ಪ್ರಜಾಪ್ರಭುತ್ವದ ಬೆಳೆವಣಿಗೆ ಕಳಚಿ ಹೋಗದಂತೆ, ಅದು ಶಿಥಿಲವಾಗದಂತೆ ಉಳಿಸಿಕೊಂಡು ಬಂದಿದ್ದರಿಂದ ಇವತ್ತು ನಮ್ಮ ದೇಶದ ಪ್ರಜಾಪ್ರಭುತ್ವ ಸುಭದ್ರವಾಗಿ ಉಳಿದಿದೆ ಎಂದು ಹೇಳಬಹುದು. ಜನರಲ್ ಕಾರಿಯಪ್ಪನವರ ನಿಧನದ ಬಗ್ಗೆ ಅವರ ಕುಟುಂಬದವರಿಗೆ ಒಂದು ಸಂತಾಪವನ್ನು ಕಳುಹಿಸುವುದಕ್ಕೆ ನೀವು ಏನು ನಿರ್ಣಯವನ್ನು ಸದನದ ಮುಂದೆ ಮಂಡಿಸಿದ್ದೀರಿ ಇದಕ್ಕೆ ನನ್ನ ಪೂರ್ಣ ಬೆಂಬಲವನ್ನು ಕೊಡುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಇನ್ನು ಮಾನ್ಯ ಜಿ.ಎಸ್. ಆಚಾರ್‌ರವರು ನನ್ನ ಅತ್ಯಂತ ಆತ್ಮೀಯ ಮಿತ್ರರಾಗಿದ್ದರು. ಅನೇಕ ದಶಕಗಳಕಾಲ ನಾನು ಅವರನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ಅವರು ಒಬ್ಬ ಅತ್ಯಂತ ಪ್ರಾಮಾಣಿಕ ಸತ್ಯವಂತ, ನಿಸ್ಪೃಹ ವ್ಯಕ್ತಿತ್ವವುಳ್ಳ ಮತ್ತು ಶ್ರೇಷ್ಠ ಶಾಸಕರಾಗಿದ್ದರು. ಅವರ ಮತ ಕ್ಷೇತ್ರದಲ್ಲಿ ವಿಶೇಷವಾಗಿ ಅವರ ಬಗ್ಗೆ ಜನರಲ್ಲಿ ಅಭಿಮಾನ ಇದೆ. ನಮ್ಮ ಜಿಲ್ಲೆಯಲ್ಲೂ ಕೂಡ ಅವರ ಬಗ್ಗೆ ವಿಶೇಷ ಅಭಿಮಾನವಿದೆ. ಸಾರ್ವಜನಿಕ ಕ್ಷೇತ್ರದಲ್ಲಿ ಇಂಥ ವ್ಯಕ್ತಿಗಳನ್ನು ಪಡೆಯುವುದು ಅಪರೂಪವೆಂದರೆ ಅತಿಶಯೋಕ್ತಿ ಎನಿಸುವುದಿಲ್ಲ. ನಾನು ವೈಯುಕ್ತಿಕವಾಗಿ ಇಂಥ ಆತ್ಮೀಯ ಗೆಳೆಯರೊಬ್ಬರನ್ನು ಕಳೆದುಕೊಂಡಿದ್ದೇನೆ. ಇದೇ ರೀತಿ ನಮ್ಮ ರಾಜ್ಯವೂ ಕೂಡ ಒಬ್ಬ ಅತ್ಯಂತ ಯಶಸ್ವಿ, ಆದರ್ಶ ಮತ್ತು ಪ್ರಾಮಾಣಿಕ ಶಾಸಕ ಹಾಗೂ ಒಳ್ಳೆಯ ಸಹಕಾರಿ ಮನೋಭಾವನೆಯ ವ್ಯಕ್ತಿಯನ್ನು ಕಳೆದುಕೊಂಡಿದೆ. ಇವರ ನಿಧನದ ಬಗ್ಗೆ ಕೂಡ ನಾನು ನನ್ನ ಖೇದವನ್ನು ವ್ಯಕ್ತಪಡಿಸುವುದಕ್ಕೆ ಅಪೇಕ್ಷೆಪಡುತ್ತೇನೆ.

ಇನ್ನು ಪ್ರೊ : ನೂರುಲ್ ಹಸನ್‌ರವರು ಅಕೆಡೆಮಿಕ್ ಕ್ಷೇತ್ರದಲ್ಲಿ, ಮತ್ತು ಎಡ ಪಂಥೀಯ ಸಿದ್ಧಾಂತ, ವಿಚಾರ ಧಾರೆಯಲ್ಲಿ ರಾಷ್ಟ್ರಮಟ್ಟದಲ್ಲೇ ಅಲ್ಲದೆ ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ಕೂಡ ವಿಶೇಷವಾದ ಹೆಸರನ್ನು ಪಡೆದಿದ್ದರು. ಅವರು ರಾಜ್ಯಪಾಲರಾಗಿ ತಮ್ಮ ವಿಶೇಷ ವರ್ಚಸ್ಸನ್ನು ಪಡೆದಿದ್ದರು. ಅವರ ಆರೋಗ್ಯ ಚೆನ್ನಾಗಿದ್ದಿದ್ದರೆ ಇನ್ನೂ ಉನ್ನತ ಸ್ಥಾನವನ್ನು ಪಡೆಯುವಂಥ ಎಲ್ಲಾ ಅರ್ಹತೆಗಳನ್ನೂ ಮಾನ್ಯ ನೂರುಲ್ ಹಸನ್‌ರವರು ಪಡೆದಿದ್ದರು.

ಇದೇ ರೀತಿ ಖ್ಯಾತ ಕವಿ ಎ.ಕೆ. ರಾಮಾನುಜನ್‌ರವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ, ಕಾವ್ಯ ಕ್ಷೇತ್ರದಲ್ಲಿ ಹೊಸ ಪ್ರಯೋಗಗಳನ್ನು ಮಾಡಿ ನವ್ಯ ಕವಿಯಾಗಿ, ಆದರ್ಶತೆಯನ್ನು ಯಾವಾಗಲು ಇಟ್ಟುಕೊಂಡು ಬಂದಿದ್ದವರು. ಅವರು ಹೊರದೇಶದ ನೆಲೆಯಲ್ಲಿದ್ದರೂ ಕನ್ನಡದ ಮಣ್ಣಿನ ವಾಸನೆ, ಪರಿಸರವನ್ನು ಎಂದೂ ಕೂಡ ಬಿಟ್ಟುಕೊಡದ ಶ್ರೇಷ್ಠ ಕವಿಯಾಗಿದ್ದರು.

ಇನ್ನು ಮಾಜಿ ಶಾಸಕರುಗಳಾದ ಮಾನ್ಯ ಎ.ಜಿ. ಚುಂಚೇಗೌಡ, ಕೆ.ಹೆಚ್. ರಾಮಕೃಷ್ಣಯ್ಯ, ವಿ.ಎಂ. ಫಾಡಿ, ಡಿ.ಎಂ. ಗೋವಿಂದರಾಜು ಹಾಗೂ ಬಾಪು ಸಾಹೇಬ್ ಏಕಾಂಬಕರ್ ಇವರೆಲ್ಲರ ನಿಧನದ ಬಗ್ಗೆ ಈ ಸದನದ ಪರವಾಗಿ ಶ್ರದ್ಧಾಂಜಲಿಯನ್ನರ್ಪಿಸಿ ಅವರ ಕುಟುಂಬವರ್ಗದವರಿಗೆ ಈ ವಿಶೇಷ ದುಃಖವನ್ನು ಭರಿಸುವ ಶಕ್ತಿಯನ್ನು ಆ ಭಗವಂತನು ಕರುಣಿಸುವಂತೆ ಈ ಸದನದ ಮೂಲಕ ಕಳುಹಿಸುವುದಕ್ಕೆ ತಾವು ಮಂಡಿಸಿರತಕ್ಕ ಈ ನಿರ್ಣಯವನ್ನು ಅನುಮೋದನೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ(ವಿರೋಧಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ಇಷ್ಟು ಬೇಗನೆ ಮಾನ್ಯ ಗುಂಡೂರಾಯರು ನಮ್ಮಿಂದ ಅಗಲಿ ಹೋಗುತ್ತಾರೆಂದು ನಾವು ನಂಬಿರಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತೆ ಕೊಡಗು ಜಿಲ್ಲೆಯಲ್ಲಿ ಬಹಳ ಬಡ ಕುಟುಂಬದಲ್ಲಿ ಹುಟ್ಟಿ ಅಲ್ಲಿಯ ನಗರಸಭೆಯ ಅಧ್ಯಕ್ಷರಾಗಿ ತನ್ನ ಛಲದಿಂದ, ಅತ್ಯಂತ ಕಷ್ಟದಿಂದ ಮತ್ತು ಅತಿ ಮುಖ್ಯವಾಗಿ ಶ್ರೀಮತಿ ಇಂದಿರಾಗಾಂಧಿಯವರ ಸಹಕಾರದಿಂದ ಅತಿ ಚಿಕ್ಕ ವಯಸ್ಸಿನಲ್ಲೇ ಈ ರಾಜ್ಯದ ಮುಖ್ಯ ಮಂತ್ರಿಯಾದರು.

11.30 ಪಿ.ಎಂ

ನಮ್ಮ ದಕ್ಷಿಣ ರಾಜ್ಯದ ಒಂದು ಸಮ್ಮೇಳನ ಇತ್ತು. ಆಗ ನಮ್ಮ ನಾಯಕರಾದ ಶ್ರೀ ಬೊಮ್ಮಾಯಿಯವರು ನಮ್ಮ ರಾಜ್ಯದ ಜನತಾ ಪಕ್ಷದ ಅಧ್ಯಕ್ಷರು ಆಗಿದ್ದರು. ನಾನು ಮತ್ತು ಶ್ರೀಮಾನ್ ದೇವೆಗೌಡರು ಅವರನ್ನು ಭೇಟಿಯಾಗಲು ಹೋದೆವು. ಆಗ ಅವರು ಮುಖ್ಯಮಂತ್ರಿಗಳು ಆಗಿದ್ದರು. ನಮ್ಮ ಮಹನೀಯರು, ಕಾರ್ಯಕರ್ತರು ಬರುತ್ತಾರೆ. ಅವರಿಗೆ ತೊಂದರೆಯಾಗಬಾರದು, ನೀರಿನ ವ್ಯವಸ್ಥೆಯಾಗಬೇಕು, ಎಂದು ಆ ಸಮಯದಲ್ಲಿ ತಕ್ಷಣ ಶ್ರೀ ಧರ್ಮಸಿಂಗ್‌ರವರಿಗೆ ಫೋನ್ ಮಾಡಿದರು. ಆಗ ಅವರು ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಆಗಿದ್ದರು. ಇದೆಲ್ಲ ವ್ಯವಸ್ಥೆಯಾಗಬೇಕೆಂದು ಅವರಿಗೆ ಹೇಳಿದರು. ಸಮ್ಮೇಳನ ಚೆನ್ನಾಗಿ ನಡೆಯಲಿ, ಇನ್ನು ಏನಾದರೂ ಸಹಾಯ ಆಗಬೇಕಾದರೆ ಕೇಳಿ ಎಂದರು. ಇದು ಏತಕ್ಕೆ ಹೇಳುತ್ತಿದ್ದೇನೆ, ಎಂದರೆ ಅವರು ಕಾಂಗ್ರೆಸ್ ಪಕ್ಷವನ್ನು ಸೇರಿದ್ದರೂ ಸಹ ಅವರಿಗೆ ಯಾರ ಮೇಲೂ ದ್ವೇಷವಿರಲಿಲ್ಲ. ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷಕ್ಕೂ ಸಹ ಅವರು ಸಾಕಷ್ಟು ಗೌರವ ಕೊಡುತ್ತಿದ್ದರು. ಇವತ್ತು ಅವರು ನಮ್ಮಲ್ಲಿ ಇಲ್ಲ. ಆದರೆ ಅವರ ಪರ್ಸನಾಲಿಟಿಗೆ ನಾವು ಬರಲು ಸಾಧ್ಯವಿಲ್ಲ. ಅಂತಹ ಒಂದು ಪರ್ಸನಾಲಿಟಿ ನಮ್ಮಲ್ಲಿ ಬಹಳಷ್ಟು ಕಡಿಮೆ ಇದೆ ಎಂದು ನಾನು ಹೇಳುತ್ತೇನೆ. ಎಲ್ಲರ ಜೀವನದಲ್ಲಿ ಲೋಪದೋಷಗಳು ಇವೆ, ನನ್ನ ಜೀವನದಲ್ಲೂ ಲೋಪದೋಷಗಳು ಇವೆ. ಆದರೆ ಅವರು ಈ ನಾಡಿನ ಅಭಿವೃದ್ಧಿಯ ಸಲುವಾಗಿ ಸಾಕಷ್ಟು ದುಡಿದಿದ್ದಾರೆ. ಸಾಕಷ್ಟು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದ್ದಾರೆ; ಮತ್ತು ಬಹಳ ಫೋರ್‌ಕಾಟ್ ತನ್ನ ಮನಸ್ಸಿನಲ್ಲಿ ಏನು ಬರುತ್ತದೆಯೋ ಅದನ್ನೇಲ್ಲಾ ಹೇಳಿಬಿಡುತ್ತಿದ್ದರು ಅದರಲ್ಲಿ ಅವರು ಯಾವಾಗಲು ಹಿಂದುಮುಂದು ನೋಡುತ್ತಿರಲಿಲ್ಲ. ಅವರು ಹೇಳುತ್ತಿದ್ದರು, ನಾನು ಕೋಳಿ ತಿನ್ನುವ ಬ್ರಾಹ್ಮಣ, ಅಂದರೆ ಅದರ ಅರ್ಥವನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಅಂದರೆ ನಾನು ಬಡ ಜನರ ಪರವಾಗಿ ಇದ್ದೇನೆ, ಹಿಂದುಳಿದ ಜನಾಂಗದವರ ಪರವಾಗಿ ಇದ್ದೇನೆ ಅಂತ. ಈ ತರಹ ಭಾವನೆ ಅವರಲ್ಲಿ ಇತ್ತು. ಅಂತಹ ಒಂದು ನಾಯಕತ್ವವನ್ನು ನಾವು ಕಳೆದುಕೊಂಡಿದ್ದೇವೆ. ಇದರಿಂದ ಕೇವಲ ಕಾಂಗ್ರೆಸ್ ಪಕ್ಷಕ್ಕೆ ಹಾನಿಯಾಗಿಲ್ಲ, ಅದಕ್ಕಿಂತ ಹೆಚ್ಚಿನ ಹಾನಿ ರಾಷ್ಟ್ರಕ್ಕೆ, ನಮ್ಮ ದೇಶಕ್ಕೆ ಆಗಿದೆ,

ನಮ್ಮ ಸ್ನೇಹಿತರಿಗೂ ಆಗಿದೆ. ನಮ್ಮಂತಹ ಸ್ನೇಹಿತರ ಮೇಲೆ ಸಾಕಷ್ಟು ಅಭಿಮಾನವನ್ನು ಇಟ್ಟುಕೊಂಡಿದ್ದರು. ಕೆಲವು ಸಲ ಅವರು ನಮಗೂ ಮಾರ್ಗದರ್ಶನ ನೀಡುತ್ತಿದ್ದರು. ನೀವು ಮಾಡುವುದು ಸರಿಯಲ್ಲವೆಂದು ಹೇಳುತ್ತಿದ್ದರು. ಇವತ್ತು ಅವರು ನಮ್ಮಲ್ಲಿ ಇಲ್ಲ. ನಮಗೆ ಎಲ್ಲರಿಗೂಗೊತ್ತಿದೆ. ಅವರಿಗೆ ಕ್ರೀಡೆಯಲ್ಲಿ ಬಹಳ ಆಸಕ್ತಿ ಇತ್ತು. ಒಮ್ಮೆ ಜಯನಗರದಲ್ಲಿ ಸ್ವಿಮಿಂಗ್ ಪೂಲ್ ಉದ್ಘಾಟನೆ ಮಾಡಲು ಅವರು ಹೋದಾಗ ಅಲ್ಲಿ ಪಾರ್ಟಿಸಿಪೇಟ್ ಮಾಡಿ, ಅವರೇ ಸ್ವಿಮಿಂಗ್ ಮಾಡಿ ತೋರಿಸಿದ್ದರು. ಅವರು ಯುವಕರಿಗೆ ಹೆಚ್ಚಿನ ಉತ್ತೇಜನ ಕೊಟ್ಟರು. ಅದೇ ಪ್ರಕಾರ ಕ್ರೀಡೆಯಲ್ಲೂ ಸಾಕಷ್ಟು ಆಸಕ್ತಿಯಿತ್ತು. ಬೆಂಗಳೂರಿನಲ್ಲಿ ಫುಟ್ ಬಾಲ್ ಸ್ಟೇಡಿಯಂ ಕೆಲಸ ಇನ್ನೂ ಆಗಿಲ್ಲ. ಆದಷ್ಟು ಬೇಗನೆ ಆ ಕೆಲಸವನ್ನು ಮುಗಿಸಿ ಅದಕ್ಕೆ ದಿವಂಗತ ಶ್ರೀಮಾನ್ ಗುಂಡೂರಾಯರ ಹೆಸರನ್ನು ಕೊಡಬೇಕೆಂದು ನಾನು ಸೂಚನೆಯನ್ನು ಕೊಡುತ್ತಿದ್ದೇನೆ. ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಎಷ್ಟೋ ಜನರು ಮುಖ್ಯಮಂತ್ರಿಗಳು ಆಗಿದ್ದಾರೆ. ಆದರೆ ಆಡಳಿತ ವ್ಯವಸ್ಥೆಯಲ್ಲಿ ಏನು ಒಂದು ಹಿಡಿತ ಇತ್ತು ಅದು ಬಹಳಷ್ಟು ಮುಖ್ಯಮಂತ್ರಿಗಳ ಕಾಲದಲ್ಲಿರಲಿಲ್ಲ. ಒಮ್ಮೆ ಒಂದು ವರ್ಗಾವಣೆ ಮಾಡಿದ ನಂತರ ಇಲ್ಲ, ಅಂದರೆ ಬದಲಾವಣೆ ಇಲ್ಲ ಎಂದರೆ ಮಾಡುವುದಿಲ್ಲ. ಅಷ್ಟೊಂದು ಡಿಸಿಪ್ಲಿನ್, ಅಷ್ಟೊಂದು ಶಿಸ್ತನ್ನು ಬ್ಯೂರೊಕ್ರಸಿಯಲ್ಲಿ ಅವರು ತಮ್ಮ ಕಾಲದಲ್ಲಿ ತಂದರು. ಇವತ್ತು ನಾನು ವೈಯಕ್ತಿಕವಾಗಿ ನಮ್ಮ ಪಕ್ಷದ ಪರವಾಗಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ತಾವು ಮಂಡಿಸಿದಂತಹ ನಿರ್ಣಯಕ್ಕೆ ಬೆಂಬಲವನ್ನು ವ್ಯಕ್ತ ಮಾಡುತ್ತಿದ್ದೇನೆ. ನಮ್ಮ ಫೀಲ್ಡ್ ಮಾರ್ಷಲ್ ಕಾರ್ಯಪ್ಪನವರು ನಮ್ಮ ರಾಷ್ಟ್ರದ ನಮ್ಮ ನಾಡಿನ ಸುಪುತ್ರರು, ಅವರು ಮಾಡಿದ ಸೇವೆ, ರಾಷ್ಟ್ರಕ್ಕೆ ಮಾಡಿದ ಸೇವೆಯನ್ನು ನಾವು ಯಾವಾಗಲೂ ಮರೆಯಲು ಸಾಧ್ಯವಿಲ್ಲ. ಅವರಲ್ಲಿದ್ದ ಡಿಸಿಪ್ಲೀನ್ ಮತ್ತು ರಾಷ್ಟ್ರಾಭಿಮಾನ ಇದು ಎಲ್ಲಾ ನಮ್ಮ ಯುವಕರಿಗೆ ಒಂದು ಆದರ್ಶಪ್ರಾಯವಾಗಿದೆ. ದೇಶ ಬಹಳಷ್ಟು ಕಷ್ಟದಲ್ಲಿದೆ. ದೇಶದ ಐಕ್ಯತೆ, ದೇಶದ ಭದ್ರತೆ ಮತ್ತು ದೇಶದ ಸೌಹಾರ್ದತೆ ಇವತ್ತು ಬಹಳಷ್ಟು ಕಷ್ಟದಲ್ಲಿ, ತೊಂದರೆಯಲ್ಲಿದೆ. ಫೀಲ್ಡ್ ಮಾರ್ಷಲ್ ಕಾರ್ಯಪ್ಪನವರಂತಹ ಆದರ್ಶ ಪುರುಷರನ್ನು ನಾವು ಇಟ್ಟುಕೊಂಡು, ಎಲ್ಲರೂ ಕೂಡಿ ದೇಶದ ಐಕ್ಯತೆ ಬಗ್ಗೆ ಕೆಲಸ ಮಾಡಬೇಕಾಗಿದೆ. ಅದರಲ್ಲೂ ನಮ್ಮ ಯುವಕರು ಹೆಚ್ಚು ಆದರ್ಶವಾಗಿರಬೇಕಾಗಿದೆ. ಒಂದು ಮಾತಿನಲ್ಲಿ ಹೇಳುವುದಾದರೆ He was a soldier who fought on many fronts.

ಅವರು ಸಹ ಇಂದು ನಮ್ಮಲ್ಲಿ ಇಲ್ಲ. ಅವರು ಮಾಡಿದ ಸೇವೆಯನ್ನು ಯಾರೂ ಮಾಡಲಿಕ್ಕೆ ಸಾಧ್ಯವಿಲ್ಲ. ಅದಾದನಂತರ ರಾಜ್ಯಪಾಲರಾದ ನೂರುಲ್ ಹಸನ್‌ರವರು ಅವರು ರಾಷ್ಟ್ರಾಭಿ ಮಾನಿಗಳಾಗಿದ್ದು ರಾಷ್ಟ್ರಕ್ಕೆ ಸಾಕಷ್ಟು ಸೇವೆಯನ್ನು ಮಾಡಿದ್ದಾರೆ. ಅವರೂ ಸಹ ನಮ್ಮಲ್ಲಿ ಈಗ ಇಲ್ಲ. ಅದೇಪ್ರಕಾರ ಮಾನ್ಯ ಜಿ.ಎಸ್. ಆಚಾರ್‌ರವರು ಕಾಂಗ್ರೆಸ್(ಐ) ಪಕ್ಷದ ಶಾಸಕರಾಗಿದ್ದರೂ ಸಹ ಪಕ್ಷಾತೀತರಾಗಿ ಯಾವಾಗಲೂ ನಗುನಗುತ್ತಿದ್ದರು. ನನ್ನ ಒಳ್ಳೆಯ ಸ್ನೇಹಿತರಾಗಿದ್ದರು. ಅವರು ಅಪೆಕ್ಸ್‌ಬ್ಯಾಂಕಿನ ಅಧ್ಯಕ್ಷರಾಗಿದ್ದಾಗ ನಾನು ಭಾವಿಸಿದ್ದೆ, ಏನೋ ಒಂದು ಒಳ್ಳೆಯ ಅವಕಾಶ ಅವರಿಗೆ ಜೀವನದಲ್ಲಿ ಮೊದಲನೆಯಬಾರಿ ಬಂದಿದೆ; ಅವರು ಬಹಳ ಒಳ್ಳೆಯ ಕೆಲಸ ಮಾಡುತ್ತಾರೆಂದು ತಿಳಿದುಕೊಂಡಿದ್ದೆ. ಆದರೆ ದೇವರ ಇಚ್ಛೆ ಆ ರೀತಿ ಇದ್ದುದಿಲ್ಲ. ಅವರೂ ಸಹ ನಮ್ಮನ್ನು ಅಗಲಿ ಹೋಗಿದ್ದಾರೆ. ಒಳ್ಳೆಯ ಸಮಾಜಕಾರ್ಯಕರ್ತರಾಗಿದ್ದ ಅವರಿಗೂ ಸಹ ನಾನು ನನ್ನ ಸಂತಾಪವನ್ನು ಅರ್ಪಿಸುತ್ತಾ, ನಾನು ಯಾವ ಕ್ಷೇತ್ರದಿಂದ ಆರಿಸಿಬರುತ್ತಿದ್ದೇನೆ, ಅದೇ ಕ್ಷೇತ್ರದಿಂದ ಶ್ರೀ ವಿರುಪಾಕ್ಷಪ್ಪ

ಮಲ್ಲಪ್ಪ ಘಾಡಿಯವರು 1971 ಮತ್ತು 1972ನೇ ಇಸವಿಯಲ್ಲಿ ಆರಿಸಿಬಂದಿದ್ದರು. ಅವರು ಬಹಳ ಪ್ರಾಮಾಣಿಕರು, ಬಹಳ ಸಜ್ಜನವ್ಯಕ್ತಿ, ಸರಳಸ್ವಭಾವದವರು ಅವರ ಹತ್ತು ವರ್ಷಗಳ ಕಾಲಾವಧಿಯಲ್ಲಿ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮೊನ್ನೆ ಅವರ ಬಗ್ಗೆ ಒಂದು ಪತ್ರವನ್ನು ಕಳುಹಿಸಿದ್ದೇನೆ. ನಾನೇ ಹೆಚ್.ಯು.ಡಿ ಮಿನಿಸ್ಟರ್ ಇದ್ದಾಗ ಎರಡು ಲೆಜಿಸ್ಲೇಟರ್ ಸೊಸೈಟಿ ಸೈಟ್ಸ್‌ಗಳನ್ನು ರಿಲೀಸ್ ಮಾಡಿದ್ದೆ. ಅದರಲ್ಲಿ ಅವರಿಗೂ ಒಂದು ಸೈಟ್ ಸಿಕ್ಕಿತ್ತು; ಆದರೆ ಆರ್ಥಿಕ ತೊಂದರೆಯಿಂದ ಮಂಜೂರಾಗಿದ್ದ ಸೈಟಿಗೂ ಸಹ ಅವರು ಹಣವನ್ನು ತುಂಬಲಿಕ್ಕೆ ಆಗಲಿಲ್ಲ. ಹಾಗಾಗಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಈಗಾಗಲೇ ಹೇಳಿದ್ದೇನೆ, ಡಿಲೆ ಕಂಡೋನ್‌ಮಾಡಿ ಮಂಜೂರಾಗಿರುವ ಆ ಸೈಟನ್ನು ರಿಲೀಸ್ ಮಾಡಬೇಕೆಂದು ಸಹ ಹೇಳಿದ್ದೇನೆ. ಯಾವುದೇ ಪಕ್ಷದಲ್ಲಿದ್ದರೂ ಸಹ ಅವರು ನಮಗೆಲ್ಲಾ ಮಾರ್ಗದರ್ಶಕರಾಗಿದ್ದರು. ನಮ್ಮಂಥ ಯುವಕರಿಗೆ ಅವರು ಮಾರ್ಗದರ್ಶಕರಾಗಿದ್ದರು. ಅದೇ ಪ್ರಕಾರ ಪದ್ಮಶ್ರೀ ಎ.ಕೆ. ರಾಮಾನುಜನ್, ಅವರು ಒಬ್ಬ ಶ್ರೇಷ್ಠ ಕವಿಯಾಗಿದ್ದರು. ಅವರನ್ನೂ ಸಹ ನಾವು ಕಳೆದು ಕೊಂಡಿದ್ದೇವೆ. ಅದೇ ಪ್ರಕಾರ ಕೆ.ಹೆಚ್. ರಾಮಕೃಷ್ಣ ಮಾಜಿ ಶಾಸಕರು ಆ ಭಾಗದ ಮುಖಂಡರು, ಅವರನ್ನೂ ಸಹ ನಾವು ಕಳೆದುಕೊಂಡು ಸಾಕಷ್ಟು ಬಡವರಾಗಿದ್ದೇವೆ. ಅವರು ಸಹ ನನ್ನ ಒಳ್ಳೆಯ ಸ್ನೇಹಿತರು, ಡಿ.ಎಂ. ಗೋವಿಂದರಾಜು ಅವರು ಸ್ವಾತಂತ್ರ ಹೋರಾಟಗಾರರು, ಬಾಬಾ ಸಾಹೇಬ್ ಹೆಚ್.ಎನ್. ಭರತ್ ಇವರು ಸಹ ಔರಾದ್ ಮತದಾರರ ಕ್ಷೇತ್ರದಿಂದ ಆರಿಸಿ ಬಂದಿದ್ದರು. ಅವರು ಅನಾರೋಗ್ಯರಿದ್ದಾಗ ನಾನು ಮತ್ತು ಮಾನ್ಯ ಗುರುಪಾದಪ್ಪನವರು ಬಾಂಬೆಗೆ ಹೋಗಿ ಅವರನ್ನು ನೋಡಿಕೊಂಡು ಬಂದಿದ್ದೆವು. ಅವರು ಸಹ ಆ ಭಾಗದ ಒಬ್ಬ ಒಳ್ಳೆಯ ಹಿರಿಯ ನಾಯಕರು. ಅದೇ ಪ್ರಕಾರ ಎ.ಕೆ. ಚುಂಚೇಗೌಡರು, ಹೀಗೆ ಹಲವಾರು ನಮ್ಮ ಸ್ನೇಹಿತರು ಇವತ್ತು ನಮ್ಮಲ್ಲಿ ಇಲ್ಲ. ಅವರೆಲ್ಲರಿಗೂ ನಾನು ಶ್ರದ್ಧಾಂಜಲಿಯನ್ನು ಅರ್ಪಿಸುತ್ತ ಏನು ದೊಡ್ಡ ಆಘಾತ ಅವರೆಲ್ಲರ ಕುಟುಂಬದ ಮೇಲೆ ಆಗಿದೆ, ಅದನ್ನು ಸಹಿಸುವ ಶಕ್ತಿ ಪರಮಾತ್ಮ ಅವರಿಗೆ ಕೊಡಲಿ ಎಂದು ಹೇಳಿ ಸಭಾಧ್ಯಕ್ಷರು ಮಂಡಿಸಿರುವ ಈ ಗೊತ್ತುವಳಿಗೆ ನನ್ನ ಅನುಮೋದನೆಯನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : -(ಶಿಕಾರಿಪುರ)

ಸನ್ಮಾನ್ಯ ಅಧ್ಯಕ್ಷರೇ, ಈ ನಾಡಿಗೆ, ಈ ದೇಶಕ್ಕೆ ಸೇವೆ ಸಲ್ಲಿಸಿದಂಥ ಮಹಾನ್ ನಾಯಕರನ್ನು ಕಳೆದುಕೊಂಡು ಈ ದೇಶ, ಈ ನಾಡು ತಬ್ಬಲಿಯಾಗಿದೆ. ಸನ್ಮಾನ್ಯ ಆರ್. ಗುಂಡೂರಾವ್‌ರವರು ಮುಖ್ಯಮಂತ್ರಿಗಳಾಗಿ ಇಲ್ಲಿ ಸೇವೆ ಸಲ್ಲಿಸಿದಂಥ ಸಂದರ್ಭದಲ್ಲಿ ಈ ಸದನದ ಒಳಗಡೆ ಅವರ ಜೊತೆಗೆ ಕೆಲಸಮಾಡತಕ್ಕಂಥ ಅವಕಾಶ ನನಗೆ ಸಿಕ್ಕಿರಲಿಲ್ಲ. ಆದರೆ ಬೇರೆ ಬೇರೆ ಸಂದರ್ಭಗಳಲ್ಲಿ ನಮ್ಮ ಜಿಲ್ಲೆಯ ನಮ್ಮ ತಾಲ್ಲೂಕಿನ ಸಮಸ್ಯೆಗಳನ್ನು ತೆಗೆದುಕೊಂಡು ಬಂದಾಗ ಅವರು ನಡೆದುಕೊಂಡಂಥ ರೀತಿ ಎಂದರೆ ಬಹುಶಃ ಇವತ್ತಿನ ರಾಜಕೀಯ ಪರಿಸ್ಥಿತಿಯಲ್ಲಿ ಯಾವುದೇ ಪಕ್ಷ ಭೇದವನ್ನು ಮರೆಯದೆ ನೋಡದೇ, ಕಾಣದೇ, ಅದಕ್ಕೆ ಆದ್ಯತೆಯನ್ನು ಕೊಟ್ಟು ಕೆಲಸ ಮಾಡುತ್ತಿದ್ದಂಥ ದೀಮಂತ ವ್ಯಕ್ತಿತ್ವವನ್ನು ನಾನು ಹತ್ತಿರದಿಂದ ಕಾಣುವಂಥ ಅನೇಕ ಸಂದರ್ಭಗಳು ನನಗೆ ಒದಗಿ ಬಂದಿತ್ತು. ಸರಿಕಂಡದ್ದನ್ನು ಮಾಡಿಯೇ ತೀರುವಂಥ ವ್ಯಕ್ತಿತ್ವ, ಅಂಥ ಒಂದು ಧೀಮಂತ ನಾಯಕ. ಕೇವಲ ಕಾಂಗ್ರೆಸ್ ಒಂದು ಪಕ್ಷಕ್ಕೆ ಅಲ್ಲ, ಇತ್ತೀಚಿನ ದಿವಸಗಳಲ್ಲಿ ಅಂಥ ಹೋರಾಟ ಮಾಡಬಲ್ಲಂಥ ಸರಿಕಂಡದ್ದನ್ನು ಮಾಡುವಂಥ, ನಾಡಿಗೆ ಸೇವೆ ಸಲ್ಲಿಸುವಂಥ ವ್ಯಕ್ತಿತ್ವ ಇರುವಂಥ ವ್ಯಕ್ತಿಗಳು ಅಪರೂಪ ಇರುವಂಥ ಈ ಕಾಲದಲ್ಲಿ ಅತ್ಯಂತ

ಚಿಕ್ಕವಯಸ್ಸಿನ ಸನ್ಮಾನ್ಯ ಗುಂಡೂರಾವ್‌ರವರನ್ನು ನಾವು ಕಳೆದುಕೊಂಡಿರತಕ್ಕಂಥದ್ದರಿಂದ ನಾವೆಲ್ಲರೂ ಸಹ ತಬ್ಬಲಿಯಾಗಿದ್ದೇವೆ; ನಮ್ಮ ನಾಡು ಸಹ ಇಂಥ ಒಬ್ಬ ವ್ಯಕ್ತಿಯನ್ನು ಕಳೆದುಕೊಂಡು ತಬ್ಬಲಿಯಾಗಿದೆ ಎನ್ನುವಂಥ ಮಾತನ್ನು ಹೇಳುತ್ತಾ, ಇನ್ನೊಂದು ಬಹಳ ದುಃಖ ತರುವಂಥ ಸಂಗತಿ ಏನೆಂದರೆ ಭಾರತ ಸೇವೆಯ ಪ್ರಥಮ ಮಹಾ ದಂಡನಾಯಕ ಫೀಲ್ಡ್‌ಮಾರ್ಷಲ್ ಕಾರಿಯಪ್ಪನವರು ಇವತ್ತು ನಮ್ಮ ಜೊತೆಗೆ ಇಲ್ಲ. ಶಿಸ್ತಿಗೆ ಇನ್ನೊಂದು ಹೆಸರು ಮಾನ್ಯ ಕಾರಿಯಪ್ಪನವರು ಎಂದು ಹೇಳಬಹುದು. ಇಂಥ ದೇಶಭಕ್ತ ವ್ಯಕ್ತಿಗಳು ಬೆರಳೆಣಿಸುವಷ್ಟು ನಮ್ಮ ನಾಡಿನಲ್ಲಿ, ನಮ್ಮ ದೇಶದಲ್ಲಿ ಆಗಿಹೋದರು. ಅಂಥ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಬಹುಶಃ ಯುವ ಪೀಳಿಗೆಗೆ ಜೀವನದುದ್ದಕ್ಕೂ ಅವರ ಜೀವನ ಮಾರ್ಗದರ್ಶನವೆಂದು ನಾನು ಅಂದುಕೊಂಡಿದ್ದೇನೆ. ಕನ್ನಡ ನಾಡಿನಿಂದ ಒಬ್ಬ ಪ್ರಥಮ ವ್ಯಕ್ತಿ ಇಡೀ ದೇಶಕ್ಕೆ ಹೆಸರು ತರುವಂಥ ಒಂದು ಉನ್ನತ ಹುದ್ದೆಯಲ್ಲಿ ಇದ್ದುದು ಮತ್ತೊಬ್ಬ ವ್ಯಕ್ತಿಯನ್ನು ನಾವು ಕಂಡಿಲ್ಲ. ಅದಕ್ಕಾಗಿ ನಾನು ಈ ಸದನದಲ್ಲಿ ಮುಖ್ಯ ಮಂತ್ರಿಗಳನ್ನು ಅಧ್ಯಕ್ಷರ ಮೂಲಕ ವಿನಂತಿ ಮಾಡುವುದು, ಇವತ್ತು ವಿಧಾನ ಸೌಧದ ಮುಂಬಾಗದಲ್ಲಿ ಇಂಥ ಕಾವೇರಿ ವರಪುತ್ರರ ಪುತ್ಥಳಿಯನ್ನು ಇಡಬೇಕು. ಅದಕ್ಕೆ ಸರ್ವಾನುಮತದ ತೀರ್ಮಾನ ತೆಗೆದುಕೊಳ್ಳಬೇಕೆಂಬ ವಿನಂತಿ ಮಾಡುತ್ತೇನೆ. ಇನ್ನು ಮಾನ್ಯ ಜಿ.ಎಸ್. ಆಚಾರ್ ಅವರು ಈ ಸದನದಲ್ಲಿ ಕೆಲಸ ಮಾಡುತ್ತಿದ್ದರು. ಅವರು ಬಹಳ ಪ್ರಾಮಾಣಿಕವ್ಯಕ್ತಿ. ಅದೇ ರೀತಿ ಪ್ರೊ. ನೂರುಲ್ ಹಸನ್, ಖ್ಯಾತ ಕವಿ ಎ.ಕೆ. ರಾಮಾನುಜನ್, ಮಾಜಿ ಶಾಸಕರುಗಳಾದ ಎ.ಜಿ. ಚುಂಚೇಗೌಡ, ಕೆ.ಹೆಚ್. ರಾಮಕೃಷ್ಣಯ್ಯ, ವಿರುಪಾಕ್ಷಪ್ಪ ಮಲ್ಲಪ್ಪ ಫಾಡಿ, ಬಾಬಾ ಸಾಹೇಬ್, ಡಿ.ಎಂ. ಗೋವಿಂದರಾಜು ಇವರುಗಳಂಥ ಅನೇಕ ಹಿರಿಯರನ್ನು ನಾವು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿ ಕೋರುತ್ತಾ, ನಮ್ಮ ಪಕ್ಷದ ಪರವಾಗಿ ಅವರೆಲ್ಲರಿಗೂ ಶ್ರದ್ಧಾಂಜಲಿ ಅರ್ಪಿಸಿ ತಾವು ಏನು ಒಂದು ಸಂತಾಪ ಸೂಚನೆಯನ್ನು ಮಂಡನೆ ಮಾಡಿದ್ದೀರಿ ಅದಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ, ನನ್ನ ಸಂತಾಪ ಸೂಚನೆಯನ್ನು ಅವರಿಗೆ ತಲುಪಿಸುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಮತ್ತು ಈ ಶಾಸನ ಸಭೆಯ ಎಲ್ಲರ ಸಂತಾಪ ಸೂಚನೆಯನ್ನು ಕಳುಹಿಸಿಕೊಡಬೇಕೆಂದು ವಿನಂತಿಸುತ್ತಾ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ(ವೇಮಗಲ್) : ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಈ ಸದನದ ಅತ್ಯಂತ ದುಃಖಕರವಾದ ಸಂದರ್ಭದಲ್ಲಿ ನಾವು ಭಾಗವಹಿಸುತ್ತಿದ್ದೇವೆ. ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಂಥ ಶ್ರೀ ಗುಂಡೂರಾಯರು ನಿನ್ನೆ ಬೆಳಿಗ್ಗೆ 11.15ಕ್ಕೆ ನಮ್ಮಿಂದ ಮರೆಯಾಗಿದ್ದಾರೆ. ಈ ರಾಜಕೀಯದ ಬಿರುಗಾಳಿಯಲ್ಲಿ ಯಾರು ಯಾರು ಎಲ್ಲೆಲ್ಲಿಂದಲೋ ಬಂದು ಸೇರತಕ್ಕ ಅವಕಾಶಗಳನ್ನು ನಮ್ಮ ದೇಶದ ರಾಜಕೀಯದಲ್ಲಿ ಮತ್ತು ಬೇರೆ ದೇಶದ ರಾಜಕೀಯದಲ್ಲೂ ಕಾಣುತ್ತೇವೆ. ಅದೇ ರೀತಿಯಲ್ಲಿ ಶ್ರೀ ಗುಂಡೂರಾಯರು ರಾಜಕೀಯದ ಬಿರುಗಾಳಿಯಲ್ಲಿ ಒಬ್ಬ ಸಾಮಾನ್ಯರಲ್ಲಿ ಸಾಮಾನ್ಯರಾಗಿದ್ದಂಥವರು. ಒಬ್ಬ ಬಸ್ಸಿನ ಏಜೆಂಟರಾಗಿದ್ದಂಥವರು ಇಲ್ಲಿ ಸದನದಲ್ಲಿ ಮುಖ್ಯಮಂತ್ರಿಗಳಾಗಿ ಕುಳಿತುಕೊಳ್ಳತಕ್ಕ ಅವಕಾಶ ಬಹುಶಃ ಬೇರೆ ಕಡೆ ನಡೆದಿರಲಿಕ್ಕೆ ಸಾಧ್ಯವಿಲ್ಲ. ಶ್ರೀ ಗುಂಡೂರಾಯರನ್ನು ನಾನು ಬಹಳ ಹತ್ತಿರದಿಂದ ಬಲ್ಲೆ. 1972ರಲ್ಲಿ ಪ್ರಥಮವಾಗಿ ಅವರು ಈ ಸಭೆಯ ಸದಸ್ಯರಾಗಿ ಬಂದರು. ನಾನೂ ಸಹ ಅದೇ ಸಂದರ್ಭದಲ್ಲಿ ಈ ಸಭೆಗೆ ಆಯ್ಕೆಯಾಗಿ ಬಂದೆ. ನನಗೂ ಅವರಿಗೂ 3 ವರ್ಷಗಳ ಕಾಲ ವಯಸ್ಸಿನಲ್ಲಿ ವ್ಯತ್ಯಾಸ ಅಷ್ಟೆ. ಸಮಕಾಲೀನರಾಗಿ ಕೆಲಸ

ಮಾಡತಕ್ಕ ಅವಕಾಶ ಸಿಕ್ಕಿತ್ತು. ಅಷ್ಟೇ ಅಲ್ಲದೆ ಅನೇಕ ಸಂದರ್ಭಗಳಲ್ಲಿ ಅವರನ್ನು ನಾನು ವೈಯಕ್ತಿಕವಾಗಿ ಭೇಟಿಯಾಗುವ, ಅವರ ಹತ್ತಿರ ಚರ್ಚೆ ಮಾಡತಕ್ಕ ಮತ್ತು ಮಾತನಾಡತಕ್ಕ ಅವಕಾಶಗಳು ವಿಪುಲವಾಗಿ ದೊರೆತ್ತಿದ್ದವು. ಅವರು ಕಂಡದ್ದನ್ನು ಕಂಡಹಾಗೆ ಹೇಳಿಯೇ ತೀರುತ್ತಿದ್ದರು. ಅದಕ್ಕೆ ಸಾಕಷ್ಟು ಉದಾಹರಣೆಗಳು ಇವೆ; ಪತ್ರಿಕಾ ರಂಗದ ಬಗ್ಗೆ ಅವರು ಹೇಳಿರತಕ್ಕ ಮಾತು, ರಾಜಕೀಯದಲ್ಲಿರತಕ್ಕವರಿಗೆ ಹೇಳಿರತಕ್ಕ ಮಾತು. ಹೊನ್ನು, ಹೆಣ್ಣು, ಮಣ್ಣು- ಈ ಮೂರರ ಬಗ್ಗೆ ಆಕರ್ಷಿತರಾಗದೆ ಇರತಕ್ಕವರು ಯಾರೂ ಇಲ್ಲ. ಗುಂಡೂರಾಯರು ಎಲ್ಲರ ಬಗ್ಗೆ ಆಕರ್ಷಿಕರಾಗಿರತಕ್ಕವರಾಗಿದ್ದರು. ಅವರ ದೊಡ್ಡಸ್ತಿಕೆ ಏನೆಂದರೆ ಬಾಯಾರೆ ಅವರೇ ಹೇಳುತ್ತಿದ್ದರು. ಇದನ್ನು ರಾಜಕೀಯದಲ್ಲಿರತಕ್ಕವರು ಅನೇಕ ಜನ ಮಾಡುವುದಿಲ್ಲ. ಅಂಥ ಎದೆಗಾರಿಕೆ,ದಿಟ್ಟತನ ಇರತಕ್ಕವರಾಗಿದ್ದರು. ಅವರನ್ನು ಈ ರಾಜ್ಯದ ರೈತರು ಮರೆಯುವುದಕ್ಕೆ ಸಾಧ್ಯವಿಲ್ಲ. ನಮ್ಮ ಕಡೆ ಇವತ್ತು ಯಾವುದೇ ಹಳ್ಳಿಯಲ್ಲಿ ನೀರಾವರಿ ಪಂಪುಸೆಟ್ಟುಗಳನ್ನು, ವಿದ್ಯುಚ್ಛಕ್ತಿಯನ್ನು ಉಪಯೋಗಿಸತಕ್ಕ ರೈತರು ಯಾರಿದ್ದಾರೆ ಅವರನ್ನು ಕೇಳಿದರೆ ಗುಂಡೂರಾಯರ ಕಾಲದಲ್ಲಿ ಉಚಿತವಾಗಿ ವಿದ್ಯುಚ್ಛಕ್ತಿ ದೊರಕಿತ್ತು ಎಂದು ಹೇಳುತ್ತಾರೆ. ಈ ಮಾತು ಪ್ರತಿ ಹಳ್ಳಿಯಲ್ಲಿ ಜನಜನಿತವಾಗಿದೆ. ಒಂದು ಕಡೆಯ ಚಿತ್ರ ಈ ತರಹ ಆದರೆ ಇನ್ನೊಂದು ಕಡೆ ಸುಮಾರು 139 ಜನ ರೈತರನ್ನು ಅವರು ಮುಖ್ಯಮಂತ್ರಿಯಾಗಿದ್ದಂತಹ ಕಾಲದಲ್ಲಿ ಅವರ ಗುಂಡಿಗೆ ಆಹುತಿಯಾಗಿರತಕ್ಕಂತಹ ಉದಾಹರಣೆ ಕೂಡ ಇದೆ. ಈ ರೀತಿಯಾಗಿ ಕಂಡಿದ್ದನ್ನು ಮಾಡತಕ್ಕಂಥಾದ್ದು, ಮಾಡಿದ್ದನ್ನು ಹೇಳತಕ್ಕಂಥಹ ಎದೆಗಾರಿಕೆಯುಳ್ಳಂತಹ ವ್ಯಕ್ತಿತ್ವ ಅವರದು. ನಿರ್ದಾಕ್ಷಿಣ್ಯವಾಗಿ ಅವರು ಚುನಾವಣೆ ಸಂದರ್ಭಗಳಲ್ಲಿ ಕೆಲವು ಕಡೆ ಹೋಗಿ ಮಾತನಾಡುತ್ತ ಚುನಾವಣೆಗೆಲ್ಲಾ ಹಣವನ್ನು ಯಾರು ಕೊಟ್ಟರು ಎಂದು ನೇರವಾಗಿ ಹೇಳುತ್ತಿದ್ದರು. ಆ ತರಹ ನೇರವಾಗಿ ನುಡಿಯತಕ್ಕಂಥವರು ಬಹುಶಃ ಯಾರೂ ಇಲ್ಲ. ಹಣವನ್ನು ಯಾರು ಕೊಡುತ್ತಾರೆ, ಯಾವರೀತಿ ಚುನಾವಣೆ ನಡೆಯುತ್ತದೆ ಎನ್ನತಕ್ಕಂಥಾದ್ದನ್ನು ನೇರವಾಗಿ ಹೇಳತಕ್ಕಂಥವರು ಯಾರನ್ನು ಕೂಡ ನನ್ನ ಕಣ್ಣೆದುರಿಗೆ ನೋಡಿದಂತಹ ಉದಾಹರಣೆ ಇರಲಿಲ್ಲ. ಇಂತಹ ವೈರುಧ್ಯಗಳಿಗೆ ಹೆಸರಾಗಿದ್ದ ಶ್ರೀ ಗುಂಡೂರಾಯರು ಇವತ್ತಿನ ದಿವಸ ನಮ್ಮ ಕಣ್ಣ ಮುಂದೆ ಇಲ್ಲ. ಅವರ ಒಳ್ಳೆಯತನವನ್ನು ಈ ಜನ ಜ್ಞಾಪಕದಲ್ಲಿ ಇಟ್ಟುಕೊಂಡಿರುತ್ತಾರೆ. ಅವರು ರೈತರಿಗೆ ಪಂಪ್‌ಸೆಟ್ಟಿಗೆ ಉಚಿತವಾಗಿ ವಿದ್ಯುತ್ತನ್ನು ನೀಡಿರತಕ್ಕಂಥಾದ್ದು. ಅವರು ಮಾಡಿರತಕ್ಕಂತಹ ಕೆಟ್ಟ ಕೆಲಸ ಎಂದರೆ ಅವರ ಕಾಲದಲ್ಲಿ 139 ಜನ ರೈತರನ್ನು ಗುಂಡಿಟ್ಟು ಸಾಯಿಸಿದ್ದನ್ನು ಕೂಡ ರಾಜ್ಯದ ರೈತರು ಜ್ಞಾಪಕದಲ್ಲಿ ಇಟ್ಟುಕೊಂಡಿರುತ್ತಾರೆ. ಈ ರೀತಿಯಾಗಿ ಅವರ ವರ್ಣಮಯವಾದಂತಹ ರಾಜಕೀಯ ಜೀವನದಲ್ಲಿ ಅವರು ಮಾಡಿರತಕ್ಕಂತಹ ಅನೇಕ ಒಳ್ಳೆಯ ಕೆಲಸವನ್ನು ಮತ್ತು ಕೆಟ್ಟದ್ದನ್ನು ರಾಜ್ಯದ ಜನತೆ ಬಹಳಷ್ಟು ಕಾಲ ಜ್ಞಾಪಕದಲ್ಲಿ ಇಟ್ಟುಕೊಂಡಿರುತ್ತಾರೆ. ಅಂತಹ ವ್ಯಕ್ತಿ ಇವತ್ತಿನ ದಿವಸ ನಮ್ಮ ಕಣ್ಣಮುಂದೆ ಇಲ್ಲ. ಸ್ನೇಹಿತರಲ್ಲಿ ಅವರನ್ನೇ ನಂಬಿರತಕ್ಕಂಥವರು ಎಂದರೆ, ಅತ್ಯಂತ ಹತ್ತಿರದ ಸ್ನೇಹಿತರಾಗಿದ್ದರೆ ಅವರು ಎಲ್ಲಾ ಮಟ್ಟಕ್ಕೂ ಹೋಗಿ ಅವರಿಗೆ ಸಹಾಯ ಮಾಡತಕ್ಕಂತಹ ಒಂದು ದಾಷ್ಟ್ರತ್ವ ಇರತಕ್ಕಂತಹ ವ್ಯಕ್ತಿತ್ವ ಅವರದು. ಇವತ್ತು ಅವರು ನಮ್ಮ ಕಣ್ಣ ಮುಂದೆ ಇಲ್ಲ, ಅದಕ್ಕಾಗಿ ಅವರಿಗೆ ನಾನು ಶ್ರದ್ದಾಂಜಲಿಯನ್ನು ಅರ್ಪಿಸುತ್ತೇನೆ. ಅದೇ ರೀತಿಯಲ್ಲಿ ದೇಶದ ಮಹಾನ್ ಯೋಧರಾದ ಫೀಲ್ಡ್ ಮಾರ್ಷಲ್ ಹುದ್ದೆಗೆ ಏರಿದಂಥವರು, ನಮ್ಮ ಕನ್ನಡ ನಾಡಿನ ವೀರಪುತ್ರರಾಗಿ ಬೆಳೆದಿರತಕ್ಕಂಥವರು ಕಾರ್ಯಪ್ಪನವರು. ಯಾರಿಗೂ ಸಲ್ಲದೇ ಇರತಕ್ಕಂತಹ ಗೌರವ ಅವರಿಗೆ

ಸಂದಿತ್ತು. ಅತ್ಯಂತ ಯೋಧರಲ್ಲಿ ಯೋಧರಾಗಿ ಇದ್ದಂತಹವರು, ರಾಷ್ಟ್ರದ ಸೇವೆಗೆ ಸದಾಕಾಲ ತೊಡಗಿರತಕ್ಕಂಥವರಾಗಿದ್ದ ಕಾರ್ಯಪ್ಪನವರು ನಮ್ಮ ಕಣ್ಣಮುಂದೆ ಇಲ್ಲ. ಹಾಗೆಯೇ ಮಾನ್ಯ ಜಿ.ಎಸ್. ಆಚಾರ್ಯರವರೂ ಸಹ ನನ್ನ ಜೊತೆಯಲ್ಲಿ ಈ ಸದನಕ್ಕೆ ಚುನಾಯಿತರಾಗಿ ಬಂದಿದ್ದಂಥವರು. ಅವರು ನಿಯಮ 334ರಲ್ಲಿ ಮತ್ತು ಪ್ರಶ್ನೆಗಳನ್ನು ಕಳುಹಿಸತಕ್ಕಂಥಾದ್ದರಲ್ಲಿ ನಿಸ್ಸಿಮರು. ಬಹುಶಃ ನಮ್ಮ ವಿಧಾನಸಭೆಯ ಅಂಕಿಅಂಶಗಳನ್ನು ಲೆಕ್ಕ ಹಾಕಿದರೆ ನಿಯಮ 334ನ್ನು ಅವರು ಕಳುಹಿಸಿದಷ್ಟು ಬೇರೆ ಯಾರೂ ಕಳುಹಿಸಿರುವುದಕ್ಕೆ ಸಾಧ್ಯ ಇರಲಿಲ್ಲ. ಸದನದಲ್ಲಿ ಅವರು ಎದ್ದರೆಂದರೆ ನಿಯಮ 334ರ ಬಗ್ಗೆ ಕೇಳುತ್ತಾರೆ ಎಂದು ನಾನಂತೂ ಭಾವಿಸುತ್ತಿದ್ದೆ. ಅವರು ಸಕ್ರೀಯವಾಗಿ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿದ್ದರು ಅಷ್ಟೇ ಅಲ್ಲದೆ ಅನೇಕ ಗಹನವಾದಂತಹ ವಿಚಾರವನ್ನು ಸದನದ ಗಮನಕ್ಕೂ ಮತ್ತು ಸರ್ಕಾರದ ಗಮನಕ್ಕೂ ಕೂಡ ಅವರು ತರತಕ್ಕಂಥವರಾಗಿದ್ದರು. ಅವರು ಸದಾ ಲವಲವಿಕೆಯಿಂದ ಇಲ್ಲಿ ಸದನದಲ್ಲಿ ಕೆಲಸ ಮಾಡತಕ್ಕಂಥವರಾಗಿದ್ದರು. ಆದರೆ ದುರಾದೃಷ್ಟವೇನೆಂದರೆ ಅವರು ಮಗನಿಗೆ ಮದುವೆ ಮಾಡಿದ ಕೆಲವೇ ದಿವಸಗಳಲ್ಲಿ ಮಗ ಮತ್ತು ಸೊಸೆಯ ಸುಖಮಯವಾದಂತಹ ಜೀವನವನ್ನು ನೋಡತಕ್ಕಂತಹ ಅವಕಾಶ ಅವರಿಗೆ ದೊರೆಯಲಿಲ್ಲ. ಇಂದು ಅವರೂ ಸಹ ನಮ್ಮ ಕಣ್ಣಮುಂದೆ ಇಲ್ಲ, ಅವರಿಗೂ ಸಹ ನಾನು ಶ್ರದ್ಧಾಂಜಲಿ ಅರ್ಪಿಸುತ್ತಾ ನಮ್ಮ ಕನ್ನಡದ ಭಾಷೆಗೆ, ಕನ್ನಡದ ಸಾಹಿತ್ಯಕ್ಕೆ ಅಮೋಘವಾದಂತಹ ಸೇವೆಯನ್ನು ಸಲ್ಲಿಸಿರತಕ್ಕಂತಹ ರಾಮಾನುಜಂರವರೂ ಸಹ ಇಲ್ಲ. ಅವರು ಕರ್ನಾಟಕದಲ್ಲಿ ಇಲ್ಲದೇ ಇದ್ದರೂ ಸಹ ಅಮೇರಿಕ ದೇಶದಲ್ಲಿ ಇದ್ದುಕೊಂಡು ಕನ್ನಡದ ಸೇವೆಯನ್ನು ಸ್ಥಳೀಯ ಕವಿಗಳು ಮತ್ತು ಸಾಹಿತಿಗಳಿಗಿಂತ ಯಾವ ವಿಧದಲ್ಲೂ ಕಡಿಮೆ ಇಲ್ಲದಂತಹ ರೀತಿಯಲ್ಲಿ ಕನ್ನಡದ ಭಾಷೆಯ ಸೇವೆಯನ್ನು ಮಾಡಿರತಕ್ಕಂತಹ ರಾಮಾನುಜಂರವರೂ ಕೂಡ ನಮ್ಮ ಮುಂದೆ ಇಲ್ಲ. ರಾಮಾನುಜಂರವರಂತಹವರು ಸಾಯಬಾರದು. ಆದರೆ ಏನು ಮಾಡುವುದು, ವಿಧಿ ಯಾರನ್ನೂ ಬಿಡುವುದಿಲ್ಲ. ವಿಧಿ ಎಲ್ಲವನ್ನೂ ಕೊಂಡು ಹೋಗುತ್ತದೆ. ಇನ್ನು ಉಳಿದ ನಮ್ಮ ಅನೇಕ ಮಾಜಿ ಶಾಸಕರು ಸಹ ಈ ಸದನದಲ್ಲಿ ಕೆಲಸ ಮಾಡಿರತಕ್ಕಂಥವರು ನಮ್ಮ ಕಣ್ಣಮುಂದೆ ಇಲ್ಲ. ಅವರಿಗೆಲ್ಲರಿಗೂ ನಾನು ಶ್ರದ್ಧಾಂಜಲಿಯನ್ನು ಅರ್ಪಿಸಿ ಈ ಸದನದ ಮುಂದೆ ತಾವು ಮತ್ತು ನಾಯಕರು ಇಟ್ಟಿರತಕ್ಕಂತಹ ಪ್ರಸ್ತಾಪಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ ತಮಗೆ ವಂದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಮ್ಮ ರಾಜ್ಯ ಕಗ್ಗತ್ತಲಿನಲ್ಲಿ ಇದೆ. ನಾನಂತೂ ಇದನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಈ ಶಾಸನಸಭೆ ಪ್ರಾರಂಭವಾದಾಗಿನಿಂದಲೂ ಒಂದೊಂದು ರೀತಿಯ ದುಃಖದ ವಾತಾವರಣದಲ್ಲಿ ನಾವು ಪ್ರಾರಂಭ ಮಾಡುತ್ತಿದ್ದೇವೆ. ಹೋದ ಶಾಸನಸಭೆಯ ಸಂದರ್ಭದಲ್ಲಿ ಶ್ರೀಮಾನ್ ಬಸವಲಿಂಗಪ್ಪನವರನ್ನು ನೆನೆಸಿಕೊಂಡು ನಾವು ದುಃಖ ಸಾಗರದಲ್ಲಿ ಇದ್ದೆವು. ಒಬ್ಬ ಧೀಮಂತ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ. ಇವತ್ತಿನ ಈ ಒಂದು ಸಭೆಯಲ್ಲಿ ನಮ್ಮ ಆಚಾರ್ ಒಬ್ಬರದ್ದೇ ಸಂತಾಪ ಸೂಚನೆ ಮಾಡಿ ಸಭೆ ಮುಂದೆ ಹೋಗುತ್ತದೆಂದು ನಾವು ಭಾವನೆ ಮಾಡಿದ್ದೆವು. ಶ್ರೀಮಾನ್ ಗುಂಡೂರಾಯರಿಗೆ ಈ ಸಭೆ ಸಂತಾಪ ಸೂಚಿಸುತ್ತದೆಂದು ಇಷ್ಟು ಬೇಗ ನಾವು ಯಾರೂ ಅಂದುಕೊಂಡಿರಲಿಲ್ಲ. ಆ ಒಂದು ವ್ಯಕ್ತಿತ್ವದ ಬಗ್ಗೆ ನಾನಂತೂ ಬಹಳ ಹತ್ತಿರದಿಂದ ಸ್ನೇಹಿತನಾಗಿ ನೋಡಿದ್ದೇನೆ. ಅವರ ಸಾವನ್ನು ಅವರೇ ಕಂಡಿದ್ದರೋ ಇಲ್ಲವೋ ಎನ್ನುವಷ್ಟು ನೋವು ಆಗುತ್ತದೆ. ಮಗನನ್ನು ಮತ್ತು ಸೊಸೆ ಆಗುವಾಕೆಯನ್ನು ಕರೆಯಿಸಿ

ತಮ್ಮ ಎದುರೇ ಮದುವೆಯಾಗಲಿ ಎಂದು ಇಬ್ಬರನ್ನೂ ಕೈಹಿಡಿಸಿದ ಆ ಒಂದು ವಾತಾವರಣ ಅವರು ಎಷ್ಟು ಹೃದಯ ಬಿಚ್ಚಿ ಯಾವ ರೀತಿ ಸಾಗುತ್ತಿದ್ದರು ಎನಿಸುತ್ತದೆ. ಬಹಳ ದಿವಸ ನಾವು ಜೊತೆಯಲ್ಲಿ ಸ್ನೇಹಿತರಾಗಿದ್ದೆವು. ಅವರ ಆ ಒಂದು ವ್ಯಕ್ತಿತ್ವ ಎಲ್ಲಾ ದೃಷ್ಟಿಯಿಂದಲೂ ವರ್ಣಮಯವಾಗಿತ್ತು. ಅವರು ಮುಖ್ಯಮಂತ್ರಿ ಪದವಿ ಮುಗಿದ ನಂತರವೂ ಯಾವ ಒಂದು ಅಧಿಕಾರ ಇಟ್ಟು ಕೊಂಡಿದ್ದರು ಎಂದರೆ, ಅವರು ಯಾವುದೇ ಸಾರ್ವಜನಿಕ ಸಭೆಗೆ ಬಂದರೂ ಅವರದ್ದೇ ಆದ ಒಂದು ವಿಶಿಷ್ಠ ಅಧಿಕಾರ ಅವರ ವ್ಯಕ್ತಿತ್ವದಲ್ಲಿ ಎದ್ದು ಕಾಣುತ್ತಿತ್ತು. ನೇರವಾದ ಮಾತುಗಾರಿಕೆ; ದಿಟ್ಟತನ; ಗತ್ತುಗಾರಿಕೆ. ಅವರು ಮಾತನಾಡುತ್ತಿದ್ದರೆ, ನುಡಿದಿದ್ದೆಲ್ಲವೂ ಮಾತೇ. ಮಾತನಾಡುವಾಗ ಹಿಂದೆ ಮುಂದೆ ಯೋಚನೆ ಮಾಡಿ ಮಾತನಾಡುತ್ತಿರಲಿಲ್ಲ. ಯೋಚನೆ ಮಾಡಿ ಹೇಳಬೇಕೆನ್ನುವ ಭಾವನೆ ಇರಲಿಲ್ಲ. ನೇರವಾಗಿ ಎಲ್ಲವನ್ನೂ ಹೇಳುತ್ತಿದ್ದರು. ನಾನು ಹೇಳಿದ್ದೇ ಸರಿ ಎಂದು ಹೇಳುತ್ತಿದ್ದರು. ಅವರನ್ನು ನೋಡಬೇಕೆನ್ನುವ ಆಕಾಂಕ್ಷೆಯಿಂದ ಲಂಡನ್‌ಗೂ ಹೋಗಬೇಕೆಂದು ನಾನು ಪ್ರಯತ್ನಪಟ್ಟು ನಾನು ವೆಂಕಟೇಶ್ ಅವರಿಗೂ ಹೇಳಿದೆ. ಪಾಸ್‌ಪೋರ್ಟ್ ಮಾಡೋಣ, ಏನಾದರೂ ಮಾಡಿ ಹೋಗೋಣ ಎಂದು ಹೇಳಿ ನಾನು ಪಾಸ್‌ಪೋರ್ಟ್ ಕಛೇರಿಯಿಂದ ಫಾರ್ಮ್ ಕೂಡ ತರಿಸಿದೆ. ಧರ್ಮಸಿಂಗ್ ಅವರು ಹಾಗೂ ಖರ್ಗೆಯವರು ಹೋಗುತ್ತಾರೆಂದು ಗೊತ್ತಾದಾಗ ನನ್ನೊಬ್ಬನನ್ನು ಕರೆದುಕೊಂಡು ಹೋಗಿ ನಾನೂ ಬರಬೇಕಾಗಿದೆ ಎನ್ನುವಷ್ಟು ವ್ಯಕ್ತಿತ್ವ ಅವರಲ್ಲಿತ್ತು. ಆ ವ್ಯಕ್ತಿತ್ವವನ್ನು ಇನ್ನು ನಾವು ಕಾಣುವುದಕ್ಕೆ ಸಾಧ್ಯವಿಲ್ಲ. ನಾನು ಮತ್ತು ಅವರು ಭಾಗವಹಿಸಿದ್ದ ಕೊನೆಯ ಸಭೆ ಮಂಡ್ಯದಲ್ಲಿ; ಆ ರೈತ ಸಮ್ಮೇಳನಕ್ಕೆ ಅವರು ಬಂದಿದ್ದರು. ಆ ಸಭೆಗೆ ಶಾಸಕರು ಯಾರೂ ಹೋಗಬಾರದು ಎನ್ನುವ ಸನ್ನಿವೇಶ ಇದ್ದಾಗ ಮಾಜೀ ಮುಖ್ಯಮಂತ್ರಿಯಾಗಿ ನಾನು ಬರುತ್ತೇನೆಂದರು. ರೈತಚಳುವಳಿಗೆ ನನ್ನ ಜೀವ ಕೊಡುವುದಕ್ಕೆ ಸದಾ ಸಿದ್ಧ ಎಂದು ಅವರು ಗುಡುಗಿದ್ದರು. ಆ ಸಭೆಯಲ್ಲಿ ಚಂದ್ರೇಗೌಡರು ಇದ್ದರು; ವಿರೋಧ ಪಕ್ಷದ ನಾಯಕರೂ ಇದ್ದರು. ಆ ವ್ಯಕ್ತಿತ್ವ, ಸ್ವಚ್ಛಂದ ಹೃದಯ, ಆ ಹೃದಯವಂತಿಕೆ ಆ ಕರುಣಾಮಯಿ, ಸ್ನೇಹಜೀವಿ ನಾಲ್ಕು ಕೋಟಿ ಜನರ ಮಧ್ಯೆ ನಿಂತಾಗ ಬಹಳ ಎತ್ತರವಾಗಿ ಕಾಣುತ್ತಿದ್ದರು; ಗುಂಡೂರಾಯರು. ಅಂತಹ ಒಬ್ಬ ಧೀಮಂತ ವ್ಯಕ್ತಿತ್ವವುಳ್ಳವರನ್ನು ನಾವು ಕಳೆದುಕೊಂಡಿದ್ದೇವೆ. ಇವತ್ತು ಈ ವಿಧಾನಸೌಧದ ಮುಂದೆ ಡಾ: ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ ಬರಬೇಕಾದರೆ ಗುಂಡೂರಾಯರೇ ಕಾರಣ; ಇನ್ನು ಯಾರೂ ಅಲ್ಲ. ಅವರನ್ನು ಈ ನಾಡಿಗೆ ನಾಡೇ ನೆನೆಸಿಕೊಳ್ಳಬೇಕಾಗಿದೆ. ಎಂತಹ ನಷ್ಟ ಆಗಿದೆ ಎಂದರೆ ಎಣಿಸಲಾರದಷ್ಟು ನಷ್ಟ ಆಗಿದೆ. ಅವರು ಮುಖ್ಯಮಂತ್ರಿಯಾಗಿದ್ದಾಗ ಅವರ ತಂದೆ ನನ್ನ ಹತ್ತಿರ ಬಂದು ನೀವಾದರೂ ಹೇಳಿ ನಾನೊಂದು ವರ್ಗ ಮಾಡಿಸಬೇಕು ನನ್ನ ಮಾತು ಕೇಳುವುದಿಲ್ಲ ನನ್ನ ಮಗ ಎಂದು ಹೇಳಿದರು. ನಾನು ಹೇಳುತ್ತಾನೆಂದು ಅವರಿಗೆ ಗೊತ್ತಾಯಿತು. ನಮ್ಮ ತಂದೆಯವರು ಹೇಳಿದ್ದಾರಲ್ಲವೆ ನಿಮಗೆ ಖಂಡಿತಾ ನಮ್ಮ ತಂದೆಯವರು ಹೇಳಿದರೂ ನಾನು ಮಾಡುವುದಿಲ್ಲವೆಂದರು. ನಗು ನಗುತ್ತಾ ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದರು. ಮತ್ತೆ ಯಾವಾಗಲೂ ಅವರು ಕಾಲು ಕೆರೆದು ಜಗಳ ತೆಗೆದು ಮೈಮೇಲೆ ಹಾಕಿಕೊಳ್ಳತಕ್ಕದ್ದೆ ಅವರ ಸ್ವಭಾವ. ಮಂಗಳೂರಿನಲ್ಲಿ ಭಾಷಣ ಮಾಡಿ ಪತ್ರಕರ್ತರನ್ನೆಲ್ಲ ಅರಬ್ಬೀಸಮುದ್ರಕ್ಕೆ ಹಾಕಬೇಕೆಂದು ಹೇಳಿದರು. ಅಲ್ಲಿಂದ ಪತ್ರಿಕೆಯವರಿಗೂ ಅವರಿಗೂ ಒಂದೇ ಸಮನೆ ಯುದ್ಧ ನಡೆಯಿತು, ನಡೆದು ನಡೆದು ಕೊನೆಗೆ ಒಂದು ದೊಡ್ಡ ಯುದ್ಧವೇ ಆಯಿತು. ಕೊನೆಯಲ್ಲಿ ಅವರು ಸೋತಾಗ ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ವ್ಯಂಗ್ಯಚಿತ್ರ ಬಂತು. ಅವರ

ಹೆಲಿಕಾಪ್ಟರ್ ಒಂದು ಬಂಡೆಗೆ ಹೊಡೆದು ಚೂರು ಚೂರಾಗಿರತಕ್ಕ ದೃಶ್ಯ, ಅಂದರೆ ಎಷ್ಟು ಕ್ರೋಧ ಬೆಳೆದಿತ್ತು ಎನ್ನತಕ್ಕ ಮಾತನ್ನು ಇಲ್ಲಿ ನಾನು ನೆನೆಸಿಕೊಳ್ಳುತ್ತಾ ಇದ್ದೇನೆ. ಇಷ್ಟು ಇದ್ದರೂ ಸಹ ಅವರು ಹೇಳಿದ ಮಾತಿಗೂ ಅವರ ಹೃದಯಕ್ಕೂ ಬಹಳ ವ್ಯತ್ಯಾಸ. ಹೃದಯದಲ್ಲಿ ಮಾತ್ರ ಅವರಿಗೆ ಯಾರ ಬಗ್ಗೆಯೂ ವಿರೋಧ ಇರಲಿಲ್ಲ. ಬ್ರಾಹ್ಮಣರ ಸಮ್ಮೇಳನಕ್ಕೆ ಹೋಗುತ್ತಿದ್ದರು. ಅವರ ಮಾತಿನಲ್ಲಿ ಇವರು ಬ್ರಾಹ್ಮಣರ ಪರವಾಗಿ ಬಹಳ ದಿಟ್ಟ ನಿರ್ಧಾರ ಮಾಡುತ್ತಾರೆನ್ನತಕ್ಕವರು ಅನೇಕರು ಇವರನ್ನು ಟೀಕೆ ಮಾಡಬೇಕೆಂದು ಇದ್ದರು. ಅವರು ಖಂಡಿತಾ ಬ್ರಾಹ್ಮಣರೂ ಅಲ್ಲ. ಸುಮ್ಮನೆ ಅವರಿಗೊಂದು ವೇದಿಕೆ ಬೇಕಾಗಿತ್ತು ಅದು ಬ್ರಾಹ್ಮಣರ ಗುಂಪು ಅಲ್ಲಿ ಹೋಗಿ ಮಾತನಾಡುತ್ತಿದ್ದರು. ಆ ಬ್ರಾಹ್ಮಣರ ಸಭೆಗೆ ಹೋದರೂ ಅವರನ್ನು ಹಿಯ್ಯಾಳಿಸುವ ರೀತಿ, ನಾನು ಕೋಳಿ ತಿನ್ನತಕ್ಕ ಬ್ರಾಹ್ಮಣ ಎಂದು ಹೇಳಿದಾಗ ಅದೊಂದು ದೊಡ್ಡ ವಿವಾದಕ್ಕೆ ಎಡೆ ಮಾಡಿತು. ಅನೇಕ ಜನ ವೈದಿಕ ಬ್ರಾಹ್ಮಣರೆಲ್ಲ ಇವರ ಬಗ್ಗೆ ಕೈ ತೋರಿಸುವ ಹಾಗೆ ಆಯಿತು. ಪ್ರತಿ ವಾಕ್ಯವನ್ನೂ ಸಹ, ಏನು ಈ ತರಹ ಹೇಳುತ್ತಿದ್ದಾರೆ ಎಂದು ಎಲ್ಲರೂ ಚಿಂತಿಸಬೇಕಾಗಿತ್ತು ಅವರು ಮಹದೇಶ್ವರನ ಬೆಟ್ಟಕ್ಕೆ ನನ್ನ ಜೊತೆಯಲ್ಲಿ ಬರುತ್ತಿದ್ದರು. ನನ್ನ ಊರಿಗೆ ಬರುತ್ತಿದ್ದರು ಅಲ್ಲಿಗೆ ಬಂದು ಹುರುಳಿ ಕಟ್ಟಿನ ಸಾರಿನಲ್ಲಿ ಊಟ ಮಾಡುತ್ತಿದ್ದರು. ಅಂತಹ ಒಂದು ವಿಶಿಷ್ಟವಾದ ವ್ಯಕ್ತಿತ್ವ. ನಮ್ಮ ಕ್ರಿಕೆಟ್ ಸಂಸ್ಥೆಯ ನಾಗರಾಜ್‌ರವರು ಗಂಡೂರಾಯರನ್ನು ಲಂಡನ್‌ನಲ್ಲಿ ಹೋಗಿ ನೋಡಿದರಂತೆ. ಅವರನ್ನು ನೋಡಿ ಅವರ ವ್ಯಕ್ತಿತ್ವವನ್ನು ನನಗೆ ಹೇಳಿದರು. ಅವರು ಅಲ್ಲಿ ನಿಂತು ನೋಡಿ ಕಣ್ಣೀರು ಹಾಕಿ ಬಂದರಂತೆ. ನಾನು ಕ್ರಿಕೆಟ್ ಸ್ಟೇಡಿಯಂಗೆ ಕರೆದಾಗ ಗುಂಡೂರಾಯರು ಎಂತಹ ಅಜಾನುಬಾಹು ಆಗಿದ್ದಂಥವರು ಅಂದು ಬಂದು ಉದ್ಘಾಟನೆ ಮಾಡಿದ್ದರು. ಆದರೆ ಲಂಡನ್ನಿನ ಆಸ್ಪತ್ರೆಯಲ್ಲಿ ಒಂದು ಮೂಲೆಯಲ್ಲಿ ಸಣ್ಣ ಶರೀರವಾಗಿ, ತಲೆಯ ಕೂದಲೆಲ್ಲ ಹೋಗಿದ್ದನ್ನು ನೋಡಿ ಅದನ್ನು ವರ್ಣನೆ ಮಾಡಿ ನನ್ನ ಎದುರಿಗೆ ಆ ನಾಗರಾಜುರವರು ಅತ್ತರು. ಅಲ್ಲಿ ನಿಂತು ನೋಡಿ ಗಳಗಳನೇ ಅತ್ತು ಬಂದರಂತೆ. ಅಂತಹ ಒಬ್ಬ ವ್ಯಕ್ತಿ ಇಲ್ಲಿ ಬಂದು ಎಲ್ಲೋ ಒಂದು ಮೂಲೆಯಲ್ಲಿ ಸೊರಗಿದ್ದಾರಲ್ಲ ಎಂದು ಬಹಳ ನೊಂದುಕೊಂಡರಂತೆ. ನಾನು ಗುಂಡೂರಾಯರಂತಹ ರಾಜಕಾರಣ, ಅವರು ಬೆಳೆದಂತಹ ದಾರಿ, ಅವರು ರಾಜ್ಯ ವಾರ್ತಾ ಮಂತ್ರಿಯಾಗಿದ್ದಾಗ ಅವರ ಕಛೇರಿಯಲ್ಲಿ ಕುಳಿತಿದ್ದಾಗ ಒಬ್ಬ ಪತ್ರಕರ್ತರೊಬ್ಬರು ಬಂದು ಸ್ವಾಮಿ ನಾನು ಯಾವುದೋ ಒಂದು ತೊಂದರೆಯಲ್ಲಿದ್ದೇನೆ ನೀವು ಒಂದು ಒಳ್ಳೆಯ ಜಾಹಿರಾತು ಕೊಡಬೇಕು ನನಗೆ ತುಂಬಾ ಸಹಾಯವಾಗುತ್ತದೆಂದು ಹೇಳಿದರು. ಗುಂಡೂರಾಯರು ಏನು, ಎಷ್ಟು ಸಾವಿರ ರೂಪಾಯಿಗಳ ಜಾಹಿರಾತು ಕೊಡಬೇಕೆಂದು ಕೇಳಿದರು. ಅವರು 5 ಸಾವಿರ ಜಾಹಿರಾತು ಕೊಡಿಯೆಂದರು. ಅದಕ್ಕೆ ಇವರು 5 ಸಾವಿರ ಅಲ್ಲ 10 ಸಾವಿರ ರೂಪಾಯಿ ಜಾಹಿರಾತು ಕೊಡುತ್ತೇನೆಂದು ಬರೆದಂತಹ ಬರವಣಿಗೆಯ ಧಾಟಿ ಆ ಮನುಷ್ಯನಿಗೆ ಇದ್ದಂತಹ ವಿಶಿಷ್ಟವಾದಂತಹ ವ್ಯಕ್ತಿತ್ವ. ಅವರದೇ ಆದಂತಹ ಒಂದು ವ್ಯಕ್ತಿತ್ವ. ಎಲ್ಲಾ ಜಿಲ್ಲೆಗಳಲ್ಲಿ ಸಚಿವಸಂಪುಟದ ಸಭೆ ಮಾಡಬೇಕೆಂದು ಹೊರಟರು. ಕಡತಗಳ ವಿಲೇವಾರಿಯೆಂದು ಅದೊಂದು. ಅವರ ಪ್ರತಿ ವಿಚಾರದಲ್ಲೂ ನಾವು ಇವತ್ತಿನ ದಿವಸ ನೆನೆಸಿಕೊಳ್ಳುತ್ತಿದ್ದೇವೆ. ಅವರು ಮಾಡಿದಂತಹ ಕೆಲಸಗಳು ಇತಿಹಾಸದಲ್ಲಿ ಲೀನವಾಗುತ್ತಿವೆಯೇ ಹೊರತು ನಮ್ಮ ಕಣ್ಣೆದುರಿಗೆ ಅವರು ಇಲ್ಲ. ನನಗಂತೂ ನಿನ್ನೆ ಮೂರು ಗಂಟೆಗೆ ಗೊತ್ತಾಯಿತು. ನಾನು ಚಾಮರಾಜನಗರದ ಯಾವುದೋ ಒಂದು ಹಳ್ಳಿಗೆ ಹೋಗಿದ್ದೆ ಮಧ್ಯಾಹ್ನ 3ಗಂಟೆಗೆ ಗೊತ್ತಾಯಿತು. ನಾನು ಪ್ರಾಮಾಣಿಕವಾಗಿ ಹೇಳುವುದಾದರೆ, ನಾನು ನನ್ನ ಮನೆಯಲ್ಲಿ

ಯಾರನ್ನಾದರೂ ಕಳೆದುಕೊಂಡರೆ ನನ್ನ ತಂದೆ ಸತ್ತರೆ ಎಷ್ಟು ದುಃಖವೋ ಅಷ್ಟೇ ದುಃಖವಾಯಿತು. ಪ್ರಾಮಾಣಿಕವಾಗಿ ನನಗೆ ದುಃಖವಾಯಿತು ಅಷ್ಟೇ ಸ್ನೇಹಮಹಿಯಾಗಿದ್ದರು. ಅಂತಹ ವ್ಯಕ್ತಿತ್ವ ಅವರದು. ಸಾವನ್ನು ತಡೆಯುವುದಕ್ಕೆ ನಮ್ಮಿಂದ ಯಾರಿಂದಲೂ ಸಾಧ್ಯವಿಲ್ಲ. ಯಾರಾದರೂ ಹುಟ್ಟಿದಮೇಲೆ ಸಾಯಲೇಬೇಕು. ಆದರೆ ಸಾವಿನ ಸಂದರ್ಭವನ್ನು ನೋಡಿದಾಗ ನಮ್ಮೆಲ್ಲರಿಗೂ ಬಹಳ ನೋವಾಗತಕ್ಕ ಪರಿಸ್ಥಿತಿಯಾಗುತ್ತದೆ. ಇವರನ್ನು ಇಷ್ಟೇ ಗುಣಗಾನ ಮಾಡಿ ಇಲ್ಲಿಗೆ ನಾವು ಬಿಡತಕ್ಕದ್ದು ಸರಿಯೇ ಎನ್ನತಕ್ಕದ್ದನ್ನು ನಾವು ನೀವು ಎಲ್ಲಾ ಚಿಂತನೆ ಮಾಡಬೇಕು. ಚಿಂತನೆ ಮಾಡಬೇಕಾದರೆ ಅವರ ವ್ಯಕ್ತಿತ್ವರಾಜ್ಯದ ಮುಂದಿನ ಪೀಳಿಗೆಗೂ ಕಾಣತಕ್ಕ ಚಿತ್ರ ಅವೊಂದು ವ್ಯಕ್ತಿತ್ವದ ಬಗ್ಗೆ ತಿಳುವಳಿಕೆ ಇರಬೇಕಾದರೆ ನಾವು ಏನಾದರೊಂದು ಕಾರ್ಯಕ್ರಮವನ್ನು ಮಾಡಲೇಬೇಕು. ಈ ಕಾರ್ಯಕ್ರಮವನ್ನು ಮಾಡುವುದಕ್ಕೆ ನಾವು ನಮ್ಮದೇ ಆದಂತಹ ಒಂದು ವಿಚಾರವನ್ನು ನಾವು ಇವತ್ತು ತೀರ್ಮಾನ ಮಾಡಬೇಕಾಗುತ್ತದೆ. ಪ್ರತಿ ಸಾರಿ ನಾವೇನು ಮಾಡುತ್ತಿದ್ದೇವೆ? ಹೋದಸಾರಿ ನಾವು ಬಸವಲಿಂಗಪ್ಪನವರ ಬಗ್ಗೆ ಗುಣಗಾನ ಮಾಡಿದೆವು ಎಲ್ಲಾ ಆಯಿತು ಏನು ಮಾಡಿದ್ದೇವೆ? ಏನೂ ಮಾಡುವುದಕ್ಕೆ ಆಗಿಲ್ಲ. ಅವರನ್ನು ಸ್ಮರಿಸತಕ್ಕ ರೀತಿಯಲ್ಲಿ ಮುಂದಿನ ಪೀಳಿಗೆ ಶತಶತಮಾನಗಳ ಕಾಲ ಅವರ ವ್ಯಕ್ತಿತ್ವವನ್ನು ಸ್ಮರಿಸತಕ್ಕ ಒಂದು ಪವಿತ್ರವಾದ ಸ್ಮರಣೀಯ ಕಾರ್ಯವನ್ನು ನಾವು ಇವತ್ತು ಮಾಡಬೇಕಾಗಿದೆ. ನಿನ್ನೆ ದಿನ ನಾನು

12.00 ಪಿ.ಎಂ.

ಬಹಳ ಸಂತೋಷದಿಂದ ನೋಡಿದೆ. ಪಾರ್ಲಿಮೆಂಟ್ ಹಾಲ್‌ನಲ್ಲಿ ಎಲ್ಲರ ಫೋಟೋಗಳನ್ನು ಹಾಕುತ್ತಿದ್ದಾರೆ. ನಿನ್ನೆ ರಾಜೀವಗಾಂಧಿಯವರ ಫೋಟೋವನ್ನು ಹಾಕುತ್ತಿದ್ದುದನ್ನು ನಾನು ನೋಡಿದೆ. ಆ ಪ್ರಕಾರ ನಮ್ಮಲ್ಲಿ ಒಂದು ಸೆಂಟ್ರಲ್ ಹಾಲ್ ತರಹ ಯಾವುದಾದರೂ ದೊಡ್ಡ ಹಾಲ್ ಎಂದು ಮಾಡಿ ಇಂತಹ ವ್ಯಕ್ತಿಗಳ ಗುಣಗಾನ ಮಾಡತಕ್ಕಂಥವರ ಚಿತ್ರಗಳು, ಪ್ರತಿಮೆಗಳು, ಅವರು ಏನೇನು ಮಾಡಿದ್ದಾರೆ ಎಂಬುದರ ಬಗ್ಗೆ ಸಾಹಿತ್ಯ, ಅವರು ಮಾತನಾಡಿರತಕ್ಕಂಥಾದ್ದು ಇವುಗಳ ಬಗ್ಗೆ ಒಂದು ವಸ್ತು ಸಂಗ್ರಹಾಲಯ ರೀತಿಯಲ್ಲಿ ಮಾಡಿ, ಜೊತೆಗೆ ಅವರ ಚಿತ್ರಪಟ ಬರತಕ್ಕದ್ದು ಬಹಳ ಮುಖ್ಯ. ಏಕೆಂದರೆ ಇವತ್ತು ನಾವು ಗುಣಗಾನ ಮಾಡುತ್ತೇವೆ. ಒಂದು ವಾರ, ತಿಂಗಳವರೆಗೆ ಗುಣಗಾನ ಮಾಡುತ್ತೇವೆ. ಆ ಮೇಲೆ ಮರೆತು ಬಿಡುತ್ತೇವೆ. ಆದ್ದರಿಂದ ಇದರ ಬಗ್ಗೆ ನಾವೆಲ್ಲರೂ ಕುಳಿತು ಚಿಂತನೆಯನ್ನು ಮಾಡಬೇಕಾಗಿದೆ. ಹೀಗೆ ಇಲ್ಲಿ ಒಂದು ಸೆಂಟ್ರಲ್ ಹಾಲ್ ಆಗುತ್ತದೆ ಎಂದು ನಾನು ಅಂದುಕೊಂಡಿದ್ದೆ. ಇದರ ಬಗ್ಗೆ ಯಾರೂ ಗಮನಹರಿಸಲಿಲ್ಲ. ಈಗಲಾದರೂ ಅದು ಆಗಲಿ ಎಂದು ನಾನು ಬಹಳ ಕಳಕಳಿಯಿಂದ ಮನವಿ ಮಾಡುತ್ತೇನೆ. ಇದರ ಬಗ್ಗೆ ಚಿಂತನೆ ಮಾಡಿ ಅವರ ಚಿತ್ರಪಟಗಳು, ಮಾಜಿ ಮುಖ್ಯಮಂತ್ರಿಗಳು, ಅವರು ಮಾಡಿರತಕ್ಕಂಥ ವ್ಯವಸ್ಥೆಗಳು, ಈ ತರಹ ದಿವಂಗತರಾದವರು ಅವರ ಬಗ್ಗೆ ಒಂದು ವಿಶಿಷ್ಟವಾದ ಸ್ಥಾನ ಉಳಿಯಬೇಕಾದರೆ ನಾವು ಒಂದು ಸ್ಮಾರಕ ರೂಪದಲ್ಲಿ ಮಾಡಬೇಕಾದದ್ದು ನಮ್ಮ ಕರ್ತವ್ಯ. ಇನ್ನು ಫೀಲ್ಡ್ ಮಾರ್ಷಲ್ ಕಾರ್ಯಪ್ಪ ನವರು ನಮ್ಮದೇಶದ ಪ್ರಥಮ ಮಹಾದಂಡನಾಯಕರಾಗಿದ್ದರು. ಇವತ್ತು ನೋಡಿ, ಎಷ್ಟು ಕಾಕತಾಳೀಯವಾಗಿದೆ. ಮಾನ್ಯ ಗುಂಡೂರಾಯರು ಮತ್ತು ಕಾರ್ಯಪ್ಪನವರದ್ದೂ ಒಂದೇ ಎತ್ತರ. ಇಬ್ಬರಿಗೂ ಬಹಳ ಸ್ನೇಹ. ಅವರು ಕಾರ್ಯಪ್ಪನವರನ್ನು ಮಾತೆತ್ತಿದರೆ 'ಜನರಲ್' ಅಂತ ಕರೆಯುತ್ತಿದ್ದರು. 'ಜನರಲ್ ಹೇಗಿದ್ದೀರಿ?' ಎಂದು ಕೇಳುತ್ತಿದ್ದರು. ಅವರಿಬ್ಬರ ಸ್ನೇಹ ಅಷ್ಟು ಚೆನ್ನಾಗಿ ಇತ್ತು. ಜನರಲ್ ಕಾರ್ಯಪ್ಪನವರು ತಮ್ಮ

ಕೊನೆಯ ಕಾಲದವರೆಗೆ ಈ ದೇಶದ ಬಗ್ಗೆ ಚಿಂತನೆ ಮಾಡುತ್ತಿದ್ದರು. ಅವರ ಮೂರು ಚಕ್ರದ ಕುರ್ಚಿಯಲ್ಲಿ ಕುಳಿತು ಸಮಾರಂಭಗಳಿಗೆ ಬರುತ್ತಿದ್ದರು. ಇಂತಹ ದೊಡ್ಡ ವ್ಯಕ್ತಿತ್ವ ಇರತಕ್ಕಂಥ ಕಾರ್ಯಪ್ಪನವರು ನಮಗೆಲ್ಲರಿಗೂ ಹೆಮ್ಮೆಯ ಈ ಕನ್ನಡ ನಾಡಿನ ಹೆಮ್ಮೆಯ ವೀರಪುತ್ರ, ಈ ದೇಶದ ಪ್ರಪ್ರಥಮ ಮಹಾ ದಂಡನಾಯಕ. ಅವರಿಗೆ ನಾವು ಎಷ್ಟು ಗೌರವವನ್ನು ಕೊಡಬೇಕಾಗಿದೆಯೋ, ಆ ಮಟ್ಟದಲ್ಲಿ ನಾವು ಗೌರವವನ್ನು ಕೊಡಬೇಕು. ಇದಕ್ಕೆ ಶ್ರೀಮಾನ್ ಯಡಿಯೂರಪ್ಪನವರು ಅವರ ಪ್ರತಿಮೆ ಬೇಕು ಅಂತ ಏನು ಸಲಹೆ ಮಾಡಿದರು, ಅದಕ್ಕೆ ನಾನು ಕೂಡ ಧ್ವನಿಗೂಡಿಸುತ್ತೇನೆ. ಅವರ ಪ್ರತಿಮೆಯನ್ನು ಒಂದು ಪರಿಣಾಮಕಾರಿಯಾದ, ಚೆನ್ನಾಗಿ ಇರತಕ್ಕಂಥ ಸ್ಥಳದಲ್ಲಿ ಹಾಕಬೇಕಾದದ್ದು ನಮ್ಮ ಕರ್ತವ್ಯ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಶ್ರೀಮಾನ್ ಜಿ.ಎಸ್. ಆಚಾರ್ ಅವರು ನಮ್ಮಮುಂದೆ ಇಲ್ಲ. ಅವರು ಯಾವಾಗಲೂ ಹಸನ್ಮುಖಿಗಳು. ರಾಜ್ಯಪಾಲರ ಭಾಷಣ ಇದ್ದಾಗ ಪ್ರಥಮವಾಗಿ ಅವರು ಭಾಷಣ ಮಾಡಿ ಬಹಳ ಸುಲಲಿತವಾಗಿ ಕೆಲವು ಮಾತುಗಳನ್ನು ಆಡಿದ್ದರು. ಬಹಳ ಸಂತೋಷವಾಗಿ ಇರತಕ್ಕಂಥ ವ್ಯಕ್ತಿತ್ವ. ಅವರು ಇವತ್ತು ನಮ್ಮ ಮುಂದೆ ಇಲ್ಲ. ಅವರು ಸಹಕಾರ ಕ್ಷೇತ್ರದಲ್ಲಿ ಅಪಾರವಾದ ಸೇವೆಯನ್ನು ಮಾಡಿರತಕ್ಕಂಥವರು. ಇವತ್ತು ಅವರು ನಮ್ಮ ಮುಂದೆ ಇಲ್ಲದೇ ಇರುವುದು ನಮಗೆ ಅತ್ಯಂತ ನೋವಾಗಿದೆ. ಅದೇ ರೀತಿಯಾಗಿ ನಮ್ಮ ರಾಮಾನುಜಂ ಒಳ್ಳೆಯ ವ್ಯಕ್ತಿತ್ವ ಇದ್ದವರು. ಅವರು ಸಾಹಿತ್ಯ ಕ್ಷೇತ್ರದಲ್ಲಿ ಅಪಾರವಾದಂಥ ಸೇವೆಯನ್ನು ಮಾಡಿ ಸಾಹಿತ್ಯಕ್ಕೆ ಒಂದು ಹೊಸ ಕೊಡುಗೆಯನ್ನು ಕೊಟ್ಟಂಥ ಧೀಮಂತ ವ್ಯಕ್ತಿ. ಇವರೆಲ್ಲರ ಅಗಲುವಿಕೆಯಿಂದ ನಿಜವಾಗಿಯೂ ಕರ್ನಾಟಕಕ್ಕೆ ಅತ್ಯಂತ ನೋವಾಗಿದೆ. ಎಲ್ಲರ ಆತ್ಮಗಳಿಗೆ ಶಾಂತಿ ಸಿಗಲಿ ಎಂದು ನಾನು ಹೇಳುತ್ತೇನೆ. ನನಗೆ ಅತ್ಯಂತ ನೋವಾಗಿದೆ. ನಮ್ಮ ಕಣ್ಣೆದುರಿಗೇ ಗುಂಡೂರಾಯರಿಗೆ ಶ್ರದ್ಧಾಂಜಲಿ ಅರ್ಪಿಸಬೇಕಾಗಿದೆ ಅಂತ ಹೇಳಿ, ತಾವು ಮಂಡಿಸಿರತಕ್ಕಂಥ ನಿರ್ಣಯಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ(ತೀರ್ಥಹಳ್ಳಿ) : – ಸನ್ಮಾನ್ಯ ಅಧ್ಯಕ್ಷರೇ, ಇದು ಒಂದು ವಿಶೇಷವಾದ ಸಂದರ್ಭ. ತಾವು ವ್ಯಕ್ತಪಡಿಸಿದ ಅಭಿಪ್ರಾಯಕ್ಕೂ ಮತ್ತು ಸಭಾನಾಯಕರು ಮತ್ತು ಇನ್ನಿತರು ವ್ಯಕ್ತಮಾಡಿದ ಅಭಿಪ್ರಾಯಕ್ಕೆ ನನ್ನ ಸಹಮತವನ್ನು ಸೂಚನೆ ಮಾಡುತ್ತೇನೆ. ವಿಶೇಷ ಏನೆಂದರೆ, ಈ ಶಾಸನಸಭೆಯಲ್ಲಿ ಕೊಡಗಿನ ಅಜ್ಜನಿಗೂ ಶ್ರದ್ಧಾಂಜಲಿ, ಮೊಮ್ಮಗನಿಗೂ ಶ್ರದ್ಧಾಂಜಲಿ ಅರ್ಪಿಸುತ್ತಿದ್ದೇವೆ. ಕಳೆದ ಮೂರೂವರೆ ತಿಂಗಳಿಂದ ನಿತ್ಯ ನಮಗೆ ಬೆಳಿಗ್ಗೆ ಕೆಲಸ ಇದ್ದದ್ದು ರಾಯರು ಹೇಗಿದ್ದಾರೆ ಎಂದು ಕಂಡಕಂಡ ಸ್ನೇಹಿತರುಗಳನ್ನು ಕೇಳುವುದಾಗಿತ್ತು. ದಿನಕ್ಕೊಂದು ಸುದ್ದಿ ಬರುತಿತ್ತು. ಕಟ್ಟಕಡೆಗೆ ನಾವು ಕೆಲವರು ನಿರ್ಣಯ ಮಾಡಿದೆವು, ನಮ್ಮ ತೊಂದರೆಗಳು ಎಷ್ಟೇ ಇರಲಿ ಒಮ್ಮೆಯಾದರೂ ಅಲ್ಲಿಗೆ ಹೋಗಿನಮ್ಮ ಜೀವನದ ಕೆಲವು ಸವಿಯಾದ ಸಂದರ್ಭಗಳನ್ನು ಅವರೊಡನೆ ನೆನಸಿಕೊಳ್ಳುವುದು ಅಂತ ಹೇಳಿ. ಆದರೆ ಅದು ಸಾಧ್ಯವಾಗಲಿಲ್ಲ. ಇದು ಒಂದು ರೀತಿಯ ವಿಧಿಯ ವಿಪರ್ಯಾಸ. ಮಾನ್ಯ ಗುಂಡೂರಾಯರು ಮತ್ತು ಅನೇಕ ಜನರು ಈಗ ಕಾಲಗರ್ಭದಲ್ಲಿ ಲೀನವಾಗಿದ್ದಾರೆ. ಅವರುಗಳಿಗೆಲ್ಲ ನಮ್ಮ ನಮನಗಳನ್ನು ಸಮರ್ಪಣೆ ಮಾಡುತ್ತೇವೆ.

ಶ್ರೀಮಾನ್ ಗುಂಡೂರಾಯರು, ಕರ್ನಾಟಕಕ್ಕೆ ಯುವಕಾಂಗ್ರೆಸ್ಸಿನ ಮೊದಲನೆಯ ಅಧ್ಯಕ್ಷರು. ನಾನು ಅವರಿಂದ ಅಧಿಕಾರ ಸ್ವೀಕಾರ ಮಾಡಿದ ಎರಡನೆಯ ಕಾಂಗ್ರೆಸ್ ಅಧ್ಯಕ್ಷ. ಆಗ, ನಾನು ಅವರಲ್ಲಿ ಕಂಡದ್ದು, ಅವರಲ್ಲಿದ್ದಂಥ ಸಂಘಟನಾ ಸಾಮರ್ಥ್ಯ. ಇದು ಒಂದು ದೃಷ್ಟಿಯಿಂದ, ಮುಂದೆ ಯುವ

ವ್ಯವಸ್ಥೆಯನ್ನು ನಡೆಸಿಕೊಂಡು ಹೋಗುವುದಕ್ಕೆ ಒಂದು ಪ್ರೇರಕ ಶಕ್ತಿಯಾಯಿತು. ಒಂದು ಮಾತಿನಲ್ಲಿ ಹೇಳುವುದಾದರೆ, ಇಂದಿನ ಪರಿಸ್ಥಿತಿಯಲ್ಲಿ ಕ್ರೀಡೆಯಾಗಿ ರಾಜಕಾರಣವನ್ನು ನೋಡುತ್ತೇವೆ. ಆದರೆ, ರಾಜಕೀಯವನ್ನು ಕ್ರೀಡೆಯಾಗಿ ಕಂಡ ಒಬ್ಬ ಹಿರಿಯ ರಾಜಕಾರಣಿ ಹಾಗೂ ಒಳ್ಳೆಯ ನಾಯಕ ಅವರ ಮೂರು ವರ್ಷದ ಅಧಿಕಾರದ ಅವಧಿಯಲ್ಲಿ ಭಿನ್ನಮತದ ಶಬ್ದ ಇರಲಿಲ್ಲ. ಯಾರೂ ಎದ್ದುನಿಂತು, ಅವರ ವಿರುದ್ಧ ಹೇಳುವವರು ಇರಲಿಲ್ಲ. ಆದ್ದರಿಂದಲೇ, ಅವರು ಒಳ್ಳೆಯ ಆಡಳಿತವನ್ನು ಕೊಡುವುದಕ್ಕೆ ಸಾಧ್ಯವಾಯಿತು. ನಾನು ಇದನ್ನು ಹೆಚ್ಚು ವಿಸ್ತಾರ ಮಾಡಿ ಹೇಳುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ರಾಯರ ನಮ್ಮ ಗೆಳೆತನ ಬಹಳ ದೀರ್ಘವಾದುದು ರಾಜಕೀಯದ ಒಳಗೂ ಮತ್ತು ಹೊರಗೂ ಸಮಕಾಲೀನರಾಗಿ ಕೆಲಸ ಮಾಡಿದ್ದೇವೆ. ನಿಷ್ಕಲ್ಮಷ ಹೃದಯ ಮತ್ತು ಸ್ನೇಹಕ್ಕೆ ಮತ್ತೊಂದು ಹೆಸರು ಶ್ರೀಮಾನ್ ಗುಂಡೂರಾಯರು. ಈ ಕಾರಣದಿಂದ, ಇಡೀ ಸಭೆ ಅವರನ್ನು ನೆನಸಿಕೊಳ್ಳುತ್ತಿದೆ. ಈ ರಾಜ್ಯಕ್ಕೆ ಒಳ್ಳೆಯ ಆಡಳಿತವನ್ನು ಕೊಟ್ಟ ಕೀರ್ತಿ ಅವರದು. ಆದ್ದರಿಂದ, ತಾವೆಲ್ಲರೂ ಅಭಿವ್ಯಕ್ತ ಮಾಡಿದಂಥ ಅಭಿಪ್ರಾಯಕ್ಕೆ ನನ್ನ ಧ್ವನಿಗೂಡಿಸುತ್ತೇನೆ. ಮತ್ತೆ ಕೊಡಗಿನ ಫೀಲ್ಡ್ ಮಾರ್ಷಲ್ ಕಾರಿಯಪ್ಪನವರು ನಮಗೆ ಎಲ್ಲಿ ಸಿಗದಿದ್ದರೂ ಜನವರಿ 26, ಆಗಸ್ಟ್ 15ನೇ ತಾರೀಖಿನ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಆ ಇಳಿ ವಯಸ್ಸಿನಲ್ಲೂ ಎಲ್ಲರಿಗಿಂತ ಮುಂದೆ ಕುಳಿತಿರುತ್ತಿದ್ದರು. ಅಲ್ಲಿ ಕಾರಿಯಪ್ಪನವರ ದರ್ಶನವಾಗುತ್ತಿತ್ತು. ನಾನು ಅನೇಕಸಾರಿ ಕಾರಿಯಪ್ಪನವರದರ್ಶನಕ್ಕೆ ಅಲ್ಲಿ ಹೋದವನು. ಅದನ್ನು ದೇಶಪ್ರೇಮ ಎಂದು ಹೇಳಬೇಕು. ಈ ದೇಶಪ್ರೇಮವನ್ನು ಅಭಿವ್ಯಕ್ತ ಮಾಡುವುದಕ್ಕೆ ಆಯಾ ಸಂದರ್ಭದಲ್ಲಿ ರಾಷ್ಟ್ರಕ್ಕೆ ನಮನವನ್ನು ಸಲ್ಲಿಸುವುದಕ್ಕೆ ನಡೆದುಕೊಂಡ ರೀತಿ, ಮತ್ತು ಒಂದುರೀತಿಯ ಆದರ್ಶ. ಅವರು ಒಬ್ಬ ಶಿಸ್ತಿನ ಸೇನಾನಿ. ಅವರು ಮೊದಲನೇ ಕಮ್ಯಾಂಡರ್ ಇನ್ ಚೀಫ್ ಅಲ್ಲ, ಕಡೆಯ ಕಮ್ಯಾಂಡರ್ ಚೀಫ್ ಕೂಡ ಅವರೇ. ಅವರಿಗಿಂತ ಮುಂಚೆ ಯಾರೂ ಇರಲಿಲ್ಲ, ಅವರಾದ ಮೇಲೆ ಯಾರೂ ಆಗಲಿಲ್ಲ. ಅನಂತರ ಆರ್ಮಿ ಮೂರು ಭಾಗ ವಿಂಗಡಣೆಯಾಯಿತು. ಫೀಲ್ಡ್ ಮಾರ್ಷಲ್ ಕಾರಿಯಪ್ಪನವರು ಸತ್ತಾಗ, ಅವರ ಶವಸಂಸ್ಕಾರಕ್ಕೆ ತೆಗೆದುಕೊಂಡು ಹೋದಾಗ, ರಾಷ್ಟ್ರದ ಅತ್ಯಂತ ಅತ್ಯುತ್ತಮ ಹುದ್ದೆಯಲ್ಲಿರತಕ್ಕ ಸೇನಾನಿಗಳು ಬಂದಿದ್ದರು. ಇದು ಒಂದುರೀತಿಯ ಸೌಭಾಗ್ಯ. ಕನ್ನಡ ನಾಡಿಗೆ ಈ ರೀತಿಯ ಸೌಭಾಗ್ಯ ಮತ್ತೆ ಸಿಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ನಾನು ಇದನ್ನು ಹೆಚ್ಚು ದೀರ್ಘವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಅತ್ಯಂತ ಶ್ರೇಷ್ಟ ಭಾರತೀಯ, ವಿಶ್ವಮಾನ್ಯ ಹಿರಿಯನನ್ನು ಕಳೆದುಕೊಂಡ ನಮ್ಮ ಕನ್ನಡ ನಾಡು ಬಡವಾಗಿದೆ. ಇಷ್ಟು ಹೇಳಿ, ಇನ್ನೂ ಶ್ರೀಮಾನ್ ಜಿ.ಎಸ್. ಆಚಾರ್‌ರವರು ನನ್ನ ದೃಷ್ಟಿಯಿಂದ ನಿಷ್ಕಲ್ಮಷ ರಾಜಕಾರಣಿ, ಶ್ರೇಷ್ಟ ಸಹಕಾರಿಗಳು. ಇತ್ತೀಚಿನ ದಿನಗಳಲ್ಲಿ, ಇವರು ಒಂದುರೀತಿಯ ಉತ್ಕೃಷ್ಟ ಸಂಸದೀಯ ಪಟುವಾಗಿ ಹೊಸ ಪೀಳಿಗೆಗೆ ಸಂಸದೀಯ ಕೊಡುಗೆ ಕಡಿಮೆ. ಆದ್ದರಿಂದ, ಅವರ ಆತ್ಮಕ್ಕೂ ಶಾಂತಿಯನ್ನು ಕೋರುತ್ತಾ, ಪ್ರೊ ನೂರುಲ್ ಹಸನ್‌ರವರು ಕೇಂದ್ರದ ವಿದ್ಯಾಮಂತ್ರಿಯಾಗಿದ್ದಾಗ, ನಾನು ಸಂಸತ್ತಿನ ಸದಸ್ಯನಾಗಿದ್ದೆ. ನಾಗರಹಾವು ಚಿತ್ರೀಕರಣದ ಒಂದು ಪ್ರಸಂಗ. ಚಿತ್ರನಿರ್ಮಾಪಕರು ಚಿತ್ರದುರ್ಗದ ಕೋಟೆಯನ್ನು, ಈ ಚಿತ್ರೀಕರಣಕ್ಕೆ ಕೇಳಿದಾಗ, ಪ್ರೊ. ನೂರುಲ್ ಹಸನ್‌ರವರು ಮಾನ್ಯ ಮಾಡಲಿಲ್ಲ. ಆಗ ನಾನು ಶಾರ್ಟ್ ಡುರೇಶನ್ ನೋಟೀಸ್ ಕಳುಹಿಸಿದ್ದೆ ಲೋಕಸಭೆಯಲ್ಲಿ. ನನ್ನ ಪ್ರಶ್ನೆ ಹೋದ ತಕ್ಷಣವೇ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ನನ್ನನ್ನು ಕರೆಯಿಸಿ ಏನಪ್ಪ ನೂರುಲ್ ಹಸನ್‌ರವರ ಜೊತೆ ನಿನ್ನ ವ್ಯಾಜ್ಯ

ಎಂದರು. ಆಗ ನಾನು ವ್ಯಾಜ್ಯ ಏನೂ ಇಲ್ಲ ನಾಗರಹಾವು ಚಿತ್ರಕ್ಕೆ ಚಿತ್ರೀಕರಣ ಮಾಡಲು ಒಪ್ಪುತ್ತಿಲ್ಲ ಎಂದು ಹೇಳಿದೆ. ತಕ್ಷಣ ಫೋನ್ ಮಾಡಿ ಚಂದ್ರೇಗೌಡರು ಹೇಳುವುದರಲ್ಲಿ ಅರ್ಥಇದೆ. "Please issue orders immediately" ಎಂದರು. ಎರಡು ಮಾತಾಡದೆ ನನ್ನನ್ನು ಕರೆಯಿಸಿ ನನಗೆ ಚಹ ಕೊಟ್ಟು ಅವರ ತಪ್ಪನ್ನು ಅರ್ಥ ಮಾಡಿಕೊಂಡು ಅವಕಾಶ ಮಾಡಿಕೊಟ್ಟರು. ಆ ನೆನಪು ಒಂದು ಮಾತ್ರ ಶ್ರೀಮಾನ್ ನೂರುಲ್ ಹಸನ್‌ರ ಬಗ್ಗೆ ಹೇಳಬೇಕಾಗಿತ್ತು ಹೇಳಿದ್ದೇನೆ. ಹಾಗೇ ಶ್ರೀರಾಮಕೃಷ್ಣಯ್ಯನವರು ಚುಂಚೇಗೌಡರು. ಶ್ರೀ ರಾಮಕೃಷ್ಣಯ್ಯನವರದ್ದು ದುರಂತ ಮರಣ. ಗುಂಡೂರಾಯರನ್ನು ನಾವು ಹೇಗೆ ನೆನೆಸಿಕೊಳ್ಳುತ್ತೇವೆಯೋ ಹಾಗೆ. ಶ್ರೀ ಚುಂಚೇಗೌಡರು ಸಹ ಹಳೆಯ ಹಿರಿಯ ಸದಸ್ಯರು. ಇವರೆಲ್ಲರ ಮಾರ್ಗದರ್ಶನ ಒಂದಲ್ಲ ಒಂದು ದೃಷ್ಟಿಯಿಂದ ಒಂದು ಕಾಲದಲ್ಲಿ ನಮಗೆ ಸಿಕ್ಕಿತ್ತು. ಶ್ರೀಮಾನ್ ವಾಟಾಳ್‌ನಾಗರಾಜ್‌ರವರು ಒಂದು ಮಾತು ಹೇಳಿದರು. ನಾವು ಇಂತಹ ಸಂದರ್ಭ ಬಂದಾಗ ನೆನೆಸಿಕೊಳ್ಳುತ್ತೇವೆ ಆಮೇಲೆ ಮರೆಯುತ್ತೇವೆ. ಇದಕ್ಕೆ ಶಾಶ್ವತವಾದ ಒಂದು ವ್ಯವಸ್ಥೆ ಮಾಡಬೇಕು. ಅದಕ್ಕೆ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ ಪಕ್ಷಾತೀತವಾಗಿ ಏನಾದರೂ ಒಂದು ಶಾಶ್ವತ ವ್ಯವಸ್ಥೆಯನ್ನು ನಾವು ಮಾಡಿಕೊಳ್ಳಬೇಕು. ಆ ವ್ಯವಸ್ಥೆಯ ಮೂಲಕ ಇಂತಹ ಪರಿಸ್ಥಿತಿ ಬಂದಾಗ ಯಾವ ರೀತಿಯಲ್ಲಿ ಇದನ್ನು ನಡೆಸಿಕೊಳ್ಳಬೇಕು ಎನ್ನತಕ್ಕಂಥ ಆಲೋಚನೆ ಮಾಡದಿದ್ದರೆ ಉಳಿದವರು ಏನು ಆಲೋಚನೆ ಮಾಡುತ್ತಾರೆ? ಶ್ರೀಮಾನ್ ದಿವಂಗತ ಕೆಂಗಲ್ ಹನುಮಂತಯ್ಯನವರ ಭಾವಚಿತ್ರವನ್ನು ಇಲ್ಲಿ ಹಾಕಬೇಕು ಎಂದು ನಾವು ಪದೇ ಪದೇ ಹೇಳಿದೆವು ಇದುವರೆಗೂ ಆಗಲಿಲ್ಲ. ಅದಕ್ಕೆ ಕಾರಣವೇನೋ ಗೊತ್ತಿಲ್ಲ. ವಿಧಾನ ಸೌಧ ಕಟ್ಟಿದ ಶಿಲ್ಪಿ ಅವರು. ದಕ್ಷಿಣ ಭಾರತದಲ್ಲಿ ಒಂದು ಸೀಮಿತ ಅಧಿವೇಶನವನ್ನು ಮಾಡಬೇಕು ಎನ್ನುವ ದೂರದೃಷ್ಟಿ ಇಟ್ಟುಕೊಂಡು ಕಟ್ಟಿಸಿದವರು. ಅವರಿಗೆ ಗೌರವ ಕೊಡುವುದಕ್ಕೆ ನಮಗೆ ಸಾಧ್ಯವಾಗಲಿಲ್ಲ. ಇದೇನೂ ದೊಡ್ಡ ಗೌರವ ಅಲ್ಲ. ಅವರ ಭಾವಚಿತ್ರ ಹಾಕಿದರೆ. ಆಮೇಲೆ ಸಾರ್ಕ್ ಸಮ್ಮೇಳನ ಅಂತರರಾಷ್ಟ್ರೀಯ ಸಮ್ಮೇಳನ ನಡೆಯಿತು. ಆಗಲೂ ಸಹ ನಾವು ಮಾತನಾಡಿದೆವು. ಶ್ರೀಮಾನ್ ದೇವರಾಜಅರಸ್‌ರವರ ಬಗ್ಗೆ ಕೂಡ ಇದನ್ನೇ ಹೇಳಿದ್ದೆವು ಅದೂ ಆಗಲಿಲ್ಲ. ಕಾಲ ನಮ್ಮನ್ನು ಕಾಯುವುದಿಲ್ಲ. ಆದ್ದರಿಂದ ನಾನು ಸಭಾನಾಯಕರಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಸಭಾಧ್ಯಕ್ಷರನ್ನು ಒಳಗೊಂಡ ಶಾಶ್ವತವಾದ ವ್ಯವಸ್ಥೆಯನ್ನು ತರಲು ಒಂದು ಸಮಿತಿ ರಚನೆ ಮಾಡಿದರೆ ಯಾರ್‍ಯಾರು ಯಾವ ಯಾವ ಕ್ಷೇತ್ರದಲ್ಲಿ ಕೆಲಸಮಾಡಿರುತ್ತಾರೆ ಅವರಿಗೆ ಯಾವ ರೀತಿಯಲ್ಲಿ ಗೌರವ ಸಲ್ಲಿಸಬೇಕು ಎನ್ನತಕ್ಕಂಥ ಶಾಶ್ವತ ಪರಿಹಾರ ಮಾಡುವುದಕ್ಕೆ ಆಲೋಚನೆ ಮಾಡಬೇಕು ನಿಮ್ಮ ಕಾಲದಲ್ಲಿ ಇದು ಆಗಲಿ. ನಿಮಗೆ ಹತ್ತಾರು ಅನುಭವಗಳುಂಟು. ಸಂಸದೀಯ ಜೀವನದಲ್ಲಿ ತಾವು ಶಾಶ್ವತ ವ್ಯವಸ್ಥೆಗೆ ಆಲೋಚನೆ ಮಾಡುತ್ತೀರಿ ಅದಕ್ಕೆ ನಮ್ಮ ಸಹಮತ ಇದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಹೀಗೆ ಕಳೆದ ಅಧಿವೇಶನದಿಂದ ಇಲ್ಲಿಯವರೆಗೆ ನಮ್ಮನ್ನು ಅಗಲಿ ಹೋಗಿರತಕ್ಕಂಥ ಹಿರಿಯ ನಾಯಕರುಗಳಿಗೆ ನಮ್ಮ ನಮನಗಳನ್ನು ಸಮರ್ಥನೆ ಮಾಡುತ್ತಾ ಸಭಾನಾಯಕರು ಈ ಹಿರಿಯ ನಾಯಕರುಗಳ ಬಗ್ಗೆ ಏನು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಆ ಅಭಿಪ್ರಾಯಕ್ಕೆ ನಾನೂ ಧ್ವನಿಗೂಡಿಸಿ ಎಲ್ಲಾ ಕುಟುಂಬಗಳಿಗೆ ನಮ್ಮ ಸದನದ ವತಿಯಿಂದ ನಮ್ಮ ಗೌರವವನ್ನು ಅವರಿಗೆ ತಿಳಿಸಿ ಅವರಿಗೆ ಶಾಂತಿ ನೆಮ್ಮದಿ ಸಿಗಲಿ ಎಂದು ಹಾರೈಸಿ ಸಂಬಂಧ ಪಟ್ಟ ಅವರ ಕುಟುಂಬಗಳಿಗೆ ಸಂತಾಪಸೂಚಕ ನಿರ್ಣಯವನ್ನು ಕಳುಹಿಸಿಕೊಡಬೇಕೆಂದು ಮನವಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್.ಬಂಗಾರಪ್ಪ(ಸೊರಬ) :- ಮಾನ್ಯ ಸಭಾಧ್ಯಕ್ಷರೇ, ತಾವು ಮಂಡಿಸಿರತಕ್ಕಂಥ ನಿರ್ಣಯಕ್ಕೆ ಬೆಂಬಲವನ್ನು ಸಂಪೂರ್ಣವಾಗಿ ಸೂಚನೆ ಮಾಡುತ್ತಾ ಒಂದೆರಡು ಅಭಿಪ್ರಾಯಗಳನ್ನು ಸಭೆಯ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. ಸದನದಲ್ಲಿ ನಮ್ಮ ಜೊತೆ ಕೆಲಸ ಮಾಡಿರತಕ್ಕಂಥ ಅನೇಕ ಜನರನ್ನು ನಾವು ಕಳೆದುಕೊಳ್ಳತಕ್ಕಂಥಾದ್ದು ಇದು ಒಂದು ವಿಧಿ ನಿಯಮ ಎಂದು ಭಾವಿಸಬೇಕಾಗುತ್ತದೆ. ಈಗಾಗಲೇ ನಮ್ಮ ಮಿತ್ರರು ಅವರ ವ್ಯಕ್ತಿತ್ವದ ಚಿತ್ರವನ್ನು ಬಿಡಿಸಿದ ಹಾಗೆ, ವರ್ಣರಂಜಿತ ರಾಜಕಾರಣವನ್ನು ತಮ್ಮದೇ ಆಗಿರತಕ್ಕಂಥ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಮಾಡಿರತಕ್ಕಂಥವರು. ಸದನದ ಹೊರಗಡೆ ಇರಬಹುದು ಅಥವಾ ಒಳಗಡೆಯೇ ಇರಬಹುದು ಬಹಳ ಧೈರ್ಯದಿಂದ ಒಂದು ವಿಚಾರವನ್ನು ಎದುರಿಸತಕ್ಕಂಥ ವ್ಯಕ್ತಿತ್ವ ಅವರಲ್ಲಿತ್ತು. ನಾವು ವಿರೋಧ ಪಕ್ಷದಲ್ಲಿದ್ದಾಗ ಅವರು ಆಳುವ ಪಕ್ಷದಲ್ಲಿದ್ದರು. ಕೆಲವೊಮ್ಮೆ ಒಟ್ಟಿಗೆ ಒಂದೇ ಪಕ್ಷದಲ್ಲಿ ಕೆಲಸ ಮಾಡತಕ್ಕಂಥ ಸಂದರ್ಭಗಳು ನನಗೂ ಮತ್ತು ಹಲವಾರು ಜನ ಮಿತ್ರರಿಗೂ ಸಿಕ್ಕಿತ್ತು. ಇದ್ದದ್ದನ್ನು ಇದ್ದಹಾಗೆ ಹೇಳತಕ್ಕಂಥ ಅವರ ವ್ಯಕ್ತಿತ್ವದ ಬಗ್ಗೆ ನಮ್ಮ ಮಿತ್ರರು ಹಲವಾರು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಇನ್ನೂ ಅನೇಕ ಉದಾಹರಣೆಗಳು ಅವರವರ ಮನಸ್ಸಿನಲ್ಲಿ ಇವೆಯೆಂದು ನಾನು ಭಾವಿಸುತ್ತೇನೆ. ಆ ವಿವರಗಳು ಇಲ್ಲಿ ಬೇಕಾಗಿಲ್ಲ. ಅವರು ಎಲ್ಲರಿಗೂ ಬೇಕಾಗಿದ್ದಂಥ ವ್ಯಕ್ತಿಯಾಗಿದ್ದರು, ರಾಜಕೀಯವಾಗಿ ಅವರ ಬಗ್ಗೆ ನಾವು ಎಷ್ಟೇ ವಿರೋಧವನ್ನು ಮಾಡಿದರೂ ಕೂಡ ಸ್ನೇಹದ ವಿಚಾರ ಬಂದಾಗ ಅವರ ಸೆಳೆತಕ್ಕೆ ಒಳಗಾಗುವಂಥ ವ್ಯಕ್ತಿತ್ವವನ್ನು ಹೊಂದಿದ್ದಂಥ ರಾಜಕಾರಣಿ ಅವರಾಗಿದ್ದರು. ಈಗಾಗಲೇ ನಮ್ಮ ಮಿತ್ರರು ಹೇಳಿದ ಹಾಗೆ ಇಷ್ಟೊಂದು ಬೇಗ ಅವರು ಅಗಲಿ ಹೋಗುತ್ತಾರೆಂದು ನಾವು ಭಾವಿಸಿರಲಿಲ್ಲ. ಅವರ ಅಗಲುವಿಕೆ ಬಹಳ ಬೇಗ ಬಂತು ಎಂದು ಎಲ್ಲರ ಮನಸ್ಸಿನಲ್ಲೂ ಅನಿಸುತ್ತಿದೆ. ಸಹಜವಾಗಿ ಒಬ್ಬ ವ್ಯಕ್ತಿಗೆ ಖಾಯಿಲೆ ಬಂದಾಗ ಅವರು ಗುಣಮುಖರಾಗಿ ಬರುತ್ತಾರೆಂದು ನಿರೀಕ್ಷೆ ಇರುತ್ತದೆ. ಆದರೆ ಅವರದು ಹಾಗಾಗಲಿಲ್ಲ. ಅವರಿಗೆ ಖಾಯಿಲೆ ಬಂದು ಅವರನ್ನು ಹಾಗೆಯೇ ಸೆಳೆದುಕೊಂಡು ಹೋಯಿತು. ಅವರ ಆರೋಗ್ಯದ ಬಗ್ಗೆ ನಾವು ಯಾವಾಗಲೂ ವಿಚಾರಿಸಿಕೊಳ್ಳುತ್ತಿದ್ದೆವು, ಅವರಿಗೆ ಖಾಯಿಲೆ ಗುಣವಾಗುತ್ತಿದೆ, ಅವರು ಬರುತ್ತಾರೆ ಎನ್ನುವ ವಿವರ ಬರುತ್ತಿತ್ತು. ಆದರೆ ಈ ಆಘಾತದ ಮತ್ತು ದಿಗ್‌ಭ್ರಮೆಗೊಳ್ಳತಕ್ಕಂಥ ಸುದ್ದಿ ನಮಗೆ ಬಂದಾಗ ಎಲ್ಲರ ಮನಸ್ಸಿಗೂ ಆಳವಾದ ನೋವನ್ನು ತಂದಿತು. ಅವರು ಬಹಳ ಎತ್ತರದ ವ್ಯಕ್ತಿತ್ವವನ್ನು ಹೊಂದಿದ್ದವರು. ಅವರಷ್ಟು ಎತ್ತರದ ವ್ಯಕ್ತಿತ್ವವನ್ನು ಹೊಂದಿರುವುದು ಇತ್ತೀಚಿನ ದಿನಗಳಲ್ಲಿ ಅಪರೂಪ. ಅಧಿಕಾರದಲ್ಲಿ ಅಷ್ಟೊಂದು ಎತ್ತರದಲ್ಲಿ ಇದ್ದಂಥವರನ್ನು ನಾನು ನೋಡಿಲ್ಲವೆಂದು ನನ್ನ ಭಾವನೆ, ದೇವರಾಜ ಅರಸ್ ಅವರನ್ನು ಬಿಟ್ಟು. ಅವರು ಎಷ್ಟು ಎತ್ತರ ಇದ್ದರೋ ಅಷ್ಟೇ ಎತ್ತರದಲ್ಲಿ ಅವರ ಧೈರ್ಯವೂ ಇತ್ತು. ಗುಂಡೂರಾಯರು ಹೊರಗಡೆ ಭಾಷಣ ಮಾಡುವಾಗ ಯುವಕ ವರ್ಗ ಅವರಿಗೆ ಹೆಚ್ಚಾಗಿ ಆಕರ್ಷಣೆಗೆ ಒಳಗಾಗುತ್ತಿದ್ದರು. ಎಲ್ಲಿ ಹೋದರೂ ಅವರ ಗುಣಗಾನವನ್ನು ಮಾಡತಕ್ಕಂಥ ಯುವಕ ವರ್ಗವನ್ನು ನೋಡುತ್ತಿದ್ದೆವು. ಅವರ ಬಗ್ಗೆ ಯುವಕರಲ್ಲಿ 'ಗುಂಡೂ ದಾದಾ' ಎನ್ನತಕ್ಕಂಥ ಮಾತು ಬರೀ ಬಾಯಲ್ಲೇ ಅಲ್ಲ ಗೋಡೆಗಳ ಮೇಲೂ ವರ್ಷಾನುಗಟ್ಟಲೆ ಕಂಡೆವು. ರಾಜಕಾರಣ ಮಾಡುವಾಗ ಮತ್ತು ಯಾವುದೇ ದಾರಿಯಲ್ಲಿ ಹೋಗತಕ್ಕಂಥ ಸಂದರ್ಭದಲ್ಲಿ ಧೈರ್ಯವಾಗಿ ಹೋಗತಕ್ಕಂಥ ಗುಣ ವಿಶೇಷಗಳು ಅವರಲ್ಲಿದ್ದವು. ಇಂಥಾ 'ದಾದಾ' ಈಗ ನಮ್ಮಲ್ಲಿಲ್ಲ. ಅವರು ಲೋಕ ಸಭೆಗೆ ಆಯ್ಕೆಯಾಗಿ ಹೋದಂಥ ಕಾಲದಲ್ಲೂಕೂಡ ಅಷ್ಟೇ, ಗುಂಡೂರಾವ್ ಅವರು ಸೆಂಟ್ರಲ್ ಹಾಲ್‌ನಲ್ಲಿ ಕುಳಿತುಕೊಂಡರೆ ಅವರ

ಸುತ್ತೂ ಅನೇಕ ಜನ ಕುಳಿತುಕೊಳ್ಳಬೇಕು, ಹಾಗೆ ಆಕರ್ಷಣೆ ಮಾಡತಕ್ಕಂಥ ಶಕ್ತಿ ಅವರಲ್ಲಿ ಇತ್ತು. ಅಂಥ ಒಂದು ಶಕ್ತಿ ಅವರಲ್ಲಿತ್ತು. ಅಂಥ ಒಂದು ವರ್ಣಮಯ ರಾಜಕೀಯ ಜೀವನ ಮಾಡಿರತಕ್ಕಂಥ ವರ್ಣರಂಜಿತ ವ್ಯಕ್ತಿತ್ವ ಇದ್ದಂಥ ವ್ಯಕ್ತಿ ನಮ್ಮೆಲ್ಲರನ್ನು ಅಗಲಿದಾಗ ಆ ಒಂದು ಸೆಳೆತಕ್ಕೆ ಒಳಗಾಗಿರತಕ್ಕಂಥ ಅನೇಕ ವ್ಯಕ್ತಿಗಳಿಗೆ ನೋವು ಉಂಟಾಗಿದೆ. ದಿವಂಗತರು ಶ್ರೇಷ್ಟ ರಾಜಕಾರಣಿಯಾಗಿ ರಾಜ್ಯಕ್ಕೆ, ರಾಷ್ಟ್ರಕ್ಕೆ ತಮ್ಮದೇ ಆದಂಥ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಸೇವೆಯು ಚಿರಸ್ಮರಣೀಯವಾಗಿರುತ್ತದೆ. ಈ ಸಂದರ್ಭದಲ್ಲಿ ಅವರ ಆತ್ಮಕ್ಕೆ ನಾನು ಶಾಂತಿಯನ್ನು ಕೋರುತ್ತೇನೆ. ಹಾಗೆಯೇ ಅವರ ಕುಟುಂಬ ವರ್ಗದವರಿಗೆ ಬಂದೊದಗಿದ ದುಃಖವನ್ನು ಭರಿಸುವಂಥ ಶಕ್ತಿಯನ್ನು ದೇವರು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ದಿವಂಗತ ಗುಂಡೂರಾಯರಷ್ಟೆ ಎತ್ತರದ ವ್ಯಕ್ತಿತ್ವವನ್ನು ಹೊಂದಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರಾಗಿದ್ದ ಜನರಲ್ ಕಾರಿಯಪ್ಪನವರು ನಿಧನರಾದುದು ನಮಗೆಲ್ಲರಿಗೂ ತುಂಬಲಾರದ ನಷ್ಟದ ವಿಚಾರವಾಗಿದೆ. ನಾನು ಮುಖ್ಯಮಂತ್ರಿಯಾಗಿದ್ದಾಗ, ಅದಕ್ಕಿಂತಲೂ ಮುಂಚೆ ಕೂಡ ಅವರ ಆರೋಗ್ಯವು ಕ್ಷೀಣಿಸುತ್ತಾ ಇತ್ತು. ನಾನು ಆ ಸಂದರ್ಭದಲ್ಲಿ ಅವರನ್ನು ಮಿಲಿಟರಿ ಆಸ್ಪತ್ರೆಯಲ್ಲಿ ಹೋಗಿ ನೋಡಿಕೊಂಡು ಬಂದಿದ್ದೆನು. ದಿವಂಗತರು ರಾಷ್ಟ್ರದ ಬಗ್ಗೆ ಅತೀ ಹೆಚ್ಚಿನ ಗಮನವನ್ನು ಕೊಟ್ಟು ಅಪ್ರತಿಮ ಸೇವೆಯನ್ನು ಸಲ್ಲಿಸಿದಂಥ ವ್ಯಕ್ತಿ. ರಾಷ್ಟ್ರಕ್ಕೆ ಅವರ ಕೊಡುಗೆ ಅಪಾರ. ರಾಷ್ಟ್ರದ ಬಗ್ಗೆ ಅವರ ಭಕ್ತಿಯೂ ಅಪಾರ. ದಿವಂಗತ ಕಾರಿಯಪ್ಪನವರು ರಾಷ್ಟ್ರಕ್ಕೆ ಕರ್ನಾಟಕದ ಕೊಡುಗೆ. ಈ ಕೊಡುಗೆಯು ಸಣ್ಣದೇನೂ ಅಲ್ಲ. ಅವರು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಮಿಲಿಟರಿ ಖ್ಯಾತಿಯನ್ನು ಪಡೆದಿರತಕ್ಕಂಥ ವ್ಯಕ್ತಿ. ದಿವಂಗತರ ಅಗಲುವಿಕೆಯು ನಮಗೆಲ್ಲರಿಗೂ ಅಧಿಕ ನೋವನ್ನು ತಂದಿದೆ. ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ, ಮತ್ತು ಅವರ ಕುಟುಂಬವರ್ಗದವರಿಗೆ ಅವರ ಅಗಲುವಿಕೆಯಿಂದುಂಟಾದ ದುಃಖವನ್ನು ತಡೆಯಲು ಶಕ್ತಿ ದೊರಕಲಿ ಎಂದು ಪ್ರಾರ್ಥಿಸುತ್ತೇನೆ.

ಇನ್ನು ನಮ್ಮೊಂದಿಗೆ ಈ ಸದನದಲ್ಲಿ ಕೆಲಸ ಮಾಡಿರತಕ್ಕಂಥ ದಿವಂಗತ ಜಿ.ಎಸ್. ಆಚಾರ್‌ರವರು ಒಬ್ಬ ಕ್ರಿಯಾಶೀಲ ವ್ಯಕ್ತಿತ್ವವನ್ನು ಹೊಂದಿದ್ದವರಾಗಿದ್ದರು. ಮಾನ್ಯ ಚಂದ್ರೇಗೌಡರು ಹೇಳಿದ ಹಾಗೆ ಅವರು ಸಹಕಾರಿ ಕ್ಷೇತ್ರದಲ್ಲಿ ಅಪಾರವಾದ ನಂಬಿಕೆಯನ್ನು ಇಟ್ಟುಕೊಂಡಿದ್ದವರು. ಹಾಗೆಯೇ ಸಹಕಾರಿ ಕ್ಷೇತ್ರದಿಂದ ಬಂದಿರತಕ್ಕಂಥ ಮತ್ತೊಬ್ಬ ವ್ಯಕ್ತಿ ಪ್ರೊ : ನೂರುಲ್ ಹಸನ್‌ರವರು. ಮತ್ತು ನಮ್ಮ ಸದನದಲ್ಲಿ ಶಾಸಕರಾಗಿ ಕೆಲಸ ಮಾಡಿದಂಥ ಕೆಲವು ಮಾನ್ಯ ಗಣ್ಯರು ನಮ್ಮನ್ನು ಅಗಲಿದ್ದಾರೆ. ಅವರೆಲ್ಲರ ಅಗಲುವಿಕೆಯು ನಮಗೆಲ್ಲರಿಗೂ ಅಧಿಕ ನೋವನ್ನು ತಂದಿದೆ. ಅವರ ಅಗಲುವಿಕೆಯಿಂದ ನಾವೆಲ್ಲರೂ ದುಃಖತಪ್ತರಾಗಿದ್ದೇವೆ. ಅವರೆಲ್ಲರ ಆತ್ಮಕ್ಕೆ ಶಾಂತಿ ದೊರಕಲಿ, ಅವರುಗಳ ಕುಟುಂಬ ವರ್ಗದವರಿಗೆ ದುಃಖವನ್ನು ತಡೆದುಕೊಳ್ಳುವ ಶಕ್ತಿಯು ದೊರಕಲಿ ಎಂದು ಪ್ರಾರ್ಥಿಸುತ್ತೇನೆ. ಮಾನ್ಯ ಅಧ್ಯಕ್ಷರು ಸದನದಲ್ಲಿ ಮಂಡನೆ ಮಾಡಿರತಕ್ಕಂಥ ನಿರ್ಣಯವು ಸದನದಲ್ಲಿ ಮಂಡನೆಯಾಗಿದೆ. ಅದಕ್ಕೆ ನಾವೆಲ್ಲರೂ ಬೆಂಬಲವನ್ನು ಕೊಡುತ್ತಾ ಇದ್ದೇವೆ. ಸದನದ ನಿರ್ಣಯವನ್ನು ದಿವಂಗತರುಗಳ ಕುಟುಂಬದವರಿಗೆ ಕಳುಹಿಸಿಕೊಡುವ ವ್ಯವಸ್ಥೆಯನ್ನು ಮಾನ್ಯ ಅಧ್ಯಕ್ಷರು ಏನು ಮಾಡಿದ್ದಾರೆ, ಅದಕ್ಕೆ ನಮ್ಮೆಲ್ಲರ ಬೆಂಬಲವಿದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್(ಹೆಗ್ಗಡದೇವನಕೋಟೆ) :– ಮಾನ್ಯ ಅಧ್ಯಕ್ಷರೇ, ತಾವುಗಳು ಮಂಡಿಸಿರುವ ಈ ಮಂಡನೆಗೆ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತಾ, ದಿವಂಗತ ಗುಂಡೂರಾಯರ

ನಿಧನವು ನಮಗೆಲ್ಲರಿಗೂ ಅಪಾರ ನೋವನ್ನು ತಂದಿದೆಯಲ್ಲದೆ, ಅವರ ನಿಧನವು ರಾಜ್ಯಕ್ಕೆ ತುಂಬಲಾರದ ನಷ್ಟವನ್ನುಂಟು ಮಾಡಿದೆ ಎಂದು ಹೇಳಬಯಸುತ್ತೇನೆ. ನಾನು 20 ದಿವಸಗಳ ಹಿಂದೆ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದಾಗ, ನಾನು ಮತ್ತು ವಾಟಾಳ್ ನಾಗರಾಜ್‌ರವರು ತಮ್ಮನ್ನು ನೋಡಲು ಬರುವುದಾಗಿ ತಿಳಿಸಿದಾಗ ಅವರು ಆನಂದದಿಂದ ನಮ್ಮೊಂದಿಗೆ ಮಾತನಾಡಿದರು. ಆಗಸ್ಟ್ ತಿಂಗಳಲ್ಲಿ ಎರಡನೆಯ ಸುತ್ತಿನ ತಪಾಸಣೆಯು ಮುಗಿದ ಮೇಲೆ 27ನೇ ತಾರೀಖಿನ ನಂತರ ಬನ್ನಿ ಎಂದು ನನಗೆ ತಿಳಿಸಿದರು. ಆದರೆ ನಿನ್ನೆ ಅವರ ನಿಧನದ ಸುದ್ದಿ ತಿಳಿದಾಗ ನನಗೆ ತುಂಬಾ ಆಘಾತವಾಯಿತು. ಅವರ ಬಗ್ಗೆ ತುಂಬಾ ಅಭಿಮಾನದಿಂದ ಹೇಳುವುದಾದರೆ ನನ್ನ ರಾಜಕೀಯ ಪ್ರವೇಶಕ್ಕೆ ಅವರೇ ಕಾರಣರಾಗಿದ್ದರು. ನನಗೆ ರಾಜಕೀಯಕ್ಕೆ ಬರುವುದಕ್ಕೆ ಅವರು ಅವಕಾಶ ಮಾಡಿಕೊಟ್ಟವರು. 1975ನೇ ಇಸವಿಯಲ್ಲಿ ನನ್ನನ್ನು ಮೈಸೂರು ಜಿಲ್ಲೆಯ ಯುವ ಕಾಂಗ್ರೆಸ್‌ನ ಅಧ್ಯಕ್ಷನನ್ನಾಗಿ ಮಾಡಿದ್ದರು. ಅಂತಹ ಸಂದರ್ಭದಲ್ಲಿ ಇಂತಹ ಎದೆಗಾರಿಕೆಯುಳ್ಳ ಗುಂಡೂರಾಯರ ರಾಜಕೀಯ ಬೆಳೆಯಲಿ, ಮಂತ್ರಿ ಇಲ್ಲದಿದ್ದರೂ ಪರವಾಗಿಲ್ಲ ಎಂದು ಅವರಿಗೆ ಅವಕಾಶ ಮಾಡಿಕೊಟ್ಟರು, ಮತ್ತು ಅವರು ಪಕ್ಷವನ್ನು ಬಿಟ್ಟು ಐಜಿ ಕಾಂಗ್ರೆಸ್ ಮಾಡಿದಂತಹ ಸಂದರ್ಭದಲ್ಲಿ ನಾನು ಕರ್ನಾಟಕ ರಾಜ್ಯದ ಪ್ರಧಾನಕಾರ್ಯದರ್ಶಿಯಾಗಿ ಅವರ ಜೊತೆಯಲ್ಲಿ ಕೆಲಸ ಮಾಡಿದೆ. ಇವತ್ತು ಕರ್ನಾಟಕ ರಾಜ್ಯಕ್ಕೆ ಬಹಳ ಅನ್ಯಾಯವಾಗಿದೆ. ನನ್ನನ್ನು ಅವರ ಮಗನಿಗಿಂತ ಹೆಚ್ಚಿನ ರೀತಿಯಲ್ಲಿ ಪ್ರೀತಿ ಮಾಡುತ್ತಾ ಇದ್ದರು. ಇವತ್ತು ಪ್ರಧಾನಮಂತ್ರಿಗಳು, ಕೇಂದ್ರದ ನಾಯಕರು ಎಲ್ಲಾ ಅವರು ಮಾಡಿದಂತಹ ಕೆಲಸವನ್ನು ನಾವು ಮೆಚ್ಚುತ್ತಾ ಇದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಪ್ರಾರ್ಥನೆ ಮಾಡುತ್ತೇನೆ. ಅವರ ಹೆಸರು ಸದಾ ಈ ರಾಜ್ಯದಲ್ಲಿ ಉಳಿಯುವುದಕ್ಕೆ ಅವರ ಧರ್ಮಪತ್ನಿಯವರನ್ನು 1994ರಲ್ಲಿ ಖಾಲಿಯಾಗುವಂತಹ ವಿಧಾನಪರಿಷತ್ತಿಗೆ ನಾಮಕರಣ ಮಾಡಿ ಎಲ್ಲರ ಜೊತೆಯಲ್ಲೂ ಅವರು ಬಂದು ನಾವು ಕಣ್ಣಿಂದ ನೋಡುವುದಕ್ಕೆ ಮತ್ತು ಜನರಿಗೂ ಅವರನ್ನು ನೋಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಕನಕಪುರ) : – ಸನ್ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದ ನಂತರ ನಾವು ಕಳೆದುಕೊಂಡಿರುವಂತಹ ದೇಶಭಕ್ತರನ್ನು ದೇಶದ ನಾಯಕರನ್ನು ಮತ್ತು ನಮ್ಮ ನಾಡಿನ ಗಣ್ಯ ವ್ಯಕ್ತಿಗಳನ್ನು ಸ್ಮರಿಸಿಕೊಳ್ಳುವುದಕ್ಕೆ ತಾವೇನು ಮಂಡನೆ ಮಾಡಿದ್ದೀರಿ ಅದಕ್ಕೆ ನಮ್ಮ ಸಹಮತಿ ವ್ಯಕ್ತಮಾಡಿ ಮೊದಲನೆಯದಾಗಿ ಕೊಡಗಿನ ಹೆಮ್ಮೆಯ ಸುಪುತ್ರರಾಗಿದ್ದ ಮಹಾದಂಡನಾಯಕ ಜನರಲ್ ಕಾರ್ಯಪ್ಪನವರ ಶಿಸ್ತು ನಮ್ಮೆಲ್ಲರಿಗೂ ಇವತ್ತಿನ ಪರಿಸ್ಥಿತಿಯಲ್ಲಿ ಮಾರ್ಗದರ್ಶನವಾಗಬೇಕು. ವಿಶೇಷವಾಗಿ ಯುವಕರಿಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಬಹಳ ಸೂಚ್ಯವಾಗಿ ಹೇಳಿದರು : ಇವತ್ತಿನ ಪ್ರಜಾಪ್ರಭುತ್ವದ ವ್ಯವಸ್ಥೆ ನಮ್ಮದೇಶದಲ್ಲಿ ಸುಭದ್ರವಾಗಿ ಇರಬೇಕಾದರೆ ಅವತ್ತು ಅವರಲ್ಲಿದ್ದ ಒಂದು ಸರ್ವಶಕ್ತಿಯನ್ನೂ ಸಹ ಮೊದಲನೇ ಮತ್ತು ಕೊನೆಯ ಮಹಾದಂಡನಾಯಕರಾಗಿ ವ್ಯಯಿಸಿದ್ದರು. ಇವತ್ತು ಈ ದೇಶದಲ್ಲಿ ಪ್ರಜಾಪ್ರಭುತ್ವ ಭದ್ರವಾಗಿರಬೇಕಾದರೆ ಅವರ ಕೊಡಗೆಯೇ ಕಾರಣ. ಅದನ್ನು ನಾವು ಮರೆಯುವುದಕ್ಕಾಗುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಸೈನಿಕರು

ಕರ್ನಾಟಕದ ಇಬ್ಬರು ಹೆಮ್ಮೆಯ ಪುತ್ರರನ್ನು ಇವತ್ತು ಸ್ಮರಿಸಿಕೊಳ್ಳುತ್ತಾರೆ. ಒಂದು ಜನರಲ್ ಕಾರಿಯಪ್ಪನವರು, ಇನ್ನೊಬ್ಬರು ಜನರಲ್ ತಿಮ್ಮಯ್ಯನವರು. ಇವರಿಬ್ಬರೂ ಕೂಡ ಕೊಡಗಿನವರು. ಇದು ನಿಜಕ್ಕೂ ನಾವೆಲ್ಲರೂ ಹೆಮ್ಮೆ ಪಡುವಂತಹ ವಿಚಾರ. ಇಡೀ ವಿಶ್ವದ ಸೇನೆಯ ಪ್ರಶ್ನೆ ಬಂದ ಸಂದರ್ಭದಲ್ಲಿ ಜನರಲ್ ಕಾರಿಯಪ್ಪನವರಿಗೆ ಸರಿಸಾಟಿಯಾದಂತಹ ಯಾವುದೇ ವ್ಯಕ್ತಿಯು ಈ 19ನೇ ಶತಮಾನದಲ್ಲಿ ಇರಲಾರರು ಎಂಬ ಮಾತನ್ನು ನಾವು ಸ್ಮರಿಸಿಕೊಳ್ಳಬೇಕಾಗುತ್ತದೆ. ಜೊತೆಗೆ ನಮ್ಮ ಜೊತೆಯಲ್ಲಿ ಇವತ್ತು ಇಲ್ಲದೇ ಇರುವ ಶ್ರೀಮಾನ್ ಗುಂಡೂರಾಯರ ವ್ಯಕ್ತಿತ್ವ. ಸತ್ತಮೇಲೆ ನಾವು ಎಲ್ಲರನ್ನೂ ಹೊಗಳುತ್ತೇವೆ. ಅದು ನಮ್ಮ ಸಂಪ್ರದಾಯ. ಅವರು ಬದುಕಿದ್ದಾಗ ಅನೇಕ ಟೀಕೆಗಳನ್ನು ಮಾಡುತ್ತೇವೆ. ಟೀಕೆ ಮಾಡಿದಾಗ ನಾವ್ಯಾರೂ ಸಹಿತ ಸಹಿಸುವುದಿಲ್ಲ. ಈ ಸಭೆಗೆ ಬರುವ ಮುಂಚೆ ನಮ್ಮ ವಿರೋಧಪಕ್ಷದವರ ಸಭೆಯಲ್ಲಿ ನಮ್ಮ ಪಕ್ಷದ ಹಿರಿಯ ಮುಖಂಡರಾದ ಶ್ರೀ ಜೆ.ಎಚ್. ಪಟೇಲರು ಒಂದು ಘಟನೆಯನ್ನು ವಿಧಾನಸಭೆಯಲ್ಲಿ ನಡೆದದ್ದನ್ನು ನೆನೆಸಿಕೊಂಡರು. ಅವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ದೇವರಾಜ ಅರಸು ಅವರ ಜೊತೆಯಲ್ಲಿ ಸದನದಲ್ಲಿ ಮಾತನಾಡುವ ಸಂದರ್ಭದಲ್ಲಿ ಇಬ್ಬರೂ ಹೊಡೆದಾಟಕ್ಕೆ ಹೋದರು, ಜೆ.ಎಚ್. ಪಟೇಲರು ಸನ್ಮಾನ್ಯ ಗುಂಡೂರಾಯರು. ಆದರೆ ಪಟೇಲರ ಬಗ್ಗೆ ಒಂದು ನಿಮಿಷ ಸಹಿತ ಸದನದ ಹೊರಗೆ ದ್ವೇಷವನ್ನು ಕಾರಿದಂತಹ ವ್ಯಕ್ತಿ ಗುಂಡೂರಾಯರು ಆಗಿರಲಿಲ್ಲ. ತಮ್ಮದೇ ಆದ ಒಂದು ಆಕರ್ಷಕ ವ್ಯಕ್ತಿತ್ವ, ವರ್ಣಮಯ ವ್ಯಕ್ತಿತ್ವ ಹೊಂದಿದ್ದ, ಯುವಕರಿಗೆ ವಿಶೇಷವಾದ ಆಕರ್ಷಣ ಕೇಂದ್ರವಾಗಿದ್ದ ಸನ್ಮಾನ್ಯ ಗುಂಡೂರಾಯರ ಸ್ನೇಹಪರತೆ ಸಮುದ್ರದ ರೀತಿಯಲ್ಲಿ ಇರುತ್ತಾ ಇತ್ತು. ನನಗೆ ಒಂದು ಘಟನೆ ಜ್ಞಾಪಕಕ್ಕೆ ಬರುತ್ತದೆ, ಮಾನ್ಯ ಅಧ್ಯಕ್ಷರೇ, 1969ನೇ ಇಸವಿಯಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ದಯಾನಂದಸಾಗರ್ ಅವರು ಬದುಕಿದ್ದರು, ಸಿದ್ಧವೀರಪ್ಪನವರು ಬದುಕಿದ್ದರು, ದೇವರಾಜ ಅರಸು ಅವರು ಬದುಕಿದ್ದರು ಆಗತಾನೇ ಇವರು ತಮ್ಮ ಯುವ ಕಾಂಗ್ರೆಸನ್ನು ಪ್ರಾರಂಭ ಮಾಡಿದ್ದರು. ಅವತ್ತಿನ ಕಾಂಗ್ರೆಸ್ಸಿನ ಕಛೇರಿ ಇವತ್ತು ಜನತಾ ದಳದ ಕಛೇರಿ ಆಗಿದೆ. ಆ ಕಛೇರಿಗೆ ಒಂದು ಮೆರವಣಿಗೆಯ ರೂಪದಲ್ಲಿ ಮೆರವಣಿಗೆಯನ್ನು ಮಾನ್ಯ ದಿವಂಗತ : ಗುಂಡೂರಾಯರು ಒಂದು ಟ್ಯಾಕ್ಸಿಯ ಮೇಲೆ ಮಾನ್ಯ ದಿವಂಗತ ಇಂದಿರಾಗಾಂಧಿಯವರ ಫೋಟೋವನ್ನು ಇಟ್ಟು ಈ ಕಛೇರಿ ನಮಗೆ ಸಿಗಬೇಕೆಂದು ಮೆರವಣಿಗೆ ಹೋಗಿದ್ದರು. ಈ ಸದನದಲ್ಲಿರತಕ್ಕ ಅನೇಕ ಸದಸ್ಯರಿಗೆ ಹಾಗೂ ನನಗೆ 1989 ರಿಂದ ನಿನ್ನೆಯವರೆಗೆ ಅವರ ಜೊತೆಯಲ್ಲಿದ್ದಂತಹ ಸ್ನೇಹ ಸರಿಸಾಟಿ ಕಟ್ಟಲಿಕ್ಕೆ ಸಾಧ್ಯವೇ ಇಲ್ಲವೆಂದು ತಿಳಿದುಕೊಂಡಿದ್ದೇನೆ. ಅವತ್ತಿನಿಂದ ನನಗೂ ಅವರಿಗೂ ಒಂದು ರೀತಿಯ ಸ್ನೇಹ ಇತ್ತು. ನಮ್ಮೆಲ್ಲರನ್ನು ಏಕವಚನದಿಂದ ಕರೆಯುತ್ತಿದ್ದಂತಹ ಸ್ನೇಹಮಯ ವ್ಯಕ್ತಿತ್ವ ಮಾನ್ಯ ದಿವಂಗತಃ ಗುಂಡೂರಾಯರದ್ದು ಆಗಿತ್ತು. ಅವರ ಆಡಳಿತ ವಿಶೇಷವಾಗಿ ವರ್ಗಾವಣೆಯ ವಿಚಾರದಲ್ಲಿ ಅವರು ಎಷ್ಟೊಂದು ಬಿಗಿ ನಿಲುವನ್ನು ತಳೆದಿದ್ದರೂ ಬಹುಶಃ ಅದರಿಂದನೇ ಅವರು ಅಧಿಕಾರವನ್ನು ಕಳೆದುಕೊಂಡು ನಾವು ಅಧಿಕಾರಕ್ಕೆ ಹೋದೆವು ಎಂದು ಹೇಳಿ ನನಗೆ ಅನೇಕಸಾರಿ ಅನ್ನಿಸುತ್ತದೆ. ಅವರು ಯಾರಿಗೂ ಸಹಿತ ಜಗ್ಗುತ್ತಿರಲಿಲ್ಲ. ಅದು ಏನೇ ಇರಲಿ ಅವರು ಜಾತಿಯಲ್ಲಿ ಹೆಸರಿಗೆ ಬ್ರಾಹ್ಮಣರು ಅಷ್ಟೆ. ಆದರೆ ಅವರಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ ಬಗ್ಗೆ ಅವರಿಗೆ ಅನುಕಂಪ ಇತ್ತು. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಹಾಗೆ ಮಾನ್ಯ ಡಾ : ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಪುತ್ಥಳಿ ಇಲ್ಲಿಗೆ ಬರಬೇಕಾದರೆ ನಮ್ಮ ಮಾನ್ಯ ವೆಂಕಟೇಶ್‌ರವರ ತಂದೆ ಬೀರಣ್ಣನವರು ವಿಧಾನ ಪರಿಷತ್ತಿನ

ಸದಸ್ಯರಾಗಿದ್ದರು ನನಗೆ ಜ್ಞಾಪಕ ಇದೆ. ಅವರ ಕೊಠಡಿಯಲ್ಲಿಯೇ ಅವರು ರಾಜಕಾರಣವನ್ನು ಪ್ರಾರಂಭ ಮಾಡಿದರು. ಅವತ್ತಿನಿಂದ ನಾನು ಅವರನ್ನು ನೋಡಿದ್ದೇನೆ. ಪರಿಶಿಷ್ಟಜಾತಿ, ಪರಿಶಿಷ್ಟ ವರ್ಗದವರ ಬಗ್ಗೆ ವಿಶೇಷವಾದಂತಹ ಅನುಕಂಪವನ್ನು ಅವರು ಇಟ್ಟುಕೊಂಡಿದ್ದರು ವಿಧಾನ ವೀದಿಯ ಹೆಸರನ್ನು ಕೊಟ್ಟಿದ್ದು ಸಹಿತ ದಿವಂಗತ ಗುಂಡೂರಾಯರು; ಮೆಡಿಕಲ್ ಕಾಲೇಜನ್ನು ಕೊಡಬೇಕೆಂದು ಪರಿಶಿಷ್ಟ ಜಾತಿ, ಪರಿಶಿಷ್ಟವರ್ಗದವರು ಮುಂದೆ ಬಂದಾಗ ಈ ಕಡೆ ಆಗ ಮಾನ್ಯ ಸಿ.ಎಂ. ಆರ್ಮುಗಂರವರು ಇದ್ದರು. ಎಲ್ಲಾ ವಿರೋಧ ಪಕ್ಷದವರನ್ನು ಕರೆಯಿಸಿ ಅವರಿಗೆ ಒಂದು ಮೆಡಿಕಲ್ ಕಾಲೇಜು ಕೊಡಬೇಕೆಂದು ಹೇಳಿ ಧೈರ್ಯದಿಂದ ಕೊಟ್ಟರು. ಯಾವುದಕ್ಕೂ ಅವರು ಹೆದರುತ್ತಿರಲಿಲ್ಲ, ಅಂತಹ ಧೈರ್ಯ ಕೆಲವು ಸಂದರ್ಭದಲ್ಲಿ ಬೇಕಾಗುತ್ತದೆ. ಆದರಲ್ಲಿಯೂ ಸಹ ಅಧಿಕಾರದಲ್ಲಿದ್ದಂತಹವರಿಗೆ ಅಂತಹ ಧೈರ್ಯ ಬೇಕಾಗುತ್ತದೆ. ನಿನ್ನೆಯ ದಿವಸ ಅವರ ಸಾವಿನ ಸುದ್ದಿ ಬಂದಾಗ ನನಗೆ ತಡೆದುಕೊಳ್ಳುವುದಕ್ಕೆ ಆಗಲಿಲ್ಲ. ನಾನು ರಾಜಕೀಯದಿಂದ ಅವರಿಂದ ಪಡೆದಿರತಕ್ಕದ್ದು ಏನೂ ಇಲ್ಲ. ಆದರೆ ಅವರ ಸ್ನೇಹಕ್ಕೆ ಇವತ್ತು ಕರ್ನಾಟಕದ ಕೋಟ್ಯಾಂತರ ಜನ ಮಾನ್ಯ ಬಂಗಾರಪ್ಪನವರು ಹೇಳಿದಹಾಗೆ ದೆಹಲಿಯಿಂದ ಹಿಡಿದು ಕಲ್ಕತ್ತದಿಂದ ಹಿಡಿದು 'ಗುಂಡಾ ದಾದಾ' ಅಂತ ಕರೆಯುತ್ತಿರತಕ್ಕ ಅವರ ಅನೇಕ ಸ್ನೇಹಿತರಿಗೆ ಗುಂಡೂರಾಯರು ಇವತ್ತು ಇಲ್ಲವಾಗಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹೇಳುತ್ತೇನೆ. ಮತ್ತೊಬ್ಬರಾದ ದಿವಂಗತ : ಜಿ.ಎಸ್. ಆಚಾರ್‌ರವರು ನಮ್ಮ ಸದನದಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಂಥವರು. ಅತ್ಯಂತ ಸರಳಮಯ ಪ್ರಾಮಾಣಿಕ ನಿಷ್ಕಳಂಕ ರಾಜಕಾರಣಿ ಆಗಿದ್ದಂತವರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಪ್ರೊ : ನೂರುಲ್ ಹಸನ್ ಶೈಕ್ಷಣಿಕ ಕ್ಷೇತ್ರದಲ್ಲಿ ಅತ್ಯಂತ ನುರಿತಂತಹ ಮಹನ್ ಆಡಳಿತಗಾರರಾದಂಥವರನ್ನು ನಾವು ಕಳೆದುಕೊಂಡಿದ್ದೇವೆ. ಜೊತೆಗೆ ತಮ್ಮ ಕಾರ್ಯಾಲಯದಲ್ಲಿ ನಾವು ಏನು ಪ್ರಾರಂಭದಲ್ಲಿ ಸಲಹೆಗಳನ್ನು ಕೊಟ್ಟಿದ್ದೇವೆ. ಬಾಬಾ ಸಾಹೇಬ್ ಏಕಾಂಬರ್‌ರವರು ಬೀದರ್ ಜಿಲ್ಲೆಯ ಗಡಿ ನಾಡಿನ ಪ್ರದೇಶದ ಔರದ್‌ನಿಂದ 10 ವರ್ಷಗಳಕಾಲ ಈ ಶಾಸನ ಸಭೆಯ ಸದಸ್ಯರಾಗಿ ಕೆಲಸ ಮಾಡಿದಂಥವರು. ನನಗೂ ಮಾನ್ಯ ವಾಟಾಳ್ ನಾಗರಾಜ್‌ರವರಿಗೂ ಅವರ ಎಂ.ಇ.ಎಸ್. ವಿಚಾರಧಾರೆ ಬಗ್ಗೆ ವಿರೋಧ. ಆದರೆ ನನಗೆ ಬಾಬಾ ಸಾಹೇಬ್ ಏಕಾಂಬರ್‌ರವರು ಅತ್ಯಂತ ಆಕರ್ಷಕ ವ್ಯಕ್ತಿ ಆಗಿದ್ದರು. ಇವತ್ತಿನ ರಾಜಕಾರಣದಲ್ಲಿ ಅಂತಹ ಅತ್ಯಂತ ಒಬ್ಬ ಪ್ರಾಮಾಣಿಕರವಾಗಿರತಕ್ಕಂಥ ರಾಜಕಾರಣಗಳನ್ನು ನಾವು ಬೆರಳೆಣಿಸುವಷ್ಟು ಜನ ಮಾತ್ರ ಕಾಣುತ್ತೇವೆ. ಅವರ ಮುಂದೆ ನಾನಂತೂ ಬಹಳ ಸಣ್ಣವನಾಗಿ ಕಾಣುತ್ತೇನೆ. ಅವರ ಜೊತೆಯಲ್ಲಿ ಮಾತನಾಡಬೇಕೆಂದು ಹೇಳಿದರೆ ನಾನು ಬಹಳ ಸಣ್ಣವನಾಗಿ ಕಾಣುತ್ತೇನೆ. ನನಗೆ ಇವರ ಮುಂದೆ ಅವರ ಪವಿತ್ರವಾಗಿರತಕ್ಕ ಜೀವನದಲ್ಲಿ ಬಹಳ ಕಲ್ಮಶವಾಗಿರತಕ್ಕ ಒಬ್ಬ ವ್ಯಕ್ತಿ ಎಂದು ನನಗೆ ಅನ್ನಿಸುತ್ತಿತ್ತು. ನನ್ನ ಹತ್ತಿರದ ಸಂಬಂಧಿಕರು ಬಾಬಾ ಸಾಹೇಬ್ ಏಕಾಂಬರರು ಆಗಿದ್ದರು. ಅವರು ಸಹಿತ ಇವತ್ತು ನಮ್ಮ ಜೊತೆಯಲ್ಲಿ ಇಲ್ಲ. ಬೀದರ್ ಜಿಲ್ಲೆಗೆ ವಿಶೇಷವಾಗಿ ನಮ್ಮ ರಾಜ್ಯದ ಗಡಿ ನಾಡಿನ ಪ್ರದೇಶಗಳ ಅಭಿವೃದ್ಧಿ ಕೆಲಸಗಳಲ್ಲಿ ಹಾಗೂ ಅವರ ಎಂ.ಇ.ಎಸ್.ನ ವಿಚಾರಧಾರಣೆಯನ್ನು ಕೊನೆಯವರೆಗೂ ವಿರೋಧ ಮಾಡಿದ್ದೇವೆ. ಆದರೆ ಆ ಪ್ರದೇಶದ ಬಡವರಿಗೆ, ಗಡಿ ನಾಡಿನ ಅಭಿವೃದ್ಧಿ ಕೆಲಸಗಳಿಗೆ ಅವರು ಮಾಡಿರತಕ್ಕ ಕೆಲಸ ಅಪಾರವಾದುದು. ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ನಿಮ್ಮ ನಿರ್ಣಯಕ್ಕೆ ನಾನು ಬೆಂಬಲವನ್ನು

ಸೂಚಿಸಿ ನನಗೆ ಈ ದುಃಖ ಸಂದರ್ಭದಲ್ಲಿ ಎರಡು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ, ಅದಕ್ಕೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : – ಮಾನ್ಯ ಅಧ್ಯಕ್ಷರೇ, ನಿನ್ನೆ ಎರಡು ಗಂಟೆಗೆ ನನಗೆ ಸುದ್ದಿ ಗೊತ್ತಾಯಿತು. ಶ್ರೀಮಾನ್ ಗುಂಡುರಾಯರು ಮುಖ್ಯಮಂತ್ರಿಯಾಗಿದ್ದಾಗ ಅವರ ಹತ್ತಿರ ನಾನು ಬಹಳ ಸಮೀಪ ಇದ್ದೆ. ನಿಜವಾಗಿಯೂ ಅವರು ಬಹಳ ಧೈರ್ಯಶಾಲಿಗಳಾಗಿದ್ದರು. ಒಳ್ಳೆಯ ಗಂಡಸುತನ ಇರತಕ್ಕಂಥ ವ್ಯಕ್ತಿಯಾಗಿದ್ದರು. ನಾನು ಮೊನ್ನೆ ಕಾಂಡ್ಲಾ ಮೀಟಿಂಗ್‌ಗೆ ಹೋದಾಗ ಕೆಲವು ಜನಗಳು ಅಲ್ಲಿ ಕೇಳುತ್ತಿದ್ದರು, ''ತುಮಾರಾ ಗುಂಡುದಾದಾ ಕೈಸೆ ಹೈ'' ಎಂದು ಕೇಳುತ್ತಿದ್ದರು. ಅಲ್ಲಿಂದ ನಾನು ಬಂದು ಮೂರು–ನಾಲ್ಕು ದಿವಸಗಳಾಯಿತು. ಮೊನ್ನೆ ತಾನೆ '' ಗುಂಡು ಕೋ ಕ್ಯಾ ಹೋಗಯ'' ಎಂದು ಅಲ್ಲಿನ ಜನರು ಕೇಳಿದ್ದನ್ನು ನಾನು ನೋಡಿದ್ದೇನೆ. ಅಂಥ ಒಂದು ಪ್ರೀತಿ ಭಕ್ತಿ, ಅಷ್ಟೊಂದು ಒಳ್ಳೆಯ ಅಭಿಮಾನ ಆ ಜನಗಳಲ್ಲಿತ್ತು. ನಮ್ಮ ಸಹಕಾರಿ ಸಂಸ್ಥೆಗೆ ಮುಖ್ಯಮಂತ್ರಿಯಾಗಿದ್ದಾಗ ಅವರನ್ನು ಕರೆದಿದ್ದೆವು. ಎರಡು ಎಕರೆ ಜಮೀನು ಬೇಕು ಎಂದು ಕೇಳಿದಾಗ ಅವರು ಈಗಿಂದೀಗಲೇ ಕೊಡುತ್ತೇನೆ ತೆಗೆದುಕೊಳ್ಳಿ ಎಂದು ಹೇಳಿದರು. ಕೆಲವರು ಮುಖ್ಯ ಕಾರ್ಯದರ್ಶಿಯವರನ್ನು ಕೇಳಬೇಕಾಗಿದೆ ಎಂದಾಗ ಅವನು ಹೆಡ್ ಕಾರಕೂನ್, ಅವನನ್ನು ಏನು ಕೇಳುವುದು, ನಾನು ಮುಖ್ಯಮಂತ್ರಿಯಾಗಿ ಹೇಳುತ್ತಿದ್ದೇನೆ, ನೀವು ತೆಗೆದುಕೊಳ್ಳಿ ಎಂದು ಹೇಳಿದರು. ಅಂಥ ಒಂದು ಶಕ್ತಿ, ಧೈರ್ಯ ಅವರಲ್ಲಿತ್ತು. ಅಂಥ ಒಂದು ಒಳ್ಳೆಯ ಎದೆಗಾರಿಕೆ ಅವರಲ್ಲಿತ್ತು. ಅಂಥ ಎದೆಗಾರಿಕೆ ಆಡಳಿತ ನಡೆಸತಕ್ಕಂಥವರಿಗೆ ಇರಬೇಕು. ಎಲ್ಲಾ ಕಡೆಗೂ ಗುಲ್ಬರ್ಗಕ್ಕೆ ಮತ್ತು ಬೇರೆ ಕಡೆಗೂ ಮಿನಿ ವಿಧಾನಸೌಧವನ್ನು ಕಟ್ಟಿ ಕೊಡುತ್ತೇನೆ ಎಂದು ಹೇಳಿದ್ದರು. ಶ್ರೀಮಾನ್ ಗುಂಡುರಾಯರು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಎಲ್ಲರೂ ಅವರನ್ನು ಹೊಗಳಿದ್ದಾರೆ. ಅವರ ನಿಧನದಿಂದ ದೇಶಕ್ಕೆ, ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಹೇಳುತ್ತೇನೆ. ಹಾಗೂ ನನ್ನ ಸ್ನೇಹಿತರಾದ ಶ್ರೀಮಾನ್ ಜಿ.ಎಸ್. ಆಚಾರ್‌ರವರು ಕೂಡ ನಮ್ಮನ್ನು ಅಗಲಿದ್ದಾರೆ. ಅವರು ಸಹಕಾರಿ ರಂಗದಲ್ಲಿ ದಕ್ಷರಾಗಿದ್ದರು. ಬಹಳ ಒಳ್ಳೆಯವರು, ನುರಿತಂಥವರು, ಅನುಭವಿಗಳು, ಅವರು ಅಪೆಕ್ಸ್ ಬ್ಯಾಂಕ್‌ನ ಅಧ್ಯಕ್ಷರಾಗಿದ್ದರು. ನಾನೂ ಕೂಡ ಅವರ ಜೊತೆಯಲ್ಲಿ ಡೈರೆಕ್ಟರ್ ಆಗಿದ್ದೆ. ಬಹಳ ಕಡೆ ಅವರು ಹೌಸಿಂಗ್ ಸಂಸ್ಥೆಗಳ ಅಧ್ಯಕ್ಷರಾಗಿದ್ದರು. ನಾವು ಅವರು ಸೇರಿ ಕೆಲಸವನ್ನು ಮಾಡಿದ್ದೇವೆ. ಬಹಳ ಒಳ್ಳೆಯವರು ಇವತ್ತು ಅವರ ನಿಧನದಿಂದಾಗಿ ಸಹಕಾರಿ ರಂಗಕ್ಕೆ ತುಂಬಲಾರದ ನಷ್ಟವಾಗಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಸಹಕಾರಿ ರಂಗದ ಬಗ್ಗೆ ಅಸೆಂಬ್ಲಿಯಲ್ಲಿ ಮಾತನಾಡತಕ್ಕಂಥವರು ಹಿಂದೆ ಕೆ.ಎಚ್. ಪಾಟೀಲರು ಇದ್ದರು. ಅವರನ್ನೂ ಕೂಡ ನಾವು ಕಳೆದುಕೊಂಡಿದ್ದೇವೆ. ಅಸೆಂಬ್ಲಿಯಲ್ಲಿ ಸಹಕಾರಿ ರಂಗದ ಬಗ್ಗೆ ಮಾತನಾಡತಕ್ಕಂಥವರು ಕೆ.ಎಚ್. ಪಾಟೀಲರು ಆದಮೇಲೆ ನಮ್ಮ ಜಿ.ಎಸ್. ಆಚಾರ್‌ರವರು ಇದ್ದರು. ಅವರ ನಿಧನದಿಂದಾಗಿ ಸಹಕಾರಿ ರಂಗವು ವಂಚಿತವಾಗಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಅವರು ನಿಧನದಿಂದಾಗಿ ತುಂಬಾ ದುಃಖವಾಗಿದೆ. ಅವರ ಮನೆಯವರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕೊಡಲಿ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಹಾಗೆಯೇ ನನ್ನ ಕ್ಷೇತ್ರದವರಾದ ಬಾಬಾ ಸಾಹೇಬ್ ಏಕಂಬೀಕರ್ ಅವರೂ ಕೂಡ ನಮ್ಮನ್ನು ಅಗಲಿದ್ದಾರೆ. ಅವರು ಮಹಾರಾಷ್ಟ್ರ ಏಕೀಕರಣ ಸಮಿತಿಯ ಶಾಸಕರು. ಅವರು ಒಳ್ಳೆಯ ದಕ್ಷರಾಗಿದ್ದರು. ಅವರಲ್ಲಿ ಚಿಲ್ಲರೆ ಬುದ್ಧಿ ಏನೂ ಇರಲಿಲ್ಲ. ಅಷ್ಟೊಂದು ಒಳ್ಳೆಯ ರೀತಿಯ ನಡವಳಿಕೆ ಅವರಲ್ಲಿತ್ತು. ಯಾವ ಸಣ್ಣ ಸಣ್ಣ

ಕೆಲಸಕ್ಕೂ ಅವರು ಕೈಹಾಕುತ್ತಿರಲಿಲ್ಲ. ತುಂಬಾ ಒಳ್ಳೆಯ ಕೆಲಸಗಳನ್ನು ಕೂಡ ಮಾಡಿದ್ದಾರೆ. ಒಳ್ಳೆಯ ಅಭಿವೃದ್ಧಿ ಕೆಲಸಗಳನ್ನು ಕೂಡ ಮಾಡಿದ್ದಾರೆ. ಅವರು ಸಾಯುವುದಕ್ಕೆ ಮುನ್ನಾ ದಿವಸ ನಾನು ಹೋಗಿದ್ದೆ. ಅವರು ಆಗ ಕೋಮಾದಲ್ಲಿದ್ದರು. ಅವರಿಗೆ ಕ್ಯಾನ್ಸರ್ ಆಗಿತ್ತು. ಮಾತನಾಡಲಿಕ್ಕೂ ಕೂಡ ಸಾಧ್ಯವಾಗುತ್ತಿರಲಿಲ್ಲ. ಅಂಥ ಸ್ಥಿತಿಯಲ್ಲಿ ಅವರು "ನಮಸ್ಕಾರ, ಓ ಸಾಬ್" ಎಂದು ಹೇಳಿದರು. ಅವರ ಅಣ್ಣ ಕೂಡ ಅವರ ಹತ್ತಿರ ಇದ್ದರು. ಅವರು ಸತ್ತಾಗ ಜನರು ಎಷ್ಟೊಂದು ಅವರ ಬಗ್ಗೆ ಪ್ರೀತಿ ವಿಶ್ವಾಸಗಳನ್ನು ಇಟ್ಟುಕೊಂಡಿದ್ದರು ಎಂಬುದನ್ನು ನೋಡಬೇಕಾಗಿತ್ತು. ಅಂಥವರನ್ನು ನಾವು ಕಳೆದುಕೊಂಡಿದ್ದೇವೆ. ನಮ್ಮ ಕ್ಷೇತ್ರಕ್ಕೇ ಅಲ್ಲದೆ ನಮ್ಮ ಇಡೀ ರಾಜ್ಯಕ್ಕೆ ಅಂಥ ಪ್ರಾಮಾಣಿಕ ವ್ಯಕ್ತಿ ಇರಬೇಕಾಗಿತ್ತು. ಅದರಿಂದ ನಮಗೆ ನಷ್ಟವಾಗಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇನ್ನು ಜನರಲ್ ಕಾರ್ಯಪ್ಪ ಅವರು ಈ ಭಾರತಕ್ಕೆ ಮಾಡಿರತಕ್ಕಂಥ ಕೆಲಸದ ಬಗ್ಗೆ ಎಲ್ಲರೂ ಕೂಡ ಹೊಗಳಿದ್ದಾರೆ. ನಿಜವಾಗಿಯೂ ಅಂಥವರು ಇರಬೇಕು. ಅಂಥ ವ್ಯಕ್ತಿ ಇಲ್ಲ ಎಂದು ಹೇಳಿದರೆ ನಾವುಗಳು ಸ್ವತಂತ್ರವಾಗಿ ಮಾತನಾಡುವುದಕ್ಕೇ ಸಾಧ್ಯವಾಗುತ್ತಿರಲಿಲ್ಲ. ಅಷ್ಟೊಂದು ಒಳ್ಳೆಯವರು. ಕಾರ್ಯಪ್ಪ ಅವರಲ್ಲಿ ಸಮಯಪ್ರಜ್ಞೆ ಯಾವ ರೀತಿ ಇತ್ತೆಂದರೆ ಒಮ್ಮೆ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಒಂದು ಸಮಾರಂಭಕ್ಕೆ ಅವರು ಮೂರು ಗಂಟೆಗೆ ಬರಬೇಕಾಗಿತ್ತು. ಅವರು ಕಾರಿನಿಂದ ಬಂದಾಗ ಮೂರು ಗಂಟೆಗೆ ಇನ್ನು ಐದು ನಿಮಿಷ ಕಡಿಮೆ ಇತ್ತು. ಹೆಗಡೆಯವರು ಕಾರಿನಿಂದ ಇಳಿದರೂ ಅವರು ಕಾರಿನಿಂದ ಇಳಿಯಲಿಲ್ಲ. ನಾನು ಕಾರಿನಿಂದ ಇಳಿಯುವುದಕ್ಕೆ ಇನ್ನು ಐದು ನಿಮಿಷ ಇದೆ ಎಂದು ಹೇಳಿದರು. ಅಂಥ ಒಂದು ಒಳ್ಳೆಯ ಪದ್ಧತಿ. ಇವತ್ತು ನಾವು ಅಂಥವರನ್ನು ಕೂಡ ಕಳೆದು ಕೊಂಡಿದ್ದೇವೆ. ಅದಕ್ಕೆ ನಮಗೆ ಬಹಳ ನಷ್ಟ ಆಗಿದೆ. ತಾವು ತಂದಂತಹ ನಿರ್ಣಯವನ್ನು ನಾನೂ ಕೂಡ ಒಪ್ಪಿ ಅವರೆಲ್ಲರ ಆತ್ಮಕ್ಕೆ ಶಾಂತಿಯು ಸಿಗಲಿ ಎನ್ನತಕ್ಕ ಮಾತನ್ನು ಹೇಳಿ ನನಗೆ ಎರಡು ಮಾತನ್ನು ಆಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI B.I. PATIL(Uchagaon) : Mr. Speaker Sir, we deeply mourn the sad demise of Sri R.Gundu Rao, ex-Chief Minister of Karnataka. His services to the downtrodden section of the society will always be remembered. It is a great loss to the State as well as to the country. He was straight forward in his approach and was famous for taking spot decisions. He solved so many unresolved problems during his tenure as Chief Minster.

Secondly, a prominent and popular leader Sri Bapu Saheb Ekambekar, ex-MLA died this month. He represented the border area of Karnataka and worked for the common people, particularly in Aurad constituency of Bidar district. His services are always remembered. On behalf of the MES, we join you in offering our heart-felt condolences to the memebers of the bereaved family.

We also condole the death of the Field Marshal Cariappa and other dignitaries. We pray God to give courage to the members of their families to bear the irreparable loss.

ಶ್ರೀ ಭೀಮಣ್ಣ ಖಂಡ್ರೆ(ಸಾರಿಗೆ ಸಚಿವರು) :- ಮಾನ್ಯ ಅಧ್ಯಕ್ಷರೇ, ತಾವು ತಂದಂತಹ ನಿರ್ಣಯಕ್ಕೆ ಬೆಂಬಲಿಸುತ್ತಾ ಮಾನ್ಯ ಮುಖ್ಯಮಂತ್ರಿಯವರು ಜನರಲ್ ಕಾರಿಯಪ್ಪ, ಹಾಗೂ ಶ್ರೀಮಾನ್ ಗುಂಡೂರಾಯರು ಹಾಗೆಯೇ ಬೇರೆ ಬೇರೆ ಹಿರಿಯರು ಏನು ನಿಧನ ಹೊಂದಿದ್ದಾರೆ, ಅವರ ಬಗ್ಗೆ ಮಾತನಾಡಿದ್ದಾರೆ ಅದಕ್ಕೆ ಧ್ವನಿಗೂಡಿಸುತ್ತಾ ನನಗೆ ಕೌನ್ಸಿಲ್‌ನಲ್ಲಿ ಅವರ ಬಗ್ಗೆ ಮಾತನಾಡುವ ಅವಶ್ಯಕತೆ ಇದೆ ಮತ್ತು ಛಾನ್ಸ್ ಇದೆ. ಆ ದೃಷ್ಟಿಯಿಂದ ನಾನು ಸವಿಸ್ತಾರವಾಗಿ ಹೇಳುವುದಿಲ್ಲ. ಒಂದು ಮಾತು ಮಾತ್ರ ಹೇಳಬಹುದು. ಶ್ರೀಮಾನ್ ಗುಂಡೂರಾಯರು ಮುಖ್ಯಮಂತ್ರಿಗಳಾದ ಮೇಲೆ ಭಾಲ್ಕಿಯಲ್ಲಿ ಒಂದು ಪ್ರಕರಣ ಆಯಿತು. ಅದು ಒಂದು ಐತಿಹಾಸಿಕ ಪ್ರಕರಣ. ಅದನ್ನು ನಾನು ಈಗ ಹೇಳುವ ಇಚ್ಛೆ ಇಲ್ಲ. ಪ್ರಸಂಗ ಬಂದಾಗ ಕೌನ್ಸಿಲ್‌ನಲ್ಲಿ ಹೇಳುತ್ತೇನೆ. ಈಗ ನಾನು ನಿಂತಿದ್ದ ಕಾರಣ ನಮ್ಮ ಇಬ್ಬರು ಸ್ನೇಹಿತರು ಶ್ರೀಮಾನ್ ಬಾಬು ಸಾಹೇಬ್ ಏಕಾಂಬೇಕರ್ ಹಾಗೂ ಶ್ರೀಮಾನ್ ಜಿ.ಎಸ್. ಆಚಾರ್ ಅವರ ಬಗ್ಗೆ ಮಾತನಾಡಲು. ಏಕೆಂದರೆ ಎಂ.ಎಲ್.ಎ. ಬಗ್ಗೆ ಕೌನ್ಸಿಲ್‌ನಲ್ಲಿ ಮಾತನಾಡುವುದಕ್ಕೆ ಆಗುವುದಿಲ್ಲ. ಆ ದೃಷ್ಟಿಯಿಂದ ಅವರ ಬಗ್ಗೆ ಎರಡು ಮಾತನ್ನು ಆಡಬೇಕು ಎಂದು ನಿಂತಿದ್ದೇನೆ. ಶ್ರೀಮಾನ್ ಆಚಾರ್ ಅವರ ಬಗ್ಗೆ ಈಗ ನಮ್ಮ ಮಿತ್ರರು ಹೇಳಿದಂತೆ ಸಹಕಾರಿ ರಂಗದಲ್ಲಿ ಅವರು ಬಹಳ ಒಳ್ಳೆಯ ಕೆಲಸ ಮಾಡಿದ್ದರು. ಅಪೆಕ್ಸ್ ಬ್ಯಾಂಕಿನ ಛೇರ್ಮನ್ ಸಹ ಆಗಿದ್ದರು. ಅವರು ನಿಧನ ಹೊಂದಿದ್ದಕ್ಕೆ ಸಹಕಾರಿ ರಂಗಕ್ಕೆ ಬಹಳ ದೊಡ್ಡಹಾನಿ ಆಗಿದೆ; ಎನ್ನುವ ಮಾತನ್ನು ಇವತ್ತಿನ ದಿವಸ ನಾನು ಪ್ರಕಟ ಮಾಡುತ್ತೇನೆ. ಅವರ ಬಗ್ಗೆ , ಅವರ ಸಂಬಂಧದ ಬಗ್ಗೆ ಹೇಳುವುದಾದರೆ ನನ್ನ ಅವರ ಸಂಬಂಧ ಒಂದು ಯೋಗಾಸನದ ಬಗ್ಗೆ ಇದೆ. ಇಲ್ಲಿ ಯೋಗ ಕ್ಲಾಸ್ ನಡೆಯುವಾಗ ನಾನೂ ಸಹ ಕಲಿತುಕೊಂಡೆ. ಅವರೂ ಅಲ್ಲಿ ಬರುತ್ತಿದ್ದರು. ಆ ಯೋಗದ ಬಗ್ಗೆ, ಹೆಲ್ತ್ ಬಗ್ಗೆ, ನೇಚರ್ ಕ್ಯೂರ್ ಬಗ್ಗೆ ಬೇರೆ ಆಚಾರ ವಿಚಾರದ ಬಗ್ಗೆ ನಮ್ಮದೂ ಅವರದೂ ಚರ್ಚೆ ನಡೆಯುತ್ತಿತ್ತು. ಅಂತಹ ಒಬ್ಬ ಮಿತ್ರ ವಾಸ್ತವಿಕವಾಗಿ ಒಬ್ಬ ನೈತಿಕ, ಚರಿತ್ರವಾನ್ ಮನುಷ್ಯ ನಮ್ಮಿಂದ ಇವತ್ತು ಹೋದ ಕಾರಣ ನಮಗೆ ಬಹಳ ನೋವು ಆಗುತ್ತಿದೆ ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಬಾಬು ಸಾಹೇಬ್ ಏಕಾಂಬೇಕರ್ ಅವರ ಬಗ್ಗೆ ಹೇಳುವುದಾದರೆ ಅವರೂ ನಾವು ಒಂದೇ ಜಿಲ್ಲೆಯವರು. ನಾನೂ ಅವರು ಆರನೇ ಇಯತ್ತೆನಿಂದ ಮೆಟ್ರಿಕ್‌ವರೆಗೆ ಒಂದೇ ಓಣಿಯಲ್ಲಿ ಒಂದೇ ಹೈಸ್ಕೂಲಿನಲ್ಲಿ ಓದುತ್ತಿದ್ದೆವು. ಮುಂದೆ ನಮ್ಮ ಮಿತ್ರತ್ವದೊಳಗೆ ಎಂದೂ ವ್ಯತ್ಯಾಸ ಬಂದಿಲ್ಲ ಆದರೂ ಮತ ಭೇತ ವಿಷಯದ ಮೇಲೆ ಬಂತು. ಅದು ಏನೆಂದರೆ ಮಹಾರಾಷ್ಟ್ರ ಮತ್ತು ಕರ್ನಾಟಕದ ವಿಷಯ. ನನ್ನ ಮಾತೃಭಾಷೆ ಕನ್ನಡ, ಅವರ ಮಾತೃಭಾಷೆ ಮರಾಠಿ. ಅವರು ಮಹಾರಾಷ್ಟ್ರ ಏಕೀಕರಣ ಸಮಿತಿಯ ಅಧ್ಯಕ್ಷರಾಗಿದ್ದರು. ನಾನು ಜಿಲ್ಲೆಯ ಸಂಯುಕ್ತ ಕರ್ನಾಟಕದ ಅಧ್ಯಕ್ಷ ಆಗಿದ್ದೆ. ಈ ಪ್ರಕಾರ ನಮ್ಮ ಅವರಲ್ಲಿ ವಾದ ವಿವಾದ ಶುರು ಆಯಿತು ಈ ವಿಷಯದಲ್ಲಿ. ಅದು ಇದ್ದರೂ ಯಾವಾಗಲಾದರೂ ಲಕ್ಷಾವಧಿ ಜನ ಅಲ್ಲಿ ನೆರೆದಿದ್ದ ಒಂದು ಸಮಯದಲ್ಲಿ ಎಷ್ಟೋ ಕ್ಲಾಷ್ ಎಷ್ಟೋ ದಂಗೆ ಆಗುತ್ತಿತ್ತೋ ಎಂಬ ಸಂಶಯ ಬಂದರೂ ನಮ್ಮ ಸ್ನೇಹ ಮತ್ತು ಆಚಾರ ವಿಚಾರದ ಬಗ್ಗೆ ಮತ್ತು ಸೈದ್ಧಾಂತಿಕ ದೃಷ್ಟಿಯು ಇದ್ದ ಕಾರಣ ಅವು ಯಾವ ಪ್ರಕಾರ ತೊಂದರೆ ಆಗುತ್ತಿರಲಿಲ್ಲ. ಅವರ ಮಟ್ಟಿಗೆ ಅವರು,

ನಮ್ಮ ಮಟ್ಟಿಗೆ ನಾವು. ಅವರು ದೆಹಲಿಗೆ ಹೋಗಿದ್ದಾಗ ನೂರಾರು ಜನರನ್ನು ತೆಗೆದುಕೊಂಡು ಹೋದರು. ನಾವು ಕರ್ನಾಟಕದ ಬಗ್ಗೆ, ಬೀದರ್ ಅನ್ನು ಕರ್ನಾಟಕಕ್ಕೆ ಸೇರಿಸಬೇಕು ಎನ್ನುವ ವಿಷಯದಲ್ಲಿ ನಾಲ್ಕು ನೂರು ಐನೂರು ಜನರನ್ನು ತೆಗೆದುಕೊಂಡು ಹೋದೆವು. ಅಲ್ಲಿ ಇಂದಿರಾಗಾಂಧಿಯವರಲ್ಲಿ ವಿಷಯ ಬಂದಾಗ ನಾವು ಧರಣಿ ಮಾಡಿದ್ದೇವೆ, ಅವರೂ ಧರಣಿ ಮಾಡಿದ್ದಾರೆ. ಈ ಪ್ರಕಾರ ನಾಲ್ಕು ವರ್ಷ ಆದ ಮೇಲೆ ಮಹಾಜನ್ ಕಮೀಷನ್ ರಿಪೋರ್ಟ್ ಬಂತು. ಬಂದ ನಂತರ ನಾವು ಎಷ್ಟು ಜನ ಎಂ.ಎಲ್.ಎಗಳು ಹೈದರಾಬಾದ್ ಕರ್ನಾಟಕದ ಕಡೆಯಿಂದ ಬಂದವರು ಇದ್ದೆವು, ಅವರೆಲ್ಲರಲ್ಲೂ ಒಂದು ಕಾಂಪ್ರಮೈಸ್ ಮಾಡಿ ಮೂರು ತಾಲ್ಲೂಕು ಮಹಾರಾಷ್ಟ್ರಕ್ಕೆ, ಎರಡು ತಾಲ್ಲೂಕು ಆಂಧ್ರಕ್ಕೆ, ನಾಲ್ಕು ಕರ್ನಾಟಕಕ್ಕೆ ಈ ಪ್ರಕಾರ ನಮ್ಮಲ್ಲಿ ಒಂದು ಸಮಝೋತಾ, ಕಾಂಪ್ರಮೈಸ್ ಆಯಿತು. ಬಾಪು ಸಾಹೇಬ್‌ರವರಿಗೆ ಒಂದು ಅಭಿಮಾನವಿತ್ತು. ಏನೆಂದರೆ, ಅವರ ಭಾಗದ 160 ಹಳ್ಳಿಗಳೂ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಅವರ ಕೊನೆಯುಸಿರಿರುವ ತನಕ ಪ್ರಯತ್ನ ಮಾಡಿದರು. ಇತರ ವಿಷಯಗಳಲ್ಲಿ ನಮಗೂ ಅವರಿಗೂ ಎಷ್ಟೇ ವಿರೋಧಗಳಿದ್ದರೂ ಕೂಡ ಒಬ್ಬೊಬ್ಬರ ಬಗ್ಗೆ ಅವರಿಗಿದ್ದ ಒಂದು ಆದರ, ಗೌರವ ಏನಿತ್ತೋ ಅದು ಸ್ಮರಣೀಯವಾದುದು. ಅವರು ಕ್ಯಾನ್ಸರ್‌ಗೆ ತುತ್ತಾದ ನಂತರ ನನ್ನನ್ನೊಮ್ಮೆ ಮುದ್ದಾಂ ಕರೆಸಿಕೊಂಡು 'ಮಿಸ್ಟರ್ ಖಂಡ್ರೆಯವರೆ, ನಾನು ಹೋಗುತ್ತಿದ್ದೇನೆ, ನಮ್ಮ-ನಿಮ್ಮ ನಡುವೆ ಇರತಕ್ಕ ಭಿನ್ನಾಭಿಪ್ರಾಯಗಳೇನೇ ಇರಲಿ, ನನಗೆ ಈ ಭಾಗದ ಅಭಿವೃದ್ಧಿ ಬಗ್ಗೆ ಬಹಳ ಕಾಳಜಿ ಇರುವುದರಿಂದ, ಬೊಂಬಾಯಿಯಿಂದ ಔರಾದ್‌ವರೆಗೆ, ಔರಾದ್‌ನಿಂದ ಬೊಂಬಾಯಿಯವರೆಗೆ ಮತ್ತು ಔರಾದ್‌ನಿಂದ ನಾಂದೇಡ-ಹುಸ್ಮನಾಬಾದ್‌ಗೆ ನೀವು ಬಸ್ ಸೌಕರ್ಯ ಕಲ್ಪಿಸಿಕೊಡಬೇಕು ಎಂದು ಹೇಳಿದ್ದರು. ಈ ಕುರಿತು ಕೆಎಸ್‌ಆರ್‌ಟಿಸಿಯವರಿಗೂ ಬಹಳ ಆಸಕ್ತಿ ಇದೆ. ಆದರೆ ನನ್ನ ಆರೋಗ್ಯ ಸರಿಯಾಗಿದ್ದಿದ್ದರೆ ನಿಮ್ಮಿಬ್ಬರು ಮಂತ್ರಿಗಳನ್ನು ಕುಳ್ಳಿರಿಸಿಕೊಂಡು ಮಾತನಾಡಬೇಕೆಂಬ ವಿಚಾರ ನನ್ನ ಮನಸ್ಸಿನಲ್ಲಿತ್ತು. ಆದರೆ, ಆ ಭಾಗದ ಪ್ರಗತಿ ನೆಟ್ಟಗಿಲ್ಲ. ನಾನು ಸ್ವಲ್ಪ ದಿವಸದಲ್ಲಿಯೇ ಹೋಗುವವನಿದ್ದೇನೆ. ನನಗೊಂದು ಇಚ್ಛೆ ಇದೆ, ಏನೆಂದರೆ, ನಮ್ಮ ಭಾಗದ ಜನರಿಗೆ ಬಸ್ ಸೌಲಭ್ಯ ಕಲ್ಪಿಸಿಕೊಡಬೇಕು, ಆ ಸೌಲಭ್ಯ ಕಲ್ಪಿಸಿಕೊಡುತ್ತೀರೆನ್ನುವ ದೃಷ್ಟಿಯಿಂದ ನಾನು ನಿಮ್ಮನ್ನು ನಂಬುತ್ತಿದ್ದೇನೆ, ನಿಮ್ಮ ಬಗ್ಗೆ ನನಗೆ ಬಹಳ ಗೌರವವಿದ್ದು, ನನ್ನ ಬಗ್ಗೆಯೂ ನಿಮಗೆ ಅಷ್ಟೇ ಗೌರವವಿರುವುದರಿಂದ ಈ ವಿಚಾರ ಹೇಳುತ್ತಿದ್ದೇನೆಂದರು. ಆಗ ನಾನು ಅವರಿಗೆ ವಚನ ಕೊಟ್ಟೆ : ಈ ವಿಚಾರ ಬಂದಾಗ ಮಾಡುತ್ತೇನೆಂದು ಹೇಳಿದೆ. ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಏಕೆ ಇಡೀ ರಾಷ್ಟ್ರದಲ್ಲಿ ಮಾನವರ ಸಂಖ್ಯೆ ಬಹಳ ಹೆಚ್ಚಿದ್ದರೂ ಮನುಷ್ಯರ ಸಂಖ್ಯೆ ಬಹಳ ಕಡಿಮೆ ಇದೆಯೆನ್ನುವ ಮಾತು ಎಲ್ಲರೂ ಒಪ್ಪಿಕೊಳ್ಳತಕ್ಕದ್ದೆ. ಅಂತಹ ಮನುಷ್ಯರ ಪೈಕಿ ಯಾರಲ್ಲಿ ಮನುಷ್ಯತ್ವ ಇದೆಯೋ, ಯಾರಲ್ಲಿ ಆಚಾರ-ವಿಚಾರ ಇದೆಯೊ ಅವರು ದೊಡ್ಡವರು. ಮನುಷ್ಯತ್ವ ಇಲ್ಲದಿದ್ದರೆ ಮನುಷ್ಯನಿಗೂ-ದನಗಳಿಗೂ ಏನೂ ವ್ಯತ್ಯಾಸವೇ ಇರುವುದಿಲ್ಲ. ಮನುಷ್ಯನು ಹುಟ್ಟುತ್ತಾನೆ, ಸಾಯುತ್ತಾನೆ, ದನಗಳೂ ಸಹ ಹುಟ್ಟುತ್ತವೆ ಸಾಯುತ್ತವೆ. ಸಚ್ಚಾರಿತ್ರ್ಯ ಹೊಂದಿದ್ದ ಶ್ರೀಮಾನ್ ಬಾಪು ಸಾಹೇಬ್‌ರವರು ನಮ್ಮ ಜಿಲ್ಲೆಯಿಂದ ಹೋದ ಕಾರಣ ನಮ್ಮ ಜಿಲ್ಲೆಗೆ ದೊಡ್ಡ ಪ್ರಮಾಣದಲ್ಲಿ ಲುಕ್ಸಾನವಾಗಿದೆಯೆಂದು ಅನಿಸುತ್ತದೆ. ಮಾನ್ಯ ಸದಸ್ಯರಾಗಿದ್ದಂಥ ಶ್ರೀಮಾನ್ ಜಿ.ಎಸ್. ಆಚಾರ್‌ರವರ ವಿಚಾರದಲ್ಲಾಗಲೀ ಅಥವಾ ಇತರರ ವಿಚಾರದಲ್ಲಿ ತಾವು ಏನು ಮಾತನಾಡಿದಿರಿ, ಜನರಲ್ ಕಾರಿಯಪ್ಪನವರ ಬಗ್ಗೆ ಹೇಳಬೇಕೆಂದರೆ ನಾನು

14ನೇ ವಯಸ್ಸಿನವನಾಗಿದ್ದಾಗ ನನಗೂ ಅವರಿಗೂ ಸಂಬಂಧವಿತ್ತು, ಅದಾದ ನಂತರ ಒಂದೆರಡು ಸಲ ಭೇಟಿಯಾಗುವ ಪ್ರಸಂಗ ಬಂದಿತ್ತು. ಹಾಗೆಯೇ ಶ್ರೀಮಾನ್ ಗುಂಡೂರಾವ್‌ರವರ ಜೊತೆಗಿದ್ದ ನಮ್ಮ ಸಂಬಂಧದ ವಿಚಾರದ ಬಗ್ಗೆ ವಿಸ್ತಾರವಾಗಿ ಹೇಳಬೇಕಾಗಿದೆ. ಏಕೆಂದರೆ, ಆ ದೃಷ್ಟಿಯಿಂದ ಏನೇನಾಯಿತು ಎಂಬುದು ಐತಿಹಾಸಿಕ. ಈ ಪವಿತ್ರವಾದ ಸದನದಲ್ಲಿ ನಾನು ಬಹಳಷ್ಟು ಸಮಯ ತೆಗೆದುಕೊಳ್ಳಲಾರದೆ ನನಗೆ ಮಾತನಾಡಲು ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ನನ್ನ ಪರವಾಗಿ ಹಾಗೂ ನನ್ನ ಜಿಲ್ಲೆಯ ಜನತೆಯ ಪರವಾಗಿ ಮೃತರಾದವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಡಾ : ಜೀವರಾಜ್ ಆಳ್ವ(ಮಲ್ಲೇಶ್ವರಂ) : ಮಾನ್ಯ ಸಭಾಧ್ಯಕ್ಷರೆ, ಮಿತ್ರತ್ವಕ್ಕೆ ಇನ್ನೊಂದು ಹೆಸರೇ ಗುಂಡೂರಾಯರು. It could be a synonymous for friendship ಎಂದು ಹೇಳುತ್ತಾರೆ. ಮಿತ್ರರಾದ ಬಂಗಾರಪ್ಪನವರ ಹೇಳಿಕೆಯನ್ನು ನಾನು ಪುನರುಚ್ಚರಿಸುವುದಕ್ಕೆ ಇಷ್ಟಪಡುತ್ತೇನೆ. ಬಹಳ ತೀಕ್ಷ್ಣವಾದ ಭಿನ್ನಾಭಿಪ್ರಾಯಗಳು ರಾಜಕೀಯದಲ್ಲಿ ಬರುತ್ತದೆ, ಅಷ್ಟೇ ಕಟುವಾದ ಟೀಕೆಗಳನ್ನು ನಾವುವಿಧಾನಸಭೆಯಲ್ಲಿ ಮಾಡುತ್ತೇವೆ. ಆದರೆ, ಇದಕ್ಕೆ ಹೊರತುಪಡಿಸಿ ಶ್ರೀ ಗುಂಡೂರಾಯರ ಮಿತ್ರತ್ವದ ಆಕರ್ಷಣೆಯ ಸೆಳೆತ ಎಂತಹುದು ಎಂಬುದನ್ನು ನಮ್ಮಲ್ಲಿರುವ ಬಹಳಷ್ಟು ಜನರು ಕಲಿಯಬೇಕಾಗಿದೆ. ನಾನು ನನ್ನ ಎಲ್ಲಾ ಹಿರಿಯ ರಾಜಕಾರಣಿಗಳಿಂದ, ಅವರಲ್ಲಿರುವ ಒಂದು ವೈಶಿಷ್ಟ್ಯಪೂರ್ಣವಾದ ಗುಣಗಳನ್ನು ಅತ್ಯಂತ ಪ್ರಾಮಾಣಿಕವಾಗಿ ಕಲಿತು ಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಆದರೆ, ನನ್ನ ಅನಿಸಿಕೆ ಇಷ್ಟೆ : ಶ್ರೀಮಾನ್ ಗುಂಡೂರಾಯರಲ್ಲಿದ್ದ ಮಿತ್ರತ್ವದ ಭಾವನೆ ಕುರಿತು ಮಾನ್ಯ ಸದಸ್ಯರಾದ ಶ್ರೀ ಸಿಂಧ್ಯರವರು ಒಂದು ಘಟನೆ ಹೇಳಿದರು. ಏನೆಂದರೆ, ನಾವುಗಳು ಈ ಕಡೆ ನಿಂತಿದ್ದೆವು. ಜೆ.ಹೆಚ್. ಪಟೇಲರು ಬಹಳ ಪ್ರಚೋದನಕಾರಿಯಾಗಿ ಭಾಷಣ ಮಾಡುತ್ತಾ, ಕಟುವಾಗಿ ಟೀಕೆ ಮಾಡಿದರು. ಆಗ ಶ್ರೀಮಾನ್ ಗುಂಡೂರಾಯರು ಅಂಗಿಯ ತೋಳು ಮಡಿಚಿಕೊಂಡು ಇತ್ತ ಕಡೆ ಬಂದರು, ಪಟೇಲರು ಕೂಡ ಇತ್ತ ಕಡೆಯಿಂದ ಹೋದರು. ಇನ್ನೇನು ಗುಂಡೂರಾಯರ ಗದಾಪ್ರಹಾರ ಪಟೇಲರ ಮೇಲಾಗುತ್ತದೆ, ಪಟೇಲರನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಬೇಕಾಗುತ್ತದೆ ಎಂದು ನಾವುಗಳು ಆಲೋಚಿಸುವಷ್ಟರಲ್ಲಿ ಪುನಃ ಇಬ್ಬರೂ ತಮ್ಮ ಸ್ವಸ್ಥಾನಗಳಿಗೆ ಮರಳಿದರು. ಮರುದಿನ ಬೆಳಿಗ್ಗೆ ಶ್ರೀ ಗುಂಡೂರಾಯರ ಮನೆಯಲ್ಲಿ ಶ್ರೀ ಜೆ.ಹೆಚ್. ಪಟೇಲರಿಗೆ ಚಹಾಪಾನ. ಮಿತ್ರತ್ವ ಎಂದರೆ ಇದು, ಇದೊಂದು ಮಿತ್ರತ್ವದ ಸೆಳೆತ, ಆಕರ್ಷಣೆ ಇದನ್ನು ನಾವು ಕಲಿಯಬೇಕಾಗಿದೆ. ನಾನು ಒಂದು ಮಾತನ್ನು ಹೇಳುತ್ತೇನೆ, ಅದನ್ನು ಯಾರೂ ತಪ್ಪು ತಿಳಿದು ಕೊಳ್ಳಬಾರದು. ಇಂದಿನ ಮುಖ್ಯಮಂತ್ರಿಗಳನ್ನೊಳಗೊಂಡಂತೆ ಹಿಂದಿನ ಎಲ್ಲಾ ಮೂವರು ಮುಖ್ಯಮಂತ್ರಿಗಳನ್ನು ಸೇರಿಸಿದರೆ ನಿಮ್ಮ (ಕಾಂಗ್ರೆಸ್) ಮುಖ್ಯಮಂತ್ರಿಯಾಗಿದ್ದಂಥ ಶ್ರೀಮಾನ್ ಗುಂಡೂರಾಯರನ್ನೆ ನಾವು ಮೆಚ್ಚಿಕೊಳ್ಳುತ್ತಿರುವುದು. ಲಂಚಗುಳಿತನ, ಭ್ರಷ್ಟತೆ, idiosyncracies, 32 ಹೆಲಿಪ್ಯಾಡ್‌ಗಳು, ಇದರ ಬಗ್ಗೆ ನಾನು ಟೀಕೆ ಮಾಡುತ್ತಿಲ್ಲ. ಅವರು ಒಂದು ಮಾತು ಹೇಳುತ್ತಿದ್ದರು. ಅದೇನೆಂದರೆ : ನಾಳೆ ಮಾಡುವುದನ್ನು ಇವೊತ್ತೇ ಮಾಡೋಣ ಇವತ್ತು ಮಾಡುವುದನ್ನು ಇದೇ ನಿಮಿಷದಲ್ಲಿ ಮಾಡೋಣವೆಂದು. ಏನೋ ದಿಢೀರ್ ಘೋಷಣೆ ಮಾಡುತ್ತೇವೆಂದು ಅದಕ್ಕೆ ಟೀಕೆ ಮಾಡುವವರೂ ಸಹ ಇದ್ದರು. ನಾನು ರಾಜಕೀಯವಾಗಿ ವೇದಿಕೆಗಳಿಂದ ಸ್ವಲ್ಪ ತೀಕ್ಷ್ಣವಾಗಿ ಟೀಕೆ ಮಾಡುತ್ತಿದ್ದೆವು. ಆದರೆ ನಿಜವಾಗಿಯೂ ಕೂಡ ಏನಾದರೂ courage, conviction----- ಎಂದು ಹೇಳಬೇಕಾದರೆ ಒಂದು ಸಂಸ್ಥೆಯನ್ನು ಏರ್ಪಾಡು ಮಾಡಿ, ನಿವೇಶನಗಳನ್ನು ಕೊಡುವ ಕೆಲಸವನ್ನು

ಮಾಡಿದರೆ, ಮಾನ್ಯ ವೆಂಕಟೇಶ್ ಮತ್ತು ವಾಟಾಳ್‌ನಾಗರಾಜ್‌ರವರೂ ಸಹ ಇದೇ ಮಾತನ್ನು ಹೇಳಿದಂತೆ, ಇದರಲ್ಲಿ ಹಲವಾರು ಜನರು ಭಾಗಿಗಳಾಗುತ್ತಾರೆ. ಒಂದು ರೀತಿಯಲ್ಲಿ ಹೇಳಬೇಕಾದರೆ ಅವರಿಗೆ ನನ್ನ ಮೇಲೆ ಸ್ವಲ್ಪ ಕೋಪವಿತ್ತು. ಏಕೆಂದರೆ, ನಾನು ಎಷ್ಟೇ ಪ್ರಯತ್ನ ಮಾಡಿದರೂ ಸಹ ಈ ಹುಡುಗನನ್ನು ಕಾಂಗ್ರೆಸ್‌ಗೆ ಸೇರಿಸಿಕೊಳ್ಳಲು ಆಗುತ್ತಿಲ್ಲವಲ್ಲವೆಂದು. ನನಗೆ ಅವರು ಹೇಳಿದ ಒಂದು ಮಾತು ನೆನಪಿಗೆ ಬರುತ್ತಿದೆ. ಅದೇನೆಂದರೆ, ನನ್ನ ಜೇಬಿನಲ್ಲಿ ಮಂತ್ರಿಗಳ ಪೋರ್ಟ್ ಪೋಲಿಯೋ ಇದೆ, ನಿನಗೆ ಯಾವಾಗಬೇಕಾದರೂ ಮಂತ್ರಿ ಪದವಿಯನ್ನು ಕೊಡುತ್ತೇನೆ, ನೀನು ಕಾಂಗ್ರೆಸ್‌ಗೆ ಬಾ ಎಂದು ಕರೆದಿದ್ದರು. ನಾನು ಅವರ ಬಗ್ಗೆ ಅಷ್ಟು ತೀಕ್ಷಣವಾಗಿ ಟೀಕೆ ಮಾಡಿದರೂ ಕೂಡ, ಅವರ ವಿರುದ್ಧವಾಗಿ ಟೀಕೆ ಮಾಡಿದರೂ ಕೂಡ, ನಮ್ಮ ಕ್ಷೇತ್ರದ ಬಗ್ಗೆ ಏನಾದರೂ ಕೆಲಸ ಮಾಡಿಕೊಡಬೇಕೆಂದು ಕೇಳಿದಾಗ ಅವರು ಆ ಕ್ಷಣದಲ್ಲಿಯೇ ಅದನ್ನು ಮಾಡಿ ಕೊಡುತ್ತಿದ್ದರು. ಅಂಥ ದಿಟ್ಟ ವ್ಯಕ್ತಿ ಅವರಾಗಿದ್ದರು. ದಯಮಾಡಿ ಅಧಿಕಾರದಲ್ಲಿರುವ ತಮಗೆ ಪ್ರಾರ್ಥನೆ ಏನೆಂದರೆ ತಾವುಗಳೆಲ್ಲರೂ ಸಹ ಶ್ರೀಮಾನ್ ಗಂಡೂರಾವ್‌ರವರ ವಿಶೇಷತೆಯನ್ನು ಗುಣವನ್ನು ಕಲಿತುಕೊಳ್ಳಿ. ಏಕೆಂದರೆ let us not be custodian of all ಏನೋ ಆಕಾಶಬಿದ್ದ ಹಾಗೆ, ಅಧಿಕಾರದಲ್ಲಿ ಕುಳಿತು ತಕ್ಷಣ ಏನೋ ನಡೆಸಬೇಕು, ಎಲ್ಲವನ್ನೂ ತಿಳಿದುಕೊಳ್ಳಬೇಕು, ಅಧಿಕಾರಿಗಳನ್ನು ಕೇಳಬೇಕು ಎಂದು ವಿಳಂಬ ಮಾಡಬೇಡಿ. You will not be dictated by a Case worker or your Under Secretary for that matter When the need of the hour, is to fulfill the basic commitment to the society.. ಆ ಕ್ಷಣದಲ್ಲಿ ತೀರ್ಮಾನ ಮಾಡತಕ್ಕ ಕೆಚ್ಚೆದೆಯನ್ನು ತಾವುಗಳು ಉಳಿಸಿಕೊಳ್ಳಬೇಕು. ನಾವುಗಳೂ ಸಹ ತಮ್ಮ ಕೆಲವು ನಾಯಕರುಗಳಾದ ಧರ್ಮಸಿಂಗ್, ಶ್ರೀಕಂಠಯ್ಯನವರಿಂದ ಅಂಥ ಗುಣವನ್ನು ಕಲಿತುಕೊಂಡಿದ್ದೇವೆ. ಅಂಥ ಕೆಚ್ಚೆದೆಯ ತೀರ್ಮಾನ ಮಾಡುವ ನಾಯಕರಲ್ಲಿ ನಮ್ಮ ಕಡೆಯೂ ಸಹ 3-4 ಜನರು ಇದ್ದಾರೆ. ಅದರಲ್ಲಿ ಮುಖ್ಯವಾಗಿ ಶ್ರೀ ರಾಮಕೃಷ್ಣಹೆಗಡೆಯವರು. ಅವರೂ ಸಹ ಇಲ್ಲಿ ಮುಖ್ಯಮಂತ್ರಿಯಾಗಿದ್ದರು. ಅವರೂ ಸಹ ಆ ಕ್ಷಣದಲ್ಲಿಯೇ ಯುಕ್ತವಾದ ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದರು. ಬೆಳಿಗ್ಗೆ ಹೇಳಿದ ವಿಚಾರದ ಬಗ್ಗೆ ಸಂಜೆಯೊಳಗೆಯೇ ಆರ್ಡರ್ ಆಗುತ್ತಿತ್ತು. ಆದರೆ ಇವತ್ತು ಗಂಟೆಗಟ್ಟಲೆ, ದಿನಗಟ್ಟಲೆ, ವರ್ಷಗಟ್ಟಲೆ ಮತ್ತು ವಾರಗಟ್ಟಲೆ ಒಂದು ವಿಚಾರದ ಬಗ್ಗೆ ತೀರ್ಮಾನಕ್ಕಾಗಿ ಕಾಯಬೇಕಾದ ದೊಡ್ಡ ಲೋಪ ಸರ್ಕಾರದಲ್ಲಿ ಇದೆ. ತಾವು ಮಾನ್ಯ ಗುಂಡೂರಾವ್‌ರವರನ್ನು ನೆನಸಿಕೊಳ್ಳಬೇಕಾದರೆ ಮೊದಲು ಮಾನ್ಯ ಗುಂಡೂರಾವ್‌ರವರಂತೆ ಶೀಘ್ರ ತೀರ್ಮಾನ ತೆಗೆದುಕೊಳ್ಳುವ ಕೆಲಸವನ್ನು ಮಾಡಿ ಎಂದು ತಮಗೆ ಸಲಹೆಯನ್ನು ಕೊಡುತ್ತಿದ್ದೇನೆ. ಮತ್ತು ಮಾನ್ಯ ಗುಂಡೂರಾವ್‌ರವರಿಗೆ ಅತ್ಯಂತ ಪ್ರಿಯವಾಗಿದ್ದ ಕ್ರೀಡೆ ಎಂದರೆ ಫುಟ್‌ಬಾಲ್. ಆದ್ದರಿಂದ ಅವರು ಸ್ಥಾಪನೆ ಮಾಡಿದ ಫುಟ್‌ಬಾಲ್ ಅಸೋಸಿಯೇಷನ್‌ನ್ನು ಪೂರ್ಣ ಮಾಡಿ. ಇದು ನನ್ನ ಮತ್ತೊಂದು ಸಲಹೆ. ತಾವು ಅದನ್ನು ಪೂರ್ಣ ಮಾಡುವ ಬಗ್ಗೆ ಸಚಿವಸಂಪುಟವನ್ನು ಕರೆದು ಅದಕ್ಕಾಗಿ 10 ಲಕ್ಷ ರೂಪಾಯಿಗಳನ್ನು ನಿಯೋಜನೆ ಮಾಡಿದ್ದೇವೆ ಎಂದು ಹೇಳಿದರೆ ಸಾಕಾಗುವುದಿಲ್ಲ. ನಾಡಿದ್ದು ಬುಧವಾರ ಅವರ ಉತ್ತರಕ್ರಿಯೆ ನಡೆಯುವ ಮುನ್ನ we are really committed. If you have that courage and conviction, and if you are accepting our challenge... ಇವತ್ತು, ಆ ಸ್ಟೇಡಿಯಂ ಮುಕ್ತಾಯ ಮಾಡುತ್ತೇವೆ, ಅದಕ್ಕೆ 5-6 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದರೆ ಸಾಕಾಗುವುದಿಲ್ಲ, ಅದನ್ನು 6 ತಿಂಗಳೊಳಗೆ

ಮುಗಿಸಿ ಕೊಡುತ್ತೇವೆ ಎಂದು ಹೇಳಿದರೆ ಮಾತ್ರ ಅದು ಮಾನ್ಯ ಗುಂಡೂರಾವ್‌ರವರಿಗೆ ನಿಮ್ಮ ನಿಜವಾದಂಥ ಅಭಿಮಾನದ ಸಂಕೇತವಾಗುತ್ತದೆ. ಏಕೆಂದರೆ ಮಾನ್ಯ ಗುಂಡೂರಾವ್‌ರವರು ಕ್ರೀಡೆಗೆ ಮತ್ತು ಯುವಶಕ್ತಿಗೆ ಅತ್ಯಂತ ಹೆಚ್ಚಿನ ಬೆಂಬಲವನ್ನು ಕೊಟ್ಟಂಥವರು. ಒಂದು ಮಾತನ್ನು ಹೇಳುತ್ತೇನೆ, ತಾವು ಅದರ ಬಗ್ಗೆ ತಪ್ಪು ತಿಳಿದುಕೊಳ್ಳಬಾರದು. ತಾವು ಅವರ ಪ್ರತಿಮೆಯನ್ನು ಸ್ಥಾಪನೆ ಮಾಡುವ ಬಗ್ಗೆ ಹೇಳಿದ್ದೀರಿ. ಆ ಸಮಯದಲ್ಲಿ ನಾನು ಮದ್ರಾಸ್‌ನಲ್ಲಿ ಇದ್ದೆ. ನಾನು ಇಲ್ಲಿ ಯಾರ ಭಾವನೆಯನ್ನೂ ಕೂಡ ಟೀಕೆ ಮಾಡಲು ಹೋಗುತ್ತಿಲ್ಲ. ಈ ರೀತಿ ಪ್ರತಿಮೆಗಳನ್ನು ಮಾಡಿ ಅದರ ಮೇಲೆ ಕಾಗೇ, ಗೂಬೆ, ಕುಳಿತುಕೊಂಡು ಬೆಂಗಳೂರನ್ನು ಒಂದು ರೀತಿಯ ಮ್ಯಾಸಿಯಂ ರೀತಿ ಮಾಡಬೇಡಿ. ವಿಧಾನ ಸೌಧದ ಮುಂದೆ ಮಾನ್ಯ ಕೆಂಗಲ್ ಹನುಮಂತಯ್ಯನವರ ಪ್ರತಿಮೆ ಇದೆ, ಅದು ಬೇಕು, ಏಕೆಂದರೆ ಅವರು ವಿಧಾನಸೌಧವನ್ನು ಕಟ್ಟಿದಂಥವರು, ಆದರೆ ಆ ರೀತಿಯಲ್ಲಿ ಪ್ರತಿಮೆಗಳನ್ನು ಮಾಡಬೇಡಿ. ಅದರ ಬದಲಾಗಿ ಮಾನ್ಯ ಬಸವಲಿಂಗಪ್ಪನವರ, ಮಾನ್ಯ ದೇವರಾಜ ಅರಸುರವರ ಹೆಸರಿನಲ್ಲಿ ಯಾವುದಾದರೂ ಸಂಸ್ಥೆಗಳನ್ನು ಮಾಡಿ. ವಿರೋಧಪಕ್ಷದ ನಾಯಕರೂ ಮತ್ತು ನಾವೆಲ್ಲರೂ ಕೂಡ ಅದರಲ್ಲಿ ವಿಶೇಷವಾಗಿ ಭಾಗಿಗಳಾಗುತ್ತೇವೆ. ಆದ್ದರಿಂದ ಪ್ರತಿಮೆಗಳನ್ನು ಮಾಡುವುದು ಅಥವಾ ಯಾವುದಾದರೊಂದು ಕಟ್ಟಡಕ್ಕೆ ಅವರ ಹೆಸರನ್ನು ಇಡುವುದು ದಯವಿಟ್ಟು ಮಾಡಬೇಡಿ. ಆ ರೀತಿ ಮಾಡಿದರೆ ಒಂದು ರೀತಿಯ ಲೋಪವಾದಂತೆ ಆಗುತ್ತದೆ. ಒಬ್ಬ ವ್ಯಕ್ತಿಯ ವ್ಯಕ್ತಿತ್ವಕ್ಕೆ ಅವಮಾನವಾದಂತೆ ಆಗುತ್ತದೆ. ಆದ್ದರಿಂದ ಆ ರೀತಿ ಮಾಡಬೇಡಿ. ನಾನು ಫುಟ್‌ಬಾಲ್ ಸ್ಟೇಡಿಯಂ ಬಗ್ಗೆ ಏಕೆ ಹೇಳಿದೆ ಎಂದರೆ It is an eye-sore to the State...

ಮಾನ್ಯ ಗುಂಡೂರಾವ್‌ರವರಿಗೆ ಫುಟ್‌ಬಾಲ್ ಬಗ್ಗೆ ಅತ್ಯಂತ ಹೆಚ್ಚಿನ ಅಭಿಮಾನವಿತ್ತು, ಆ ಸ್ಟೇಡಿಯಂಗೆ 5-6 ಕೋಟಿ ರೂಪಾಯಿ ಖರ್ಚಾಗಬಹುದು, ಆದ್ದರಿಂದ ನಾಳೆ ಅಥವಾ ನಾಡಿದ್ದರೊಳಗೆ ಸಚಿವಸಂಪುಟದ ಸಭೆಯನ್ನು ಕರೆದು ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡು ಆಸ್ಟೇಡಿಯಂನ್ನು ಪೂರ್ಣಮಾಡಿದರೆ ನಾವುಗಳು ಮಾನ್ಯ ಗುಂಡೂರಾವ್‌ರವರಿಗೆ ಕೊಡತಕ್ಕ ನಮನವಾಗುತ್ತದೆಂದು ಈ ಮೂಲಕ ತಮ್ಮಲ್ಲಿ ಹೇಳಬಯಸುತ್ತೇನೆ.

ಶ್ರೀ ಎಂ. ಮಹದೇವ್(ನಂಜನಗೂಡು) : ಸನ್ಮಾನ್ಯ ಅಧ್ಯಕ್ಷರೆ, ಇಂದಿನ ಸಭೆಯಲ್ಲಿ ಮಂಡಿಸಿರತಕ್ಕಂತಹ ಗತಿಸಿದ ಈ ಮಹಾನ್ ವ್ಯಕ್ತಿಗಳು ಹಾಗೂ ಗತಿಸಿದ ಮಾಜಿ ಶಾಸಕರು, ಹಾಲಿ ಶಾಸಕರ ಬಗ್ಗೆ ಸಂತಾಪ ವ್ಯಕ್ತಪಡಿಸುತ್ತಾ ಮಾನ್ಯ ಗುಂಡೂರಾಯರ ನಿಧನದ ಬಗ್ಗೆ ಅತೀವ ದುಃಖವನ್ನು ವ್ಯಕ್ತಪಡಿಸುತ್ತಿದ್ದೇನೆ. ಕರ್ನಾಟಕ ರಾಜ್ಯ, ರಾಷ್ಟ್ರ ಒಬ್ಬ ಧೀಮಂತ ವ್ಯಕ್ತಿಯನ್ನು ಕಳೆದುಕೊಂಡಿದೆ. ನನ್ನ ಮತ್ತು ಅವರ ವೈಯಕ್ತಿಕ ಹಾಗೂ ರಾಜಕೀಯ ಸಂಬಂಧವಾಗಿ ಹೇಳುವುದಾದರೆ ನಾವಿಬ್ಬರೂ ಕಷ್ಟ ಸುಖಗಳಲ್ಲಿ ಭಾಗಿಗಳಾಗಿದ್ದೆವು. ಅವರು ರಾಜ್ಯದಲ್ಲಿ ಒಳ್ಳೆಯ ಆಡಳಿತವನ್ನು ನಡೆಸಿದ್ದಾರೆ. ಸ್ನೇಹಿತರುಗಳನ್ನು ಗುರುತಿಸಿದ್ದಾರೆ. ಅವರು ಬಹಳ ನಿಷ್ಠುರವಾದಿಗಳು ಏಕೆಂದರೆ ಸತ್ಯವನ್ನು ಮರೆಮಾಚದೆ, ಇದ್ದುದನ್ನು ಇದ್ದ ಹಾಗೆ ಹೇಳಿ ಬಹಳ ಜನರಿಗೆ ಅವರು ನಿಷ್ಠುರವಾದಿಗಳಾಗಿದ್ದರು. ಕಾಂಗ್ರೆಸ್ ಪಕ್ಷವನ್ನು ಕಟ್ಟುವಂತಹ ವೇಳೆಯಲ್ಲಿ ಇಂದಿರಾಗಾಂಧಿಯವರ ಜೊತೆಯಲ್ಲಿ ಹಗಲಿರುಳು ದುಡಿದರು ಅವರ ಕಷ್ಟ ಸುಖದಲ್ಲಿ ಭಾಗಿಗಳಾದರು. ರಾಷ್ಟ್ರಕ್ಕೆ ಒಳ್ಳೆಯ ಭವಿಷ್ಯ ಸಿಗಬೇಕಾದರೆ ನಮ್ಮ ಕಾಂಗ್ರೆಸ್ ಪಕ್ಷ ಬಲಯುತವಾಗಿರಬೇಕು ಇದರಿಂದ ಶ್ರೀಮತಿ ಇಂದಿರಾಗಾಂಧಿಯವರ ಕೈಯ್ಯನ್ನು ಬಲಪಡಿಸಬೇಕು ಅದಕ್ಕಾಗಿ ನಾನು ಯಾವಾಗಲೂ ಯಾವುದೇ ತ್ಯಾಗಕ್ಕೂ ಸಿದ್ಧವೆಂದು ಹೇಳುತ್ತಾ

ದೇಶಕ್ಕಾಗಿ ದುಡಿದರು. ನಾವು ಸಂಭಾಷಣೆಗೆ ಕುಳಿತಾಗ ರಾಷ್ಟ್ರದ ಚಿಂತನೆಯನ್ನು ರಾಜ್ಯದ ಚಿಂತನೆಯ ಬಗ್ಗೆ ಮಾತನಾಡುತ್ತಿದ್ದರು. ನಾವು ತಿಳಿದುಕೊಂಡಿರುವ ಹಾಗೆ ಅವರು ಯಾವತ್ತೂ ಅಧಿಕಾರಕ್ಕೆ ಅಂಟಿದವರು ಅಲ್ಲ. ಸ್ವಚ್ಛವಾಗಿ ಶುದ್ಧವಾದ ಆಡಳಿತವನ್ನು ದೇಶಕ್ಕೆ, ರಾಜ್ಯಕ್ಕೆ ಕೊಟ್ಟರು. ನಾವು ಏನು ತ್ಯಾಗ ಮಾಡಿ ಈ ಆಡಳಿತವನ್ನು ತೆಗೆದುಕೊಂಡಿದ್ದೇವೆ, ಈ ಆಡಳಿತಾಧಿಕಾರವನ್ನು ದೇಶಪ್ರೇಮವಿಟ್ಟುಕೊಂಡು ಸೇವೆ ಮಾಡಿದರೆ ಮಾತ್ರ ಈ ದೇಶಕ್ಕೆ ಒಳ್ಳೆಯದಾಗುತ್ತದೆಂದು ಪದೇ ಪದೇ ಹೇಳುತ್ತಿದ್ದರು. 1983ರಲ್ಲಿ ಕಾಂಗ್ರೆಸ್ ಪಕ್ಷ ಸೋತಿತು ಆಗ ಅವರೂ ಸೋತರು ನಾವಿಲ್ಲಿ ಗೆದ್ದು ಬಂದೆವು, ಆಗ ನಮಗೆಲ್ಲರಿಗೂ ನಮ್ಮ ನಾಯಕ ಸೋತಿದ್ದಾರೆ ನಮ್ಮ ಪಕ್ಷ ಸೋತಿದೆ ಎಂದು ನೋವಾಯಿತು. ನಾವಿಲ್ಲಿ ವಿಧಾನ ಸಭೆಯಲ್ಲಿ ಕೆಲಸ ಮಾಡಲಿಕ್ಕಾಗುವುದಿಲ್ಲವೆಂದಾಗ ನಮ್ಮನ್ನೆಲ್ಲಾ ಕ[illegible]ಕ್ಕೆ ಬಂದರೆ ಮಾತ್ರ ಸುಖವೆಂದು ತಿಳಿದುಕೊಳ್ಳಬೇಡಿ ವಿರೋಧ ಪಕ್ಷದಲ್ಲಿದ್ದುಕೊಂಡು [illegible] ಕೆಲಸ ಮಾಡಿ ರಾಜ್ಯಕ್ಕೆ ಒಳ್ಳೆ ಹೆಸರನ್ನು ತನ್ನಿ ಎಂದು ಹೇಳಿದರು. ಅವರ ಸೋಲನ್ನೂ ಅವರು ಚಿಂತನೆ ಮಾಡಲಿಲ್ಲ. ಜನ ನಮ್ಮನ್ನು ನಮ್ಮ ತಪ್ಪನ್ನು ಕಂಡು ಬಿಟ್ಟಿರಬಹುದು ಆದರೆ ನಾವು ನಮ್ಮ ತಪ್ಪನ್ನು ತಿದ್ದಿಕೊಳ್ಳೋಣ. ಈ ದೇಶಕ್ಕೆ ಒಳ್ಳೆಯದು ಮಾಡೋಣವೆಂದು ಹೇಳುತ್ತಿದ್ದರು. ಒಂದು ವರ್ಷವಾದನಂತರ ನಾನು ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆಂದು ನೀವು ಈ ಸಭೆಗೆ ಸದಸ್ಯರಾಗಿ ಬರಬೇಕು ಎಂದು ನಾನು ಪತ್ರಿಕೆಗಳಲ್ಲಿ ಹೇಳಿಕೆ ನೀಡಿದ್ದೆ. ಅದು ಡೆಕನ್‌ಹೆರಾಲ್ಡ್‌ನಲ್ಲಿ ಬಾಕ್ಸ್ ಐಟಂ ನಲ್ಲಿ ಬಂತು. ನನಗೆ ಫೋನ್ ಮಾಡಿ ಏಕೆ ಈ ನಿಲುವು ತೆಗೆದುಕೊಂಡಿದ್ದೀರಿ ಬನ್ನಿ ಮಾತನಾಡೋಣವೆಂದು ಹೇಳಿದರು. ಅದಕ್ಕೆ ನಾನು ಇಲ್ಲ ಬರುವುದಿಲ್ಲ ಇಲ್ಲಿಯ ಸದಸ್ಯತ್ವ ನನಗೆ ಬೇಕಾಗಿಲ್ಲವೆಂದು ಹೇಳಿದೆ. ಈ ಸಭೆಗೆ ನೀವು ಬರಬೇಕೆಂದು ಹೇಳಿದಮೇಲೆ ಮತ್ತೆ ಎರಡನೇ ಸಾರಿ ಫೋನ್ ಮಾಡಿ ನನ್ನನ್ನು ಕರೆಸಿಕೊಂಡು ನಿಮ್ಮ ನಿಲುವನ್ನು ನೀವು ಬದಲಾವಣೆ ಮಾಡಿಕೊಳ್ಳಿ ಎಂದು ನಮಗೆ ಸಮಾಧಾನ ಮಾಡಿದರು ಇದ್ದರೆ ಇಬ್ಬರೂ ಸದಸ್ಯರಾಗಿರಬೇಕು ಅಂತ ಹೇಳಿದರು. ಈಗ ನಿಮ್ಮ ಸದಸ್ಯತ್ವ ಹೋಗಿ ನಾನೊಬ್ಬನೇ ಈ ಸಭೆಗೆ ಪ್ರವೇಶ ಮಾಡುವುದರಲ್ಲಿ ಅರ್ಥವಿಲ್ಲ. ಇದ್ದರೆ ಇಬ್ಬರೂ ಸದಸ್ಯರಾಗಿರಬೇಕು ಎಂದು ಹೇಳಿದರು. ಅಂದರೆ ಅವರು ಅಷ್ಟು ಸ್ನೇಹಮಯಿ. ಅನಂತರ ಅವರು ಆಸ್ಪತ್ರೆಗೆ ಹೋಗುವುದಕ್ಕೆ 4 ತಿಂಗಳ ಮುಂಚೆ ನಮ್ಮನ್ನು ಕರೆಸಿಕೊಂಡು ಮಾತನಾಡಿದ್ದರು. ಈ ರಾಜ್ಯದಲ್ಲಿ ಆಡಳಿತ ಹೇಗೆ ನಡೆಯುತ್ತಿದೆ. ಒಬ್ಬರಿಗೊಬ್ಬರು ಯಾವರೀತಿ ಸಹಕರಿಸಿಕೊಂಡು ಹೋಗಬೇಕು, ಯಾವರೀತಿ ಪಕ್ಷವನ್ನು ಬಲಪಡಿಸಬೇಕು. ಜನತೆಗೆ ಒಳ್ಳೆಯ ಆಡಳಿತವನ್ನು ಯಾವರೀತಿಯಾಗಿ ಕೊಡಬೇಕು, ಯಾವರೀತಿ ಜನಸಾಮಾನ್ಯರ ಬಗ್ಗೆ ಚಿಂತನೆ ಮಾಡಬೇಕೆಂದು ಅವರು ಹೇಳಿದರು. ಆಗಲೂ ಕೂಡ ನಾನು ಅವರಲ್ಲಿ ಮನವಿ ಮಾಡಿಕೊಂಡು ಎರಡನೇಸಾರಿ ನಾನು ನನ್ನ ರಾಜೀನಾಮೆ ಕೊಡುತ್ತೇನೆ. ನೀವು ಬಂದು ಬೇಕಾದರೆ ಸರಿಪಡಿಸಿ. ಆದರೆ ನನಗೆ ಈ ಸದಸ್ಯತ್ವ ಮುಖ್ಯವಲ್ಲ. ನಮ್ಮಲ್ಲಿ ಮಧುರ ಬಾಂಧವ್ಯವನ್ನು ಬೆಳೆಸಬೇಕಾದರೆ ನೀವು ಒಬ್ಬರೇ ಸಮರ್ಥ ವ್ಯಕ್ತಿ ಎಂದು ಹೇಳಿದರೆ ಅವರಲ್ಲಿ ಗುಂಪುಗಾರಿಕೆ ಇರಲಿಲ್ಲ. ಎಲ್ಲ ಗುಂಪನ್ನೂ ಒಟ್ಟಿಗೇ ಕರೆದುಕೊಂಡು ಹೋಗಿ ಸಮಾಧಾನ ಮಾಡುತ್ತೀರಿ. ಎಲ್ಲರೂ ನಿಮ್ಮಲ್ಲಿ ಅಭಿಮಾನವನ್ನು ಇಟ್ಟುಕೊಂಡಿದ್ದಾರೆಂದು ನಾನು ಹೇಳಿದಾಗ ಅವರು ಹೇಳಿದರು; ಈಗ ಆ ಕೆಲಸವನ್ನು ಮಾಡುವುದಕ್ಕೆ ಹೋಗಬೇಡಿ. ಕಾಲಬಂದಾಗನೋಡೋಣ ಎಂದು ಹೇಳಿದರು. ನಾನು ವಾಸ್ತವ ವಿಚಾರವನ್ನು ಈ ಸದನದ ಮುಂದಿಡುತ್ತಿದ್ದೇನೆ. ಅವರು ಯಾವಾಗಲೂ ದೀನದಲಿತರ ಬಗ್ಗೆ, ಬಡವರ ಬಗ್ಗೆ ಚಿಂತನೆ

ಮಾಡುತ್ತಿದ್ದರು. ಈ ದೇಶದ ದೀನದಲಿತರ ಏಳಿಗೆಯ ಬಗ್ಗೆ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಅವರು ಪದೇ ಪದೇ ಒತ್ತಿ ಒತ್ತಿ ಹೇಳುತ್ತಿದ್ದರು. ಆ ಧೀಮಂತ, ಸ್ನೇಹಮಯಿ ಇಂದು ನಮ್ಮ ಮುಂದಿಲ್ಲ. ವೈಯಕ್ತಿಕವಾಗಿ ಇಂದು ನನಗೆ ಅತೀವ ದುಃಖವಾಗುತ್ತಿದೆ. ಈಗ ನಮಗೆ ಆಗಿರುವ ಈ ನಷ್ಟವನ್ನು ಯಾವರೀತಿ ತುಂಬಿಕೊಳ್ಳಬೇಕೆಂದು ತೋಚುತ್ತಿಲ್ಲ.ಇದರಿಂದ ನಾವು ಚೇತರಿಸಿಕೊಳ್ಳುವುದೇ ಕಷ್ಟವಾಗಿದೆ. ನಮ್ಮಿಬ್ಬರಲ್ಲಿ ಅಂಥ ಒಂದು ಮಧುರ ಸ್ನೇಹ ಇತ್ತು. ನಾನು ಒಂದು ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ದೀನದಲಿತರ ಬಗ್ಗೆ, ಬಡವರ ಬಗ್ಗೆ ಯಾವ ಮಹಾನ್ ವ್ಯಕ್ತಿ ಚಿಂತನೆ ಮಾಡುತ್ತಿದ್ದರು, ಆ ಮಹಾನ್ ವ್ಯಕ್ತಿ ಮಾನ್ಯ ಗುಂಡೂರಾಯರು ಅವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಒಂದು ಕಲ್ಯಾಣ ಮಂಟಪವನ್ನು ನಿರ್ಮಾಣ ಮಾಡಿಸಬೇಕು. ಏಕೆಂದರೆ, ಈ ಬೆಂಗಳೂರಿನಲ್ಲಿ ಲಕ್ಷಾಂತರ ಜನ ಬಡವರು ವಾಸಿಸುತ್ತಿದ್ದಾರೆ. ಅವರು ಯಾವುದೇ ಶುಭ ಕಾರ್ಯಗಳನ್ನು ಮಾಡಲು ಛತ್ರಗಳು ಸಿಕ[illegible]ರು ಜನ ಕುಳಿತುಕೊಳ್ಳುವಷ್ಟು ಜಾಗವನ್ನು ಅವರಿಗೆ ಯಾರೂ ಕೊಡುವುದಿಲ್ಲ. ಬಿ[illegible]ತ್ತು ಅವರು ಶುಭ ಕಾರ್ಯಗಳನ್ನು ಮಾಡುತ್ತಿದ್ದಾರೆ. ಇಂಥ ದೀನದಲಿತರಿಗೆ ಸಹಾ[illegible]ದರೆ, ಅವರು ಯಾವಾಗಲೂ ಇವರನ್ನು ನೆನೆಸಿಕೊಳ್ಳಬೇಕಾದರೆ, ಶುಭ ಸಮಾರಂಭಗಳನ್ನು [illegible]ದರೆ, ಮಾನ್ಯ ಗುಂಡೂರಾಯರ ಹೆಸರಿನಲ್ಲಿ ಒಂದು ಕಲ್ಯಾಣ ಮಂದಿರವನ್ನು ಸ್ಥಾಪನೆ ಮಾಡಿದರೆ ದಿನನಿತ್ಯ ಸಾವಿರಾರು ಜನ ಬಡವರಿಗೆ, ದೀನದಲಿತರಿಗೆ ಸಹಾಯವಾಗುತ್ತದೆ. ಗುಂಡೂರಾಯರನ್ನು ಅವರು ನೆನಸಿಕೊಳ್ಳಲು ಅವಕಾಶವಾಗುತ್ತದೆಂಬ ಈ ಒಂದು ಸಲಹೆಯನ್ನು ತಮಗೆ ಕೊಟ್ಟು ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಜೈ ಹಿಂದ್.

ಶ್ರೀ ಕೆ. ಶಿವಮೂರ್ತಿ (ಭರಮಸಾಗರ):- ಸನ್ಮಾನ್ಯ ಸಭಾಧ್ಯಕ್ಷರೇ, ಶ್ರೀಮಾನ್ ಗುಂಡೂರಾಯರು ಇಷ್ಟುಬೇಗ ನಮ್ಮನ್ನು ಅಗಲಿ ಹೋಗುತ್ತಾರೆಂದು ಯಾರೂ ಕೂಡ ಅಂದುಕೊಂಡಿರಲಿಲ್ಲ. ಆದರೆ ವಿಧಿಯ ಮುಂದೆ ನಾವು ಯಾರೂ ಕೂಡ ಅಂದುಕೊಂಡಿರಲಿಲ್ಲ. ಆದರೆ ವಿಧಿಯಮುಂದೆ ನಾವು ಯಾರೂ ಸಮರಲ್ಲ. ಸಾವು ಯಾವ ಸಮಯಕ್ಕೆ ಯಾರಿಗೆ ಬರುತ್ತದೆಂಬುದನ್ನು ಹೇಳವುದಕ್ಕಾಗುವುದಿಲ್ಲ. ಮಾನ್ಯ ಗುಂಡೂರಾಯರು, ಧೃಢಕಾಯವಾದ ದೇಹ, ಅಂಥ ಆರೋಗ್ಯವಂತ ವ್ಯಕ್ತಿ ಅತಿ ಚಿಕ್ಕ ವಯಸ್ಸಿನಲ್ಲೇ ಈ ಕರ್ನಾಟಕದ ಮುಖ್ಯ ಮಂತ್ರಿಯಾಗಿ ಕೆಲಸವನ್ನು ನಿರ್ವಹಿಸಿದ್ದರು. ನಾವು ರಾಜಕಾರಣದಲ್ಲಿ ಎರಡು ರೀತಿಯ ರಾಜಕಾರಣವನ್ನು ನೋಡಿದ್ದೇವೆ. ಮೊದಲನೆಯದು ನಯಸ್ಸಾಗಿ ಮಾತನಾಡಿ, ಬೆಣ್ಣೆ ಹಚ್ಚಿ, ತುಪ್ಪ ಸವರಿ, ರಾಜಕಾರಣಿಗಳನ್ನೂ ಪುಸಲಾಯಿಸಿ ಮಾಡತಕ್ಕದ್ದು. ಎರಡನೆಯದು ಎಂದರೆ, ನೇರವಾಗಿ ಯಾವುದೇ ವಿಷಯವನ್ನಾಗಲಿ ವಾಸ್ತವಿಕವಾಗಿ ಇದ್ದುದನ್ನು ಇದ್ದಹಾಗೇ ಹೇಳಿ ಲೋಕನಿಷ್ಠುರವಾಗಿ ಸಮಾಜವನ್ನು ಜನತೆಯನ್ನು ಎದುರುಹಾಕಿಕೊಳ್ಳತಕ್ಕದ್ದು. ಮಾನ್ಯ ಗುಂಡೂರಾಯರು ಎರಡನೇ ರಾಜಕಾರಣದಲ್ಲಿ ನಮ್ಮ ಕರ್ನಾಟಕದಲ್ಲಿ ಕೆಲಸವನ್ನು ಮಾಡಿದ್ದಾರೆ. ಅವರು ಬೆಳೆದು ಬಂದ, ಪರಿಸರವನ್ನು ಗಮನಿಸಿದರೆ ಮಾನ್ಯ ಗುಂಡೂರಾಯರು ಒಬ್ಬ ಸಾಮಾನ್ಯ ವ್ಯಕ್ತಿಯಾಗಿ, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ, ರಾಷ್ಟ್ರಮಟ್ಟದಲ್ಲಿ ಯುವ ರಾಜಕಾರಣಿಯಾಗಿ ಬೆಳೆಯುವಂಥ ವ್ಯಕ್ತಿತ್ವವುಳ್ಳವರಾಗಿದ್ದರು. ಮಾನ್ಯ ಗುಂಡೂರಾಯರ ರಾಜಕಾರಣ ಬಹಳ ಒರಟು ಎಂದು ಕೆಲವರು ಮಾತನಾಡಿಕೊಳ್ಳುತ್ತಿದ್ದುದನ್ನು ನಾನು ಕೇಳಿದ್ದೇನೆ. ಆದರೆ ಅವರ ಹೃದಯ ಸೀಮಂತಿಕೆ ಎಂದರೆ, ಯಾವುದೇ ವಿಚಾರವನ್ನಾಗಲಿ ಇದ್ದುದನ್ನು

ಇದ್ದ ಹಾಗೆ ನೇರವಾಗಿ ಹೇಳುವಂಥ ವ್ಯಕ್ತಿ ಮಾನ್ಯ ಗುಂಡೂರಾಯರು ಆಗಿದ್ದರು. ಶ್ರೀಮಾನ್ ಗುಂಡೂರಾವ್‌ರವರು ಮುಖ್ಯಮಂತ್ರಿಯಾದಾಗ ಮತ್ತು ಸದನದ ಸದಸ್ಯರು ಆದಾಗ ನಾವು ಸದಸ್ಯರಾಗಿರಲಿಲ್ಲ. ನಾನು ವಿದ್ಯಾರ್ಥಿಯಾಗಿ ಪತ್ರಿಕೆ ಓದುತ್ತಿದ್ದೆನು. ನಾನು ವಿದ್ಯಾರ್ಥಿಗಳ ಮುಖಂಡನಾಗಿದ್ದಾಗ ಅವರನ್ನು ನಾವು ಅಹ್ವಾನಿಸಿದ್ದೆವು. ಆ ಸಂದರ್ಭದಲ್ಲಿ ಅವರು ಭಾಷಣವನ್ನು ಮಾಡುವಂಥದನ್ನು ಕೇಳಿದ್ದೆನು. ಬಹಳ ನೇರವಾಗಿ, ಸರಳವಾದ ರೀತಿಯಲ್ಲಿ ಇದ್ದುದ್ದನ್ನು ಇದ್ದಹಾಗೆ ಮಾತನಾಡುವಂತಹ ವ್ಯಕ್ತಿತ್ವ ಶ್ರೀಮಾನ್ ಗುಂಡುರಾವ್‌ರವರದು. ಈಗಿನ ಪೀಳಿಗೆಯವರು ಗುಂಡೂರಾವ್‌ರವರದು ಒರಟುದ ರಾಜಕೀಯ ಎಂದು ಹೇಳಿಕೊಂಡರೂ ಸಹ ಅವರ ನೇರವಾದ ರಾಜಕೀಯವನ್ನು ನಾವು ಒಪ್ಪತಕ್ಕಂಥದ್ದು. ಸಮಾಜ ಮತ್ತು ದೇಶ ಕೊನೆಯದಾಗಿ ಅದನ್ನು ಒಪ್ಪಿಕೊಳ್ಳುತಕ್ಕಂಥದ್ದು, ಇದು ಸತ್ಯ, ವಸ್ತುಸ್ಥಿತಿ ಎಂದು ಕೊನೆಯದಾಗಿ ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಆ ಒಂದು ರೀತಿಯಲ್ಲಿ ರಾಜಕೀಯ ಮಾಡಿರುವಂತಹ ವ್ಯಕ್ತಿತ್ವ, ಶ್ರೀಮಾನ್ ಗುಂಡೂರಾವ್‌ರವರ ಕಾಲದಲ್ಲಿ ವಿಧಾನಸೌಧದ ಮುಂದುಗಡೆ ದೀನದಲಿತರ ದುರ್ಬಲರಿಗೆ ಮತ್ತು ಸಂವಿಧಾನದ ಶಿಲ್ಪಿ ಆಗಿರುವಂತಹ ಡಾ.ಬಾಬಾ ಅಂಬೇಡ್ಕರ್‌ರವರ ಪ್ರತಿಮೆಯನ್ನು ಮಾಡಿಸಿದರು. ಆ ಕೀರ್ತಿಯನ್ನು ಶ್ರೀಮಾನ್ ಗುಂಡೂರಾಯರು ಇವತ್ತು ತೆಗೆದುಕೊಂಡು ಹೋಗಿದ್ದಾರೆ. ಅವರು ಹಲವಾರು ಕಾರ್ಯಕ್ರಮಗಳನ್ನು ಮಾಡಲಿಕ್ಕೆ ಹೊರಟಿದ್ದರು ಮತ್ತೆ ಅವರ ಧೈರ್ಯವನ್ನು ನಾನು ಸ್ವಲ್ಪ ಹೇಳಬೇಕಾಗುತ್ತದೆ. ನಾವು ಪತ್ರಿಕೆಗಳಲ್ಲಿ ಮಾತನಾಡುವಾಗ ಸ್ವಲ್ಪಹಿಂದೆ ಮುಂದೆ ನೋಡುತ್ತೇವೆ. ಆದರೆ ಶ್ರೀಮಾನ್ ಗುಂಡೂರಾಯರು ಪತ್ರಿಕೆಗಳಿಗೆ ನೇರವಾಗಿ ಹೇಳಿಬಿಡುತ್ತಿದ್ದರು. ಇದರಿಂದ ಏನು ತೋರಿಸುತ್ತದೆ ಎಂದರೆ ಯಾವುದು ಸರಿ ಯಾವುದು ತಪ್ಪು ಎಂದು ವಿಮರ್ಶೆ ಮಾಡುವುದಿಲ್ಲ. ಆದರೆ ಅವರ ಧೈರ್ಯ, ಒಂದು ರೀತಿಯ ಒರಟುತನವನ್ನು ರೂಢಿಸಿಕೊಂಡು ಬಂದಿದ್ದರು ಮತ್ತು ಕೆಲವರಿಗೆ ನೇರವಾಗಿ ಮಾತನಾಡುತ್ತಿದ್ದರು. ಕೆಲವು ವಿಚಾರಗಳಲ್ಲಿ ಹಿಂದುಮುಂದೆ, ಮುಚ್ಚುಮರೆ ಇಲ್ಲದಿರತಕ್ಕಂಥ ರಾಜಕೀಯವನ್ನು ಮಾಡಿ ಬಿಟ್ಟುಹೋಗಿರತಕ್ಕಂಥ ಗುಂಡೂರಾವ್‌ರವರ ವ್ಯಕ್ತಿತ್ವವನ್ನು ಈ ಸಂದರ್ಭದಲ್ಲಿ ನಾವು ನೆನಸಿಕೊಳ್ಳಬೇಕು. ಶ್ರೀಮಾನ್ ಗುಂಡೂರಾವ್‌ರವರ ಸವಿ ನೆನಪಿಗಾಗಿ ಅವರ ಕ್ಯಾಬಿನೆಟ್‌ನಲ್ಲಿ ಮಂತ್ರಿಗಳಾಗಿದ್ದಂಥ ಶ್ರೀಮಾನ್ ವೀರಪ್ಪಮೊಯಿಲಿಯವರು ಇವತ್ತು ಮುಖ್ಯಮಂತ್ರಿಗಳು ಆಗಿದ್ದಾರೆ. ಶ್ರೀಮಾನ್ ಗುಂಡೂರಾಯರ ಹೆಸರಿನಲ್ಲಿ ಅವರಿಗೆ ಅತ್ಯುತ್ತಮವಾದ ಕಾರ್ಯಕ್ರಮಗಳು ಏನಿವೆಯೋ ಅದನ್ನು ಕಾರ್ಯಗತ ಮಾಡಬೇಕು, ಯುವಕರಾಗಿ ಕೆಲಸ ಮಾಡಿದ್ದಾರೆ. ಕ್ರೀಡೆಯಲ್ಲಿ ಬಹಳ ಆಸಕ್ತಿ ತೆಗೆದುಕೊಂಡಿರತಕ್ಕಂಥವರಾಗಿದ್ದಾರೆ; ಮತ್ತೆ ಅವರು ಕ್ರೀಡೆ, ಸಂಸ್ಕೃತಿ ಇಲಾಖೆಯಲ್ಲಿ ಇದ್ದಾಗ ಸ್ವತಃ ಅವರೇ ನಮ್ಮ ಜೊತೆಗೆ ನೃತ್ಯ ಮಾಡಿದ್ದಾರೆ. ಎನ್.ಸಿ.ಸಿ. ಡೇಗೆ ಅವರು ಬಂದಿದ್ದಾಗ ಕೂರ್ಗಿ ಹಾಡನ್ನು ಹಾಡಿ ನಮ್ಮ ಜೊತೆಗೆ ನೃತ್ಯ ಮಾಡಿದ್ದಾರೆ. ನೃತ್ಯ ಮಾಡದೆ ಇರುವವರನ್ನು ನೃತ್ಯ ಮಾಡಿಸಿದ್ದಾರೆ. ಸ್ವಿಮಿಂಗ್ ಪೂಲ್ ಉದ್ಘಾಟನೆ ಮಾಡಿ ಬಹಳಷ್ಟು ಕಾಂಟ್ರೆವರ್ಸಿಸ್‌ಗೆ ಒಳಗಾದರು. ಅವರ ವ್ಯಕ್ತಿತ್ವ ಮತ್ತು ಅಚ್ಚುಮೆಚ್ಚಿನ ಕಾರ್ಯಕ್ರಮ ಅವರ ಹೆಸರಿನಲ್ಲಿ ನಡೆಯಲಿ ಎಂದು ಹೇಳುತ್ತೇನೆ. ಕ್ರೀಡಾ ಜಗತ್ತು ಮತ್ತು ಕ್ರೀಡೆ ಅವರ ಹೆಸರಿನಲ್ಲಿ ನಡೆಯುವಹಾಗೆ ಅವರ ಕಟ್ಟಡಗಳಿಂದ ಈ ಸ್ಪೋರ್ಟ್ಸ್ ಕಾರ್ಯಕ್ರಮ ಏನಿದೆಯೋ ಅದು ಅವರ ಹೆಸರಿನಲ್ಲಿ ನಡೆಯಲಿ ಎಂಬ ಸಲಹೆಯನ್ನು ಸರ್ಕಾರದ ಮುಂದೆ ಇಡುತ್ತೇನೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕು. ಇನ್ನೊಬ್ಬ ಮಾನ್ಯ ಸದಸ್ಯರು ಆದ ಶ್ರೀಮಾನ್ ಜಿ.ಎಸ್.

ಆಚಾರ್‌ರವರು ನಮ್ಮ ಜೊತೆಯಲ್ಲಿಲ್ಲ. ಇವರು ಎಲೆ ಅಡಿಕೆಯನ್ನು ಜೊತೆಯಲ್ಲೇ ತರುತ್ತಿದ್ದರು ಮತ್ತು ನಮಗೂ ಕೊಡುತ್ತಿದ್ದರು. ಅವರು ಇಪ್ಪತ್ತನಾಲ್ಕು ಗಂಟೆಗಳ ಕಾಲವೂ ತಮ್ಮ ಜೊತೆಯಲ್ಲಿ ಎಲೆ ಅಡಿಕೆಯನ್ನು ಇಟ್ಟುಕೊಂಡು ಹೋಗುತ್ತಿದ್ದರು. ಅವರು ಎಷ್ಟು ಸರಳವಾಗಿದ್ದರು ಎಂದರೆ ಇಲ್ಲಿಂದ ಎಲ್.ಹೆಚ್.ಗೆ ಹೋಗಬೇಕಾದರೆ ಕಾರಿನಲ್ಲಿ ಹೋಗುತ್ತಿರಲಿಲ್ಲ; ನಡೆದುಕೊಂಡು ಹೋಗುತ್ತಿದ್ದರು. ಅಂತಹ ವ್ಯಕ್ತಿತ್ವ ಉಳ್ಳ ವ್ಯಕ್ತಿ ಇಂದು ಈ ಸಭೆಯಲ್ಲಿ ಇಲ್ಲ. ಶ್ರೀಮಾನ್ ಜನರಲ್ ಕಾರ್ಯಪ್ಪನವರು ಬಹಳ ಅಪ್ರತಿಮ ರಾಷ್ಟ್ರಾಭಿಮಾನಿ ಚರಿತ್ರೆಯಲ್ಲಿ ನಾವು ಇಂಥವರನ್ನು ಮುಂದೆ ನೋಡುತ್ತೇವೆಯೊ ಅಥವಾ ಇಲ್ಲವೊ, ಎರಡನೆಯ ಮಹಾಯುದ್ಧದಲ್ಲಿ ಭಾಗವಹಿಸಿರತಕ್ಕದ್ದು ನಮ್ಮ ರಾಷ್ಟ್ರದ ಸೇನಾದಂಡನಾಯಕರಾಗಿ ಕೆಲಸ ಮಾಡಿರತಕ್ಕಂಥ ಇವರು ತಮ್ಮ ಇಳಿ ವಯಸ್ಸಿನಲ್ಲೂ ಹಣ್ಣು ಹಣ್ಣು ಮುದುಕರಾಗಿರುವಂತಹ ಸಂದರ್ಭದಲ್ಲೂ ಅವರು ಸಭೆಗೆ ಬಂದಾಗ ಯಾರಾದರೂ ರಾಷ್ಟ್ರಗೀತೆಯನ್ನು ಹೇಳುವಂತಹ ಸಂಧರ್ಭದಲ್ಲಿ ಎದ್ದುನಿಲ್ಲದಂತಹ ಸಂದರ್ಭದಲ್ಲಿ ಅವರು ಅವರನ್ನು ಎಬ್ಬಿಸುತ್ತಿದ್ದರು. ಚಿತ್ರದುರ್ಗಕ್ಕೆ ಶ್ರೀಮಾನ್ ಕಾರ್ಯಪ್ಪನವರು ಬಂದಿದ್ದಾಗ ಶ್ರೀಮಾನ್ ನಿಜಲಿಂಗಪ್ಪನವರು ಎದ್ದು ನಿಲ್ಲಲಿಲ್ಲ. ಆಗ ನಿಜಲಿಂಗಪ್ಪ ಪ್ಲೀಸ್ ಗೆಟ್ ಅಪ್ ಎಂದರು. ಅವರು ಹಣ್ಣು ಹಣ್ಣು ಮುದುಕರು ಆದರೂ ಅವರನ್ನು ಎಬ್ಬಿಸಿದರು. ಅವರಿಗಿದ್ದ ಧೈರ್ಯ ಮತ್ತು ರಾಷ್ಟ್ರಗೀತೆಯಲ್ಲಿದ್ದ ಅಭಿಮಾನ ಇಂತಹ ವ್ಯಕ್ತಿತ್ವ ಮತ್ತು ರಾಷ್ಟ್ರದ ಬಗ್ಗೆ ಅವರ ಅನಿಸಿಕೆ ವ್ಯಕ್ತಿತ್ವ ಇದ್ದಂತಹ ವ್ಯಕ್ತಿ ಶ್ರೀಮಾನ್ ಜನರಲ್ ಕಾರ್ಯಪ್ಪನವರು, ಇಂತಹ ವ್ಯಕ್ತಿಗಳೆಲ್ಲರೂ ನಮ್ಮನ್ನು ಅಗಲಿ ಹೋಗಿದ್ದಾರೆ. ಅವರೆಲ್ಲ ಮುಂದೆ ಹೋಗುತ್ತಾರೆ ನಾವು ಹಿಂದೆ ಹೋಗುತ್ತೇವೆ. ಇದು ಯಾರಿಗೂ ತಪ್ಪಿದ್ದಲ್ಲ. ಆದಕ್ಕೋಸ್ಕರ ಅವರು ಮಾಡಿರುವಂತಹ ಕೆಲಸ, ಅವರ ವ್ಯಕ್ತಿತ್ವ, ಅವರ ವರ್ಣನೆಯನ್ನು, ಅವರ ಗುಣಗಾನವನ್ನು ಇವತ್ತು ನಾವು ಮಾಡಬೇಕಾಗುತ್ತದೆ. ಶ್ರೀಮಾನ್ ಗುಂಡೂರಾಯರ ಬಗ್ಗೆ ನಮ್ಮ ಸರ್ಕಾರದವರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಹೇಳಿ, ಈ ಸಂತಾಪ ಸೂಚಕ ಸಂದೇಶವನ್ನು ಅವರ ಕುಟುಂಬಕ್ಕೆ ಕಳುಹಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ :- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಗಮನಕ್ಕೆ ಒಂದು ವಿಚಾರವನ್ನು ಹೇಳಬಯಸುತ್ತೇನೆ. ನಾಳೆ ಸುಮಾರು 11-00 ಗಂಟೆಗೆ ಬ್ರಿಟಿಷ್ ಏರ್‌ವೇಸ್‌ನಲ್ಲಿ ಗುಂಡೂರಾವ್‌ರವರ ಮೃತದೇಹ ಬೊಂಬಾಯಿಗೆ ಬರುತ್ತದೆ. ನಾವು ಒಂದು ಸ್ಪೆಷಲ್ ಫ್ಲೈಟ್ ಮಾಡಿದ್ದೇವೆ. ಅದರ ಪ್ರಕಾರ ಸಾಧಾರಣವಾಗಿ ಎರಡು ಎರಡೂವರೆ ಗಂಟೆಗೆ ಬೆಂಗಳೂರನ್ನು ಅದು ತಲುಪುತ್ತದೆ. ಆಮೇಲೆ ಮುಂದಿನ ಕಾರ್ಯಕ್ರಮಗಳ ವಿಚಾರದ ಬಗ್ಗೆ ಅವರ ಕುಟುಂಬದ ಸದಸ್ಯರ ಜೊತೆಯಲ್ಲಿ ಸಮಾಲೋಚನೆ ಮಾಡಿ ನಾವು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು :- ಸರಿಯಾಗಿ ಮಾಹಿತಿ ಬರದಿದ್ದಕ್ಕೆ, ಶ್ರೀ ಬಾಬುಸಾಹೇಬ್ ಪಾಟೀಲ್ ಏಕಾಂಬಿಕರಪ್ಪ ಮಾಜಿಶಾಸಕರು ದಿನಾಂಕ 4-8-93ರಂದು ದೈವದೀನರಾದರೆಂದು ತಿಳಿಸಲು ವಿಷಾಧಿಸುತ್ತೇನೆ. ಶ್ರೀಯುತರು ಬೀದರ್ ಜಿಲ್ಲೆಯ ಔರಾದ್ ಕ್ಷೇತ್ರದಿಂದ 1972ರಲ್ಲಿ ಆಯ್ಕೆಯಾಗಿದ್ದರು. ಶ್ರೀಯುತರು ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರಾಗಿದ್ದರು, ಹಾಗೂ ಹಲವಾರು ಸಂಘಸಂಸ್ಥೆಗಳಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ. ಈಗ ಈ ಎಲ್ಲಾ ಮಹನೀಯರ ಗೌರವಾರ್ಥವಾಗಿ ಮಾನ್ಯ ಸದಸ್ಯರೆಲ್ಲರು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.